
ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಸೆಪ್ಟೆಂಬರ್-೨೦೦೪ ಸಂಚಿಕೆ-೨



ಶಿಕ್ಷಣ ತಜ್ಞ ಸಂತ ವಿನೋಬಾ

ಚಿಂತಕರ ಶೈಕ್ಷಣಿಕ ಚಿಂತನೆಗಳು

ಈ ಸಂಚಿಕೆಯಲ್ಲಿ

1. ಚಿಂತಕರ ಶೈಕ್ಷಣಿಕ ಚಿಂತನೆಗಳು

–ಸುರೇಂದ್ರ ಕೌಲಗಿ

ಪ್ರತಿವರ್ಷವೂ ನಮ್ಮ ದೇಶ ಸೆಪ್ಟೆಂಬರ್ ೫ ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದರ ಮೂಲಕ ಶಿಕ್ಷಣದ ಪ್ರಸ್ತುತ ಸಮಸ್ಯೆಗಳತ್ತ ಗಮನವನ್ನು ಸೆಳೆಯಲು ಪ್ರಯತ್ನಿಸುತ್ತಿದೆ. ಇಂಥ ಒಂದು ಮಹತ್ತರ ಸಂದರ್ಭದಲ್ಲಿ ವಿವಿಧ ಚಿಂತಕರ ಶಿಕ್ಷಣ ವಿಚಾರಗಳಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸಾಧ್ಯವೆಂದು ಈ ಲೇಖನದಲ್ಲಿ ಪ್ರತಿಪಾದಿಸಲಾಗಿದೆ. ಪುಟ–೩

2. ಸಿದ್ದವನಹಳ್ಳಿ ಕೃಷ್ಣಶರ್ಮ ಶತಾಬ್ದಿ : ಒಂದು ನಮನ

–ನೀಲತ್ತಹಳ್ಳಿ ಕಸ್ತೂರಿ

ವಾಮನಮೂರ್ತಿಯಂತಿದ್ದ ಸಿದ್ದವನಹಳ್ಳಿ ಕೃಷ್ಣಶರ್ಮ ಗಾಂಧೀಯುಗದ ಮತ್ತು ಅನಂತರದ ಶ್ರೇಷ್ಠ ಕನ್ನಡಸಾಹಿತಿ. ಅವರ ಜನ್ಮಶತಾಬ್ದಿಯ ಅರುಣೋದಯದ ಕಾಲದಲ್ಲಿ ಕೃಷ್ಣಶರ್ಮರ ಬಹುಮುಖಿ ವ್ಯಕ್ತಿತ್ವ ಈಲೇಖನದಲ್ಲಿ ಚಿತ್ತಾಕರ್ಷಕವಾಗಿ ಮೂಡಿದೆ. ಪುಟ–೧೧

3. ಪ್ರೀತಿ ಮತ್ತು ಸಾವು

–ಟಿ.ಎಸ್. ಗೊರವರ

ಸಮಾಜ ಬದುಕುವುದು ಮುಖ್ಯವಾಗಿ ಪ್ರೀತಿಯಿಂದಲೆ. ಅದರ ಅಗತ್ಯತೆ ಇಂದು ಅತಿ ಹೆಚ್ಚಾಗಿದೆ ಎಂಬುದು ಲೇಖಕರ ಅಭಿಮತ. ಪುಟ–೧೫

4. ವಿಧವಾ ವಿವಾಹ ಪ್ರವರ್ತಕ : ಗಡಿಯಾರಂ ರಾಮಕೃಷ್ಣಶರ್ಮ

–ಕೆ.ಆರ್. ಮೋಹನ್

ವಿಧವಾ ವಿವಾಹ ಕುರಿತು ಮಾತನಾಡುವವರು ಬಹಳ ಜನ. ಆಚರಿಸುವವರು ವಿರಳ. ಬಲುವಿರಳರಲ್ಲಿ ವಿರಳರಾದ ಗಡಿಯಾರಂ ರಾಮಕೃಷ್ಣಶರ್ಮರ ಪರಿಚಯವಿಲ್ಲಿದೆ.

ಪುಟ–೧೬

5. ಕಲಿಕೆಯ ಸಂತೋಷವನ್ನು ಪ್ರೋತ್ಸಾಹಿಸುವುದು

–ವರದಿ: ಮಾಲಾಕುಮಾರ್

ಕಲಿಕೆಯಲ್ಲಿ ಸಂತೋಷವಿಲ್ಲದಿರುವುದೇ ಬಹು ಸಂಖ್ಯಾತ ಮಕ್ಕಳ ಶಾಲಾ ನಿರ್ಗಮನಕ್ಕೆ ಕಾರಣವಾಗಿದೆ. ಇದೊಂದು ರಾಷ್ಟ್ರೀಯ ಸಮಸ್ಯೆ. ಈ ಕುರಿತಾದ ಸಮ್ಮೇಳನವೊಂದರ ಸಂಕ್ಷಿಪ್ತ ವರದಿ ಈ ಲೇಖನ.

ಪುಟ–೨೧

6. ನಳಂದ ವಿದ್ಯಾಪೀಠ : ಒಂದು ಆದರ್ಶ ವಿಶ್ವವಿದ್ಯಾಲಯ

–ಜಿ.ಆರ್.ರಂಗಸ್ವಾಮಯ್ಯ

ಆಧುನಿಕ ಭಾರತದಲ್ಲಿ ೨೦೦ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಆದರೆ ಇಂದಿಗೆ ೬ ಶತಮಾನಗಳ ಹಿಂದೆ ಇದ್ದ ನಳಂದ ವಿಶ್ವವಿದ್ಯಾಲಯ ಇಂದಿನ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿರುವಂಥ ಅನೇಕ ಸಂಗತಿಗಳ ಮೇಲೆ ಲೇಖಕರುಬೆಳಕು ಚೆಲ್ಲಿದ್ದಾರೆ.

ಪುಟ–೨೩

7. ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರ

–ಕೆ.ಎಸ್.ಪಾರ್ಥಸಾರಥಿ

ಎಲ್ಲಪ್ರಕಾರದ ಅಭಿವೃದ್ಧಿಗಳ ಜೊತೆಗೆ ಸಮಾಜ ಪರಿವರ್ತನೆಯು ಒಂದು ಬಹುಮುಖ್ಯ ಅಗತ್ಯ ಸಂಗತಿಯಾಗಿದೆ. ಆ ಪರಿವರ್ತನೆಯ ಸಾಧನವಾಗಿ ಶಿಕ್ಷಣ ನಮ್ಮ ಕೈಯಲ್ಲಿದೆ. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೆ ಸಮಸ್ಯೆಯ ಇನ್ನೊಂದು ಮುಖವಾಗಿದೆ. ಈ ಬಹುಮುಖ್ಯ ಸಮಸ್ಯೆ ಕುರಿತು ಚರ್ಚೆ ಈ ಲೇಖನದಲ್ಲಿದೆ.

ಪುಟ–೩೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟೆಂಬರ್-೨೦೦೪
ಸಂಪುಟ ೫
ಸಂಚಿಕೆ ೨

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

(08236)298754
e-mail - janapada@yahoo.com

ಇಬ್ಬಂದಿತನ

ಎಲ್ಲಾನು ಬಲ್ಲೆನಂಬುವಿರಲ್ಲ,
ಅವಗುಣಬಿಡಲಿಲ್ಲ
ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಯನು ನುಡಿಯುವಿರಲ್ಲ
ಕಾವಿಯನುಟ್ಟು ತಿರುಗುವಿರಲ್ಲ ಕಾಮವ
ಬಿಡಲಿಲ್ಲ
ನೇಮ ನಿಷ್ಠೆಗಳ ಮಾಡುವಿರಲ್ಲ ತಾಮಸ
ಬಿಡಲಿಲ್ಲ
ತಾವೊಂದರಿಯದೆ ಆಗಮ ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ
ಗುರುಗಳ ಸೇವೆ ಮಾಡಿದಿರಲ್ಲ
ಗುರುತಾಗಲಿಲ್ಲ
ಪರಿಪರಿ ದೇಶವ ತಿರುಗಿದಿರಲ್ಲ
ಪೊರೆಯುವರಿನ್ನಿಲ್ಲ
ಅರಿವೊಂದರಿಯದೆ ಆಗಮ ತಿಳಿಯದೆ
ನರಕ ಕೂಪದಲಿ ಬೀಳುವಿರಲ್ಲ
ಬ್ರಹ್ಮಜ್ಞಾನಿಗಳು ಎನಿಸುವಿರಲ್ಲ
ಹಮ್ಮು ಬಿಡಲಿಲ್ಲ
ಸುಮ್ಮನೆ ಯಾಗವ ಮಾಡುವಿರಲ್ಲ
ಸುಳ್ಳನ್ನು ಬಿಡಲಿಲ್ಲ
ಗಮ್ಮನೆ ಪುರಂದರ ವಿಠಲನ ಪಾದಕೆ
ಹೆಮ್ಮೆ ಬಿಟ್ಟು ನೀವೆರಗಲೆ ಇಲ್ಲ.

-ಪುರಂದರ ದಾಸರು.

ವಿಚಾರ ದೀಪ್ತಿ

ಕೃಷ್ಣ ಭಗವಾನ್, ಪತಂಜಲಿ, ಗಾಂಧೀಜಿ–ಎಲ್ಲರೂ ಜ್ಞಾನ ಮತ್ತು ಕರ್ಮ ಕೂಡಿಯೇ ಇರಬೇಕೆಂದು ನಮಗೆ ಕಲಿಸಿದರು. ಜ್ಞಾನ ಮತ್ತು ಕರ್ಮ ಎರಡು ಹೋಳಾಗಬಾರದು. ಜ್ಞಾನವು ಕರ್ಮದಿಂದ ಬೇರೆಯಾಗಬಾರದು. ಕೆಲವರ ಬಳಿ ಕೇವಲ ಜ್ಞಾನ, ಮತ್ತೆ ಕೆಲವರ ಬಳಿ ಕೇವಲ ಕರ್ಮ ಇರುವಂತಾದರೆ ರಾಹು–ಕೇತುಗಳ ಸಮಾಜವಾದೀತು. ರಾಹುವೆಂದರೆ ಕೇವಲ ತಲೆಯೇ ತಲೆ. ಅದಕ್ಕೆ ರುಂಡ ಇಲ್ಲ. ಕೇವಲ ಮುಂಡ. ಕೇತುವೆಂದರೆ ಕೇವಲ ರುಂಡ. ಕೆಳಗಿನ ಭಾಗ ಮಾತ್ರ, ಮುಂಡವಿಲ್ಲ. ಹೀಗಾದರೆ ಏನಾದೀತು? ಹಳ್ಳಿಯ ಜನರೆಲ್ಲ ಕೇತು ಆದಾರು. ಪಟ್ಟಣಿಗರು ರಾಹು ಆದಾರು. ಹೀಗೆ ಸಮಾಜ ರಾಹು–ಕೇತುಗಳಾದರೆ ಬಹಳ ಕಷ್ಟವಾದೀತು. ದೇಶದಲ್ಲಿ ಮೊದಲೇ ಜಾತಿಭೇದ, ಪ್ರಾಂತಭೇದ, ಭಾಷಾಭೇದ ಇವೆ. ಪಕ್ಷಭೇದ ಹೊಸದೊಂದು ಸೇರಿಕೊಂಡಿತು. ಕೆಲವರಿಗೆ ಕೆಲಸವೇ ಕೆಲಸ, ಮತ್ತೆ ಕೆಲವರು ಜ್ಞಾನ ಪ್ರಾಪ್ತಿಯಲ್ಲೇ ತೊಡಗಿರುವುದು. ಜ್ಞಾನನಿರತರಿಗೆ ಕೆಲಸವಿಲ್ಲ, ಕೆಲಸ ಮಾಡುವವರಿಗೆ ಜ್ಞಾನವಿಲ್ಲ, ಕೆಲಸ ಮಾಡುವ ಶಕ್ತಿ ರೈತರಿಗೆ, ಜ್ಞಾನದ ಶಕ್ತಿ ಪಟ್ಟಣಿಗರಿಗೆ–ಹೀಗಾದರೆ ಒಬ್ಬರಿಗೊಬ್ಬರು ಈ ಶಕ್ತಿಯುನ್ನು ಕೊಟ್ಟಾರೆಂತು? ಆದುದರಿಂದ ಉತ್ಪಾದನೆ ಹೆಚ್ಚಿಸಬೆಕಾದರೆ ಪರಾಕ್ರಮದ ಕಾರ್ಯ ಮಾಡಬೇಕಿದ್ದರೆ, ವಿಕಾಸಗೊಳಿಸಬೇಕೆಂದರೆ ಜ್ಞಾನ ಮತ್ತು ಕರ್ಮಗಳನ್ನು ಮೇಳವಿಸಬೇಕು, ಕೂಡಿಸಬೇಕು.

–ವಿನೋಬಾ

ಚಿಂತಕರ ಶೈಕ್ಷಣಿಕ ಚಿಂತನೆಗಳು

-ಸುರೇಂದ್ರ ಕೌಲಗಿ

೭ನೇ ತರಗತಿಯಲ್ಲಿರುವ ಶೇ ೬೮ ಮಕ್ಕಳಿಗೆ ಶುದ್ಧವಾಗಿ ಬರೆಯಲು ಬರುವುದಿಲ್ಲ. ಅವರಿಗೆ ಕಾಗುಣಿತವಾಗಲೀ, ಇಂಗ್ಲೀಷ್ ಅಕ್ಷರ ಮಾಲೆಯಾಗಲೀ ಪೂರ್ತ ಗೊತ್ತಿಲ್ಲ. ಆದರೂ ಸಹ ೭ನೇ ತರಗತಿಯ ಸಾರ್ವಜನಿಕ ಪರೀಕ್ಷೆಯಲ್ಲಿ ಶಾಲಾ ಫಲಿತಾಂಶಗಳು ೧೦೦ಕ್ಕೆ ೮೦ ರಷ್ಟು ಬಂದಿದೆ. ಮಕ್ಕಳಿಗೆ ಕೇಳಲಾದ ಕೆಲವು ಸರಳ ಪ್ರಶ್ನೆಗಳನ್ನು ಅಧ್ಯಾಪಕರಿಗೂ ಕೇಳಲಾಯಿತು. ಅವರಲ್ಲಿ ಬಹು ಮಂದಿ ಅಧ್ಯಾಪಕರು ಸೊನ್ನೆ ಅಂಕಗಳನ್ನು ಪಡೆದರೆಂಬುದಾಗಿ ಪ್ರೊಫೆಸರ್ ಬಿ. ಕೆ. ಚಂದ್ರಶೇಖರ್‌ರವರ ಪ್ರಯತ್ನದಿಂದಾಗಿ ನಡೆದ ಶಿಕ್ಷಣ ಸರ್ವೇಕ್ಷಣ ವರದಿ ತಿಳಿಸುತ್ತದೆ. ಈ ವರದಿಯು ೧೯೮೮ ರ ಜುಲೈ ಮಾಹೆಯಲ್ಲಿ ಸಾರ್ವಜನಿಕರಿಗೆ ಬಿಡುಗಡೆಗೊಂಡಿತು. ಇಂಥದೇ ದಯನೀಯ ಸ್ಥಿತಿ ಪ್ರೌಢ ಶಾಲೆಗಳಲ್ಲಿಯೂ, ಪದವಿ ಪೂರ್ವ ಕಾಲೇಜುಗಳಲ್ಲಿಯೂ ಇದೆ ಎಂದು ಹೇಳಿದರೆ ಆಶ್ಚರ್ಯವಾಗಲಿ, ಗಾಬರಿಯಾಗಲಿ ಹೊಂದಬೇಕಿಲ್ಲ. ಇದು ಶಾಲೆಗಳಲ್ಲಿರುವ ವಾಸ್ತವಿಕ ಸ್ಥಿತಿ.

ಇನ್ನು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಬಂದರೆ, ಮುಖ್ಯತಃ ಇಂಜನಿಯರಿಂಗ್, ಮೆಡಿಕಲ್, ಕಾಮರ್ಸ್ ಮುಂತಾದ ಕ್ಷೇತ್ರಗಳಿಗೆ ಬಂದರೆ ಇಲ್ಲಿ ಇರುವ ಹಣದ ಸಾಮ್ರಾಜ್ಯ ಬಡಶಿಕ್ಷಣಾರ್ಥಿಗಳನ್ನು ಗಡಿಪಾರು ಮಾಡಿದೆ. ಇದಕ್ಕೆ ಒಂದು ತಾಜಾ ಉದಾಹರಣೆ:- ೧೮ ವರ್ಷದ ಪ್ರತಿಭಾ ಎಂಬ ಯುವತಿ ಆತ್ಮಹತ್ಯೆ ಮಾಡಿಕೊಂಡದ್ದು. ಅವಳು ಆಟೋ ಚಾಲಕನ ಮಗಳಾಗಿದ್ದರೂ ಪ್ರತಿಭಾ ತನ್ನ ಹೆಸರಿಗೆ ತಕ್ಕಂತೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ. ೯೨ರಷ್ಟು ಅಂಕಗಳನ್ನು ಮತ್ತು ಪಿ.ಯು.ಸಿಯಲ್ಲಿ ಶೇ.೭೨ರಷ್ಟು ಅಂಕಗಳನ್ನು ಪಡೆದಿದ್ದಳು. ಆದರೂ ಸಹ ಇಂದಿನ ಗೊಂದಲಮಯ ವಿದ್ಯಾರ್ಥಿಗಳ ಆಯ್ಕೆಯ ನೀತಿ - ನಿಯಮಗಳಿಂದಾಗಿ ಅವಳಿಗೆ ಅವಳು ಬಯಸಿದ್ದ ವೈದ್ಯಕೀಯ ಸೀಟು ಸಿಗದೇ ಇದ್ದುದರಿಂದ ಅವಳು ಆತ್ಮಹತ್ಯೆ ಮಾಡಿಕೊಂಡಳು. ಪ್ರತಿಭಾಳ ಆತ್ಮಹತ್ಯೆ ಉನ್ನತ ಶಿಕ್ಷಣದಲ್ಲಿರುವ ಇಂದಿನ ಹಣದ ಭಯಂಕರ ಕೈವಾಡವನ್ನು ಸೂಚಿಸುತ್ತದೆ.

ಇಂಗ್ಲಿಷ್ ಮಾಧ್ಯಮದ ಶಾಲೆಗಳು ಮತ್ತು ಶಿಶುವಿಹಾರದಿಂದ ಪಿ.ಯು.ಸಿ ವರೆಗಿನ ಶಿಕ್ಷಣ ಸಂಸ್ಥೆಗಳು ಹಣ ಸಂಪಾದಿಸುವ ಕೇಂದ್ರಗಳಾಗಿವೆ. ಅವು ಗ್ರಾಮೀಣ ಭಾರತ ಮತ್ತು ನಗರ ಭಾರತ ಎಂದು ದೇಶವನ್ನು ವಿಭಜಿಸುವಲ್ಲಿ

ಯಶಸ್ವಿಯಾಗಿವೆ. ಇಂಗ್ಲಿಷ್ ಭಾಷೆಯು ಹೊಂದಿರುವ ರಾಜಕೀಯ ಪ್ರಭಾವ ಮತ್ತು ಅದರ ಅತಿಯಾದ ದೈನಂದಿನ ಬಳಕೆಯಿಂದಾಗಿ ದೇಶದ ಎಲ್ಲ ಪ್ರಾದೇಶಿಕ ಭಾಷೆಗಳು ತಮ್ಮ ಅವಸಾನವನ್ನು ಕಾಣುತ್ತಿವೆ. ಇನ್ನು ಕೇವಲ ೧೦೦ ವರ್ಷಗಳಲ್ಲಿ ಕನ್ನಡ ಭಾಷೆಯಂತಹ ಪ್ರಾಚೀನ ಭಾಷೆಯೂ ಸಹ ಕಣ್ಮರೆಯಾಗುವಂತಹ ಪರಿಸ್ಥಿತಿಯುಂಟಾಗಿದೆ. ಎಲ್ಲ ಭಾಷೆಗಳಿಗೆ ಮಾತೃಸ್ಥಾನದಲ್ಲಿದ್ದ ಸಂಸ್ಕೃತವಂತೂ ಮೃತ ಭಾಷೆಯೆಂದೇ ಪರಿಗಣಿತವಾಗುತ್ತಿದೆ. ವಿಜ್ಞಾನಕ್ಷೇತ್ರದಲ್ಲಿಯ ಬೆಳವಣಿಗೆಗಳನ್ನು ಇಂಗ್ಲಿಷ್ ಭಾಷೆ ಬಹು ವೇಗವಾಗಿ ತನ್ನದನ್ನಾಗಿ ಮಾಡಿಕೊಳ್ಳುತ್ತಾ ತನ್ನ ಅಂತಾರಾಷ್ಟ್ರೀಯ ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ ಮತ್ತು ಯಾವುದೇ ಪ್ರಕಾರದ ಅಂತಾರಾಷ್ಟ್ರೀಯ ವ್ಯವಹಾರಕ್ಕೆ ತನ್ನ ಉಪಯೋಗದ ಅನಿವಾರ್ಯತೆಯನ್ನು ಸಿದ್ಧಗೊಳಿಸುತ್ತಾ ಇಂಗ್ಲಿಷ್ ಮುಂದೆ ಸಾಗುತ್ತಿದೆ. ಇದೇ ಹೊತ್ತಿಗೆ ಪ್ರಾದೇಶಿಕ ಭಾಷೆಗಳು ತಮ್ಮ ಜನರಿಂದಲೇ ಅವಹೇಳನಗೊಳ್ಳುತ್ತಾ, ಪ್ರಾದೇಶಿಕ ಸರ್ಕಾರಗಳಿಂದ ಉದಾಸೀನಗೊಳ್ಳುತ್ತಾ, ಆಧುನಿಕ ತಂತ್ರಾಂಶಗಳಿಂದ ವಂಚಿತವಾಗುತ್ತ,ಬಡವಾಗುತ್ತ ಸಾಗಿವೆ. ತಮ್ಮ ತಮ್ಮ ಪ್ರದೇಶಗಳಲ್ಲಿಯೆ ಮಲತಾಯಿಯ ಸ್ಥಾನಕ್ಕೆ ಇಳಿಯುತ್ತಿವೆ. ಪ್ರಾದೇಶಿಕ ಭಾಷೆಯ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಬೆಳೆಯುತ್ತಿದೆ. ಅದರಿಂದಾಗಿ ಪ್ರಾದೇಶಿಕ ಭಾಷಾ ಮಾಧ್ಯಮದ ಸರ್ಕಾರದ ಶಾಲೆಗಳು ಮುಚ್ಚಿಹೋಗುತ್ತಲಿವೆ. ಬದಲಿಗೆ ಇಂಗ್ಲೀಷ್ ಮಾಧ್ಯಮದ ಶಾಲೆಗಳು ಎಲ್ಲೆಲ್ಲೂ ತಲೆ ಎತ್ತುತ್ತಿವೆ. ೨೧ನೇ ಶತಮಾನವು ಭಾರತೀಯ ಭಾಷೆಗಳ ಅವಸಾನದ ಯುಗವೆಂದು ಇತಿಹಾಸದಲ್ಲಿ ಗುರ್ತಿಸಲ್ಪಡಬಹುದೆಂಬ ಸ್ಥಿತಿ ಉಂಟಾಗುತ್ತಿದೆ.

ಇನ್ನು, ಇಂದಿನ ಶಿಕ್ಷಣ ನಿರುದ್ಯೋಗಿಗಳನ್ನು, ದಿಕ್ಕು ತಪ್ಪಿದ ಯುವಕರನ್ನೂ ಸೃಷ್ಠಿಸುತ್ತಿದೆ. ಸಮಾಜದಲ್ಲಿ ಅಶಾಂತಿ, ಹಿಂಸೆ, ಮೋಸ ಬೆಳೆಯುವಂತೆ ಮಾಡಿದೆ. ಶಿಕ್ಷಣದ ಮೂಲಕ ದೇಶವನ್ನು ಅಭಿವೃದ್ಧಿಶೀಲವನ್ನಾಗಿ ಮಾಡುವ ಪ್ರಯತ್ನದಲ್ಲಿ ದೇಶ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಮೌಲಿಕವಾಗಿ ಹಿಂದುಳಿಯುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೫೮ ವರ್ಷಗಳಾಗಿದ್ದರೂ ದೇಶದ ಶಿಕ್ಷಣ ವ್ಯವಸ್ಥೆ ಜಾತಿಗನುಸಾರವಾಗಿ, ಧರ್ಮಾನುಸಾರವಾಗಿ ವಿಭಜಿತಗೊಂಡಿದೆ. ಜಾತ್ಯತೀತ ಆಡಳಿತ ತನ್ನ ನೀತಿಯೆಂದು ಹೇಳಿಕೊಳ್ಳುವ ಸರ್ಕಾರವೇ ಜಾತ್ಯಾಧಾರಿತ, ಧರ್ಮಾಧಾರಿತ ಸಂಘಟನೆಗಳಿಗೆ ಪ್ರತ್ಯೇಕವಾಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಪ್ರೋತ್ಸಾಹಿಸುತ್ತಿದೆ. ಅಲ್ಪ ಸಂಖ್ಯಾತರ ಹಿತರಕ್ಷಣೆಯ ಹೆಸರಿನಲ್ಲಿ ಇಂಥ ಅಸಂವೈಧಾನಿಕ ಕರ್ಮಗಳು ನಡೆಯುತ್ತಿವೆ. ಶಿಕ್ಷಣ ಕ್ಷೇತ್ರವು ರಾಜಕೀಯ ಶಕ್ತಿ ಕೇಂದ್ರವಾಗಿಯೂ, ವಾಣಿಜ್ಯ ಶಕ್ತಿ ಕೇಂದ್ರವಾಗಿಯೂ ಬೆಳೆಯುತ್ತಿರುವುದರಿಂದ

ಅದು ಜಾತೀಯ ಮತ್ತು ಮತೀಯ ಶಕ್ತಿಗಳಿಗೆ ಬಲಸಂವರ್ಧನೆಯ ಮೂಲವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ವಿಶ್ವವಿದ್ಯಾಲಯದ ಅನುದಾನ ಆಯೋಗ (ಯು.ಜಿ.ಸಿ.) ವಿಶ್ವವಿದ್ಯಾಲಯಗಳನ್ನು ಹೆಚ್ಚು ಹೆಚ್ಚುತನ್ನ ನಿಯಂತ್ರಣಕ್ಕೆ ಒಳಪಡಿಸುತ್ತಾ ಅವುಗಳ ಶೈಕ್ಷಣಿಕ ಸ್ವಾತಂತ್ರ್ಯವನ್ನು ಹರಣಗೊಳಿಸುತ್ತಿದೆ. ಇದರಿಂದಾಗಿ ನಮ್ಮ ದೇಶದ ವಿಶ್ವವಿದ್ಯಾಲಯಗಳು ದೇಶಕ್ಕೆ ಬೇಕಾದ ಪ್ರತಿಭಾವಂತ ವ್ಯಕ್ತಿಗಳ ಸೇವೆಯನ್ನು ದೊರಕಿಸಿ ಕೊಡುವುದರಲ್ಲಿ ವಿಫಲವಾಗುತ್ತಾಹೋಗುತ್ತಿವೆ. ಜೊತೆಗೆ ಪ್ರತಿಭಾ ಪಲಾಯನವೆಂಬ ಪ್ರಕ್ರಿಯೆ ಪ್ರಾರಂಭವಾಗಿದೆ. ಉನ್ನತ ಶಿಕ್ಷಣ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಯು ವಿದೇಶಕ್ಕೆ ಹೋಗುವ ಪ್ರಯತ್ನವನ್ನೇ ಮಾಡುತ್ತಾನೆ ಮತ್ತು ಅದರಲ್ಲಿ ಅವನು ಯಶಸ್ವಿ ಕೂಡ ಆಗುತ್ತಾನೆ. ಈ ರೀತಿ ವಿದೇಶಗಳಿಗೆ ಹೋಗುವ ಪ್ರತಿಭಾಶಾಲಿ ಮತ್ತು ಸಾಹಸೀ ಮನೋಭಾವದ ಯುವಕರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ನಾವೆಲ್ಲರೂ ಅವಾಕ್ಕಾಗುತ್ತೇವೆ. ಇಂಥ ಪರಿಸ್ಥಿತಿಯ ಕಾರಣದಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ದೊಡ್ಡ ಹೊರೆ ಬೀಳುತ್ತಿದೆ ಎಂಬುದು ಗಣನೆಗೆ ಬರುತ್ತಿಲ್ಲ.

೧೯೪೯ನೇ ಇಸ್ವಿಯಿಂದ ರಚಿತವಾಗಿದ್ದ ಪ್ರತಿಯೊಂದು ಶಿಕ್ಷಣ ಆಯೋಗವೂ ಜಾಗತಿಕ ಮೌಲ್ಯಗಳಾದ ಸತ್ಯ, ಶಾಂತಿ, ಪ್ರೇಮ, ಸಹಕಾರ ಮತ್ತು ಸಂವಿಧಾನದಲ್ಲಿಯ ಆಶಯಗಳನ್ನು ಆಚರಣೆಗೆ ತರಬೇಕೆಂಬ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಮಾಡುತ್ತಲೇ ಬಂದಿವೆ. ಕೇಂದ್ರ ಸರ್ಕಾರವು ಸ್ವತಃ ದೇಶದಾದ್ಯಂತ ನಡೆಸುತ್ತಿರುವ ೬೦೦೦ಕ್ಕೂ ಹೆಚ್ಚಿನ ಕೇಂದ್ರೀಯ ಶಾಲೆಗಳನ್ನೂ ಸೇರಿದಂತೆ ಎಲ್ಲಿಯೂ ಯಾವುದೆ ಮೌಲ್ಯವನ್ನೂ ಯಾವುದೇ ಶಿಕ್ಷಣ ಸಂಸ್ಥೆ ಅನುಷ್ಠಾನಕ್ಕೆ ತಂದಿಲ್ಲ. ೧೯೮೬ಮೇ ಮಾಹೆಯಲ್ಲಿ ಪಾರ್ಲಿಮೆಂಟ್ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂಗೀಕರಿಸಿತು ಮತ್ತು ಅದೇ ವರ್ಷದ ಆಗಸ್ಟ್ ಮಾಹೆಯಲ್ಲಿ ಕ್ರಿಯಾನ್ವಯ ಯೋಜನೆಯನ್ನು ಅಂಗೀಕರಿಸಿತು. ಆದರೆ ಇದಾವುದೂ ಇದುವರೆಗೆ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿಬಿಂಬಿತವಾಗಿಲ್ಲವೆಂಬ ಸಂಗತಿಯು ಸರ್ಕಾರದ, ದೇಶದ ಶಿಕ್ಷಣ ನೀತಿತಜ್ಞರ ಮತ್ತು ಶೈಕ್ಷಣಿಕ ಸಂಸ್ಥೆಗಳ ಬದ್ಧತೆಯ ಕೊರತೆಯನ್ನು ಎತ್ತಿ ತೋರಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಶಿಕ್ಷಣ ಕ್ಷೇತ್ರವು ಅನೇಕ ಪ್ರಕಾರದ ಶಿಕ್ಷಣ ನೀತಿಯ ಪ್ರಯೋಗಗಳ ಬಲಿಪಶುವಾಗುತ್ತಾ ಬಂದಿದೆ. ಈ ದುಃಸ್ಥಿತಿ ಈ ಹಂತಕ್ಕೆ ನಿಂತಿದ್ದರೆ ಚಿಂತೆಗೆ ಕಾರಣವಾಗುತ್ತಿರಲಿಲ್ಲ. ಆದರೆ ಈ ಎಲ್ಲಾ ಪ್ರಯೋಗಗಳ ಭರಾಟೆಯಲ್ಲಿ ಪ್ರಪಂಚದ ಹಾಗೂ ಮುಖ್ಯವಾಗಿ ನಮ್ಮ ದೇಶದ ಪ್ರಾಚೀನರೆಂದು ಕರೆಸಿಕೊಂಡಿರುವ ಅದ್ಭುತವಾದ ನಿತ್ಯ ನೂತನತೆಯ, ಮನೋಭಾವವನ್ನು ಹೊಂದಿದ್ದ ಋಷಿಗಳ ಹಾಗೂ ಇತರ ಶಿಕ್ಷಣವೇತ್ತರ

ಶೈಕ್ಷಣಿಕ ವಿಚಾರಗಳನ್ನು ಮರೆತದ್ದು ಹೆಚ್ಚು ಚಿಂತೆಯ ವಿಷಯವಾಗಿದೆ.

ಮನುಷ್ಯ ತನ್ನ ವಿಚಾರಶಕ್ತಿಯನ್ನು ಬೆಳೆಸಿಕೊಂಡು ಬರುತ್ತಿರುವಾಗಲೆ ತನ್ನ ಸುತ್ತ ಶಿಕ್ಷಣದ ವಿಚಾರಗಳನ್ನೂ ಸಹ ಹೆಣೆದುಕೊಂಡು ಬಂದಿದ್ದಾನೆ. ಆದ್ದರಿಂದ ಶಿಕ್ಷಣ ಎಂದಿಗೂ ಹಳತಾಗಿ, ಕೊಳಕಾಗಿ ಇರಲು ಸಾಧ್ಯವಾಗಿರಲಿಲ್ಲ. ಇಂಥ ಜೀವಂತಿಕೆಯ ಶೈಕ್ಷಣಿಕ ಬೆಳವಣಿಗೆಯು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕುಂಠಿತವಾಗಿರುವುದು ಅತ್ಯಂತ ದುರಾದೃಷ್ಟಕರವಾದ, ಅಪಾಯಕಾರಿಯಾದ ಹಾಗೂ ಗಂಡಾಂತರಕಾರಿಯಾದ ಸಂಗತಿಯಾಗಿದೆ.

ಸ್ವತಂತ್ರ ಭಾರತದ ಶಿಕ್ಷಣ ಕ್ಷೇತ್ರದ ನಾಯಕರೆಂದೆನಿಸಿಕೊಳ್ಳುವವರು, ತಜ್ಞರೆಂದೆನಿಸಿಕೊಳ್ಳುವವರು, ನೀತಿ ನಿಯಾಮಕರು ಮಾಡಿದ ಮೊಟ್ಟ ಮೊದಲನೆಯ ತಪ್ಪೆಂದರೆ ಶಿಕ್ಷಣವನ್ನು ಸರ್ಕಾರದ ತೊತ್ತನ್ನಾಗಿ ಮಾಡಿದ್ದು! ಯಾವಾಗ ಶಿಕ್ಷಣವು ಸರ್ಕಾರದ ಆಡಳಿತದ ಯಂತ್ರದಲ್ಲಿ ಸಿಕ್ಕಿಕೊಂಡಿತೋ ಆಗಲೇ ಶಿಕ್ಷಣವು ತನ್ನೆಲ್ಲ ರಸವನ್ನು ಕಳೆದುಕೊಂಡ ಕಬ್ಬಿನ ಸಿಪ್ಪೆಯಂತಾಯಿತು. ಇಂಗ್ಲಿಷರ ಆಡಳಿತದೊಂದಿಗೆ ಮುಕ್ತಾಯವಾಗಬೇಕಿದ್ದ ಇಂಗ್ಲಿಷ್ ಮಾದರಿಯ ಶಿಕ್ಷಣ ಮುಕ್ತಾಯಗೊಂಡು ಸ್ವತಂತ್ರಭಾರತಕ್ಕೆ ಅಗತ್ಯವಾಗಿರುವಂತಹ ಶಿಕ್ಷಣ ರೀತಿ ಬಿಚ್ಚಿಕೊಳ್ಳಬೇಕಾಗಿತ್ತು. ಹಿಂದಿನ ಕಾಲದ ಬೌದ್ಧಿಕ ಶಿಕ್ಷಣ ಎಂಬುದು ಹೊಟ್ಟೆಯ ಪಾಡನ್ನು ತೃಪ್ತಿಪಡಿಸುವ ಉದ್ದೇಶಕ್ಕೆ ಎಂದೂ ಬಲಿಯಾಗಿರಲಿಲ್ಲ. ಬ್ರಿಟಿಷರು ಭಾರತ ದೇಶಕ್ಕೆ ಕಾಲಿರಿಸುವ ತನಕವೂ ನಮ್ಮಲ್ಲಿದ್ದ ವಿದ್ಯಾಭ್ಯಾಸ ಕ್ರಮ ಸಂಪೂರ್ಣತೆಯನ್ನು ಹೊಂದಿರಲಿ, ಹೊಂದಿಲ್ಲದೇ ಇರಲಿ ಸ್ವಾಯತ್ತವಾಗಿತ್ತು. ಆ ಕಾರಣದಿಂದಾಗಿ ಶಿಕ್ಷಣಕ್ಕೆ ಸಂಬಂಧಿಸಿದಂಥ ಪ್ರಖರವಾದ ಚಿಂತನೆಗಳು ನಮ್ಮ ದೇಶದಲ್ಲಿ ನಡೆದವು. ಜ್ಞಾನವು ತನ್ನ ಆಂತರಿಕ ಶಕ್ತಿಯನ್ನು ಪರಾಕಾಷ್ಠತೆಗೆ ಒಯ್ಯಲು ಸಾಧ್ಯವಾಗಿತ್ತು. ಇದಕ್ಕೆ ಒಂದು ಉದಾಹರಣೆ ನಮಗೆ ಛಾಂದೋಗ್ಯೋಪನಿಷತ್ತಿನಲ್ಲಿ ದೊರೆಯುತ್ತದೆ. ಆ ಉಪನಿಷತ್ತಿನಲ್ಲಿ ಹೇಳಿರುವ ಮಾತು ಸ್ವತಂತ್ರ ವಾತಾವರಣದಲ್ಲಿ ಮೂಡಿಬಂದ ಜ್ಞಾನದ ಶಕ್ತಿಯನ್ನು ಬಹಳ ರೋಚಕವಾಗಿ ಹೇಳುತ್ತದೆ.

ಯದ್ಯಪ್ಯೇನತ್ ಶುಷ್ಕಾಯ ಸ್ಥಾಣವೇ ಬ್ರೂಯಾತ್,
ಜಾಯೇರನ್ನೇವಾಸ್ಮಿನ್ ಶಾಖಾಃ ಪ್ರರೋಹೇಯುಃ ಪಲಶಾನೀತಿ

(ಛಾಂ.೬೮)

'ಈ ಜ್ಞಾನವನ್ನು ಒಂದು ವೇಳೆ ಒಣಗಿದ ಮರಕ್ಕೂ ಹೇಳಿದರೆ ಅದರಲ್ಲಿ ಶಾಖೆಗಳು ಹೊರಬೀಳುವವು ಮತ್ತು ಎಲೆಗಳು ಚಿಗುರುವವು'.

ಇಂಥ ಅದ್ಭುತವಾದ ಶಕ್ತಿ ಗುರುಗಳು ಕೊಡುವ ಜ್ಞಾನದಲ್ಲಿತ್ತು. ಇದಕ್ಕೆ ಮೂಲ ಕಾರಣ ಮೇಲೆ ತಿಳಿಸಿದಂತೆ ಶಿಕ್ಷಣವು ಪೂರ್ಣತಃ ಸ್ವತಂತ್ರವಾದುದೆ ಆಗಿದ್ದಿತು.

ಈ ಪ್ರಕಾರದ ಶಕ್ತಿಯುತ, ಪ್ರಾಣದಾಯಕ ಶಿಕ್ಷಣವು ನಮ್ಮ ದೇಶದ ಮಕ್ಕಳಿಗೆ ಸಿಗಬೇಕೆಂಬುದೆ ಡಾ|| ರಾಧಾಕೃಷ್ಣನ್‌ರವರ ಯೋಚನೆಯಾಗಿದ್ದಿತು. ಅದೇ ರೀತಿ ಅರವಿಂದಘೋಷ್‌ರ ಇಚ್ಛೆಯೂ ಆಗಿದ್ದಿತು. ಹಾಗೆಯೇ ಸ್ವಾಮಿ ವಿವೇಕಾನಂದರ ಬಯಕೆಯೂ ಆಗಿದ್ದಿತು. ಶಿಕ್ಷಕನೂ, ಶಿಷ್ಯನೂ ಜ್ಞಾನಕೊಡುವಲ್ಲಿ ಮತ್ತು ಜ್ಞಾನಪಡೆಯುವಲ್ಲಿ ಸರ್ವತಂತ್ರ ಸ್ವತಂತ್ರರಾಗಿದ್ದರು.

ಶಿಕ್ಷಣದಲ್ಲಿಯ ಈ ಪ್ರಕಾರದ ಸ್ವಾಯತ್ತತೆಯ ವಿಚಾರ ವೇದ ಕಾಲದಿಂದಲೂ ಹರಿದು ಬಂದು ರಾಮಾಯಣ ಮಹಾಭಾರತ ಕಾಲದವರೆಗೂ ಮುಂದುವರಿಯಿತು. ವಿಶ್ವಾಮಿತ್ರ ಶ್ರೀರಾಮ ಲಕ್ಷ್ಮಣರನ್ನು ಕಾಡಿಗೆ ಕರೆದುಕೊಂಡು ಹೋಗಿ ಶಿಕ್ಷಣ ಕೊಡುವಂತೆ ಅನುಮತಿ ಕೊಟ್ಟ ದಶರಥನು ಶಿಕ್ಷಣದ ಸ್ವಾಯತ್ತತೆಯನ್ನು ಮನಗಂಡೇ ಇದ್ದ. ಪಾಂಡವರು–ಕೌರವರು ಪಡೆದ ಶಿಕ್ಷಣವು ಸ್ವಾಯತ್ತತೆಯ ಪರಿಸರದಲ್ಲಿಯೆ ನಡೆಯಿತು. ನಚಿಕೇತ ಮತ್ತು ಸತ್ಯಕಾಮ ಮತ್ತು ಶ್ವೇತಕೇತು ಪಡೆದ ಶಿಕ್ಷಣವೂ ಸಹ ಸ್ವಾಯತ್ತತೆಯ ಆಧಾರದ ಮೇಲೆಯೇ ಇತ್ತು. ಬುದ್ಧ ಬೋಧಿ ವೃಕ್ಷದ ಕೆಳಗೆ ಕುಳಿತು ಜ್ಞಾನವನ್ನು ಪಡೆಯಲು ಸಹಕಾರಿಯಾದುದು ಅನಿರ್ಬಂಧಿತ, ಅನಿಯಂತ್ರಿತ, ನಿರಂಕುಶ, ಸ್ವಚ್ಛಂದ ವೈಚಾರಿಕ ಸ್ವಾತಂತ್ರ್ಯವೇ. ಅದೇ ರೀತಿಯ ಸ್ವಾತಂತ್ರ್ಯದಲ್ಲಿ ಮಹಾವೀರನಿಗೆ ಶಿಕ್ಷಣ ದೊರೆತದ್ದರಿಂದ ಜಗತ್ತಿಗೆ ಆದರ್ಶಯುತವಾದ ಅಹಿಂಸಾಧರ್ಮವನ್ನು ಬೋಧಿಸಲು ಸಾಧ್ಯವಾಯಿತು. ಪಶ್ಚಿಮ ದೇಶಗಳಲ್ಲಿ ಆಗಿ ಹೋದ ಕನಪ್ಯೂಷಿಯಸ್, ಪ್ಲೇಟೋ, ಸಾಕ್ರಟಿಸ್ ರಸ್ಕಿನ್ ಮುಂತಾದವರು ಸಹ ಶಿಕ್ಷಣದ ಸ್ವಾಯತ್ತತೆಯ ತತ್ವವನ್ನು ಒಪ್ಪಿದಂತವರಾಗಿದ್ದರು.

ಈ ಬಗೆಯ ಅಭಿಪ್ರಾಯವನ್ನು ಸ್ವತಂತ್ರ ಭಾರತಕ್ಕಾಗಿ ಇಟ್ಟುಕೊಂಡಿದ್ದವರಲ್ಲಿ ಮಹಾತ್ಮಗಾಂಧಿ, ಆಚಾರ್ಯ ವಿನೋಬಾಭಾವೆ, ಅರವಿಂದಘೋಷ್ ಮುಂತಾದವರು ಇದ್ದರು. ಇವರೆಲ್ಲರ ಕ್ರಾಂತಿದಾಯಕ ಹಾಗೂ ಆಧ್ಯಾತ್ಮಿಕಪ್ರಧಾನ ಶಿಕ್ಷಣ ವಿಚಾರಗಳಿಗೆ ಪ್ರಾಚೀನ ವೇದಗಳು, ಉಪನಿಷತ್ತುಗಳು, ಅರಣ್ಯಕಗಳು ಆಧಾರವಾಗಿದ್ದವು. ಒಂದೊಂದು ವೇದವೂ, ಉಪನಿಷತ್ತೂ ಜ್ಞಾನದ ಗಣಿಯಾಗಿವೆ. ಅವುಗಳಲ್ಲಿಯ ಒಂದೊಂದು ಶ್ಲೋಕವೂ ಜ್ಞಾನದ ಜ್ಯೋತಿಯಾಗಿದೆ. ವಿಶ್ವದಲ್ಲಿ ಜ್ಞಾನವನ್ನು ಹರಡುವಲ್ಲಿ ಭಾರತದ ಪಾತ್ರ ಹಿರಿದಾಗಿದೆ. ಈ ಮಾತನ್ನು ಪಾಶ್ಚಿಮಾತ್ಯ ದೇಶಗಳ ಅನೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅವರಲ್ಲಿ ಮುಖ್ಯರಾದವರು ಮ್ಯಾಕ್ಸ್ ಮುಲ್ಲರ್, ಗ್ರಾಸ್‌ಮ್ಯಾನ್, ಗೆಲೆನರ್ ಹಾಗೂ ಇನ್ನೂ ಇತರರು. ನಮ್ಮ ದೇಶದಲ್ಲಿದ್ದ ಜ್ಞಾನ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿದ್ದಿರದೆ ಅದು ಇಡೀ ಭೂಮಂಡಲದ ಹಿತವನ್ನು ಗುರಿಯಾಗಿಟ್ಟುಕೊಂಡಿತ್ತೆಂಬುದು ಅಸಾಧಾರಣ ವಾದ ಸಂಗತಿ. ಇಷ್ಟು ವಿಶ್ವವ್ಯಾಪಿ ಹಿತ ದೃಷ್ಟಿಯುಳ್ಳ, ಪರೋಪಕಾರಿ ಜ್ಞಾನ ಹೊಂದಿದ್ದ ಕೆಲವೇ

ಕೆಲವು ದೇಶಗಳಲ್ಲಿ ಭಾರತ ಅಗ್ರಗಣ್ಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಮಾತಿಗೆ ಪುಷ್ಟಿ ಕೊಡುವಂತೆ ರವೀಂದ್ರನಾಥ ಠಾಗೋರರು ತಮ್ಮ ಒಂದು ಕವಿತೆಯಲ್ಲಿ ತಮ್ಮ ಭಾವನೆಯನ್ನು ಹೀಗೆ ಪ್ರಕಟಿಸಿದ್ದಾರೆ.

ಪ್ರಥಮ ಸಾವ-ರವ ತವ ತಪೋವನೆ
ಪ್ರಥಮ ಪ್ರಚಾರಿತ ತವವನ ಗಹನೇ
ಜ್ಞಾನ ಕರ್ಮಕತ ಕಾವ್ಯ ವಾಹಿನೀ
ಮಾತಾ ಭುವನ ಮನ ಮೋಹಿನಿ !

ಜಗತ್ತಿನ ಮನಸ್ಸನ್ನು ಮೋಹಿತಗೊಳಿಸುವ ನಮ್ಮ ತಾಯಿ ಭಾರತ. ಮೊಟ್ಟ ಮೊದಲು ಸೂರ್ಯೋದಯವಾದುದು ಇಲ್ಲಿ. ಮೊಟ್ಟ ಮೊದಲು ಸಾಮಗಾನವಾದುದು ಇಲ್ಲಿ. ಇಲ್ಲಿಂದಲೇ ವಿದ್ಯೆಯ ಕಿರಣಗಳು ಇಡೀ ಲೋಕದಲ್ಲಿ ಹರಡಿದುದು.

ಇಂಗ್ಲಿಷರ ಆಳ್ವಿಕೆ ಪ್ರಾರಂಭವಾದ ಮೇಲೆ ಭಾರತದ ಶಿಕ್ಷಣ ನೀತಿ ಅವನತಿಗೊಳ್ಳಲು ಪ್ರಾರಂಭವಾಯಿತು. ಭಾರತೀಯರ ಮಾನಸವನ್ನು ಪಾಶ್ಚಿಮಾತ್ಯ ಶಿಕ್ಷಣ ವಿಚಾರಗಳು ಆಕ್ರಮಿಸಿಕೊಂಡವು. ಆಗಿನಿಂದ ಪ್ರಾರಂಭವಾಯಿತು ಭಾರತೀಯರ ಮಾನಸಿಕ ದಾಸ್ಯ. ಸ್ವಾತಂತ್ರ್ಯ ಬಂದ ನಂತರವೂ ಭಾರತೀಯರು ಮಾನಸಿಕ ದಾಸ್ಯದ ಶೃಂಖಲೆಯಿಂದ ಬರಲು ಸಾಧ್ಯವಾಗಿಲ್ಲ. ದೇಶದ ಇಡೀ ಶಿಕ್ಷಣ ವ್ಯವಸ್ಥೆಯೇ ಗೊಂದಲದ ಗೂಡಾಗಿದೆ. ಪ್ರತಿಯೊಂದು ಸಮಸ್ಯೆಯ ಒಂದೊಂದು ಪರಿಹಾರವೂ ಆ ಗೊಂದಲವನ್ನು ಹೆಚ್ಚಿಸುತ್ತಿದೆಯೆ ಹೊರತು ಕಡಿಮೆ ಮಾಡುತ್ತಿಲ್ಲ. ಆದ್ದರಿಂದ ಇಡೀ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸ್ವತಃ ಸರ್ಕಾರ, ಜನತೆ, ವಿದ್ಯಾರ್ಥಿಗಳು, ಪೋಷಕರು, ಕೈಗಾರಿಕೋದ್ಯಮಿಗಳು, ಶಿಕ್ಷಣ ಸಂಸ್ಥೆ ನಡೆಸುತ್ತಿರುವವರು ಮತ್ತು ಶಿಕ್ಷಣ ಕೊಡುವ ಶಿಕ್ಷಕರಾದಿಯಾಗಿ ಎಲ್ಲರೂ ಅಸಮಾಧಾನವುಳ್ಳವರಾಗಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇಂದಿನ ಭಾರತೀಯ ಶಿಕ್ಷಣ ಅನೇಕ ಬಗೆಯ ರಾಹು-ಕೇತುಗಳಿಂದ ಪೀಡಿತವಾಗಿದೆ. ಇದೀ ದೇಶಕ್ಕೆ ದೇಶವೇ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಸಂತೋಷದಲ್ಲಿಕುದಿಯುತ್ತಿದೆ ಆದಾಗ್ಯೂ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಶಿಕ್ಷಣದ ಸಮಸ್ಯೆಗಳತ್ತ ಗಮನಹರಿಸುವುದು ಅಗತ್ಯವಾಗಿದೆ. ಹಾಗೆ ಗಮನಹರಿಸಿದಾಗ ನಮಗೆ ಪರಿಹಾರಗಳು ಬೇರೆಲ್ಲೂ ಸಿಗದೆ ನಮ್ಮ ದೇಶದ ಪ್ರಾಚೀನ ಮತ್ತು ಆಧುನಿಕ ಶೈಕ್ಷಣಿಕ ಚಿಂತಕರ ಚಿಂತನೆಗಳಲ್ಲಿಯೇ ದೊರೆಯುತ್ತವೆ. ಅವುಗಳನ್ನು ಅಂಗೀಕರಿಸುವ ಮನೋಭಾವ ಮಾತ್ರ ನಮಗೆ ಬೇಕು. ನಮ್ಮ ವೇದಗಳಲ್ಲಿಯ ಶಾಂತಿ-ಮಂತ್ರಗಳಲ್ಲಿ ಶಿಕ್ಷಣಕ್ಕಿರಬೇಕಾದ ಗುರಿಗಳನ್ನು ಆತ್ಮವಿಶ್ವಾಸ ಪೂರ್ವಕವಾಗಿ ಸಾರುತ್ತವೆ. ಉದಾಹರಣೆಗಾಗಿ ಈ ಕೆಲವು ಶಾಂತಿ ಮಂತ್ರಗಳನ್ನು ಗಮನಿಸಬಹುದು. (ಜೊತೆಗೆ ಶ್ರೇಷ್ಠ ಶಿಕ್ಷಣ

ಚಿಂತಕ ವಿನೋಬಾರ ಈ ಮಾತುಗಳನ್ನೂ ಗಮನಿಸಬಹುದು.

೧. ಶಿಕ್ಷಣ ಜೀವನಕ್ಕಾಗಿ, ಜೀವನ ಮೂಲಕ, ಜೀವನ ಪರ್ಯಂತ.

೨. ಕೇವಲ ಅ.ಆ.ಇ.ಈ ಕಲಿಯುವುದು ಶಿಕ್ಷಣವಲ್ಲ. ಶಿಕ್ಷಣವೆಂದರೆ ಸಮಗ್ರ ವಿಕಾಸ.

೩. ಶಿಕ್ಷಣ ನಮ್ಮ ಪರಂಪರೆಯ ನೆನಪು ಮೂಡಿಸಿ ಅದರ ಜ್ಞಾನವನ್ನು ಇಂದಿಗೂ ಮುಂದೆಯೂ ಅನ್ವಯಿಸುತ್ತದೆ.

೪. ಶೋಷಣಾರಹಿತ ನವ ಸಮಾಜದ ರಚನೆಯೇ ಶಿಕ್ಷಣದ ಗುರಿ.

೫. ಶಿಕ್ಷಣ ಬುದ್ಧಿಯನ್ನು ಮಾತ್ರವಲ್ಲ. ಹೃದಯವನ್ನೂ ವಿಕಾಸಗೊಳಿಸಬೇಕು. ಇದು ಸತ್ಸಂಗ ಹಾಗೂ ಸಂಯಮ ಸಾಧನೆಯಿಂದ ಮಾತ್ರ ಸಾಧ್ಯ.

೬. ಶಿಕ್ಷಣದಲ್ಲಿ ಶ್ರಮನಿಷ್ಠೆಗೆ ಪ್ರಧಾನ ಸ್ಥಾನ. ಸಮಾಜೋಪಯೋಗವಾದ ಉದ್ಯೋಗದ ಮೂಲಕ ವಿದ್ಯಾರ್ಥಿಯ ಪೂರ್ಣವಿಕಾಸ ಸಾಧ್ಯ. ಕರ್ಮ ಜ್ಞಾನಗಳ ಸಮನ್ವಯವೇ ಶಿಕ್ಷಣ.

೭. ಸರ್ವಧರ್ಮ ಸಮಾನತ್ವದ ಆಧಾರದ ಮೇಲೆಯೇ ಧರ್ಮ ಶಿಕ್ಷಣ ಇರಬೇಕು.

೮. ತಾಯಿ ನುಡಿಯೇ ಶಿಕ್ಷಣ ಮಾಧ್ಯಮವಾಗಬೇಕು.

೯. ಶಿಕ್ಷಣದ ಗುರಿ ಅನಾಸಕ್ತಸೇವೆ.

ರಾಷ್ಟ್ರಪಿತ ಮಹಾತ್ಮಗಾಂಧಿಯವರು ಶಿಕ್ಷಣ ಪ್ರೇಮಿಯಾಗಿದ್ದರೆಂಬುದು ಎಲ್ಲರಿಗೂ ಗೊತ್ತಿದೆ. ಯಾರೋ ಗಾಂಧೀಜಿಯನ್ನು ಕೇಳಿದರು. ಭಾರತಕ್ಕೆ ನಿಮ್ಮ ಕೊಡುಗೆ ಏನೆಂದು. ಮಹಾತ್ಮರು ಹೇಳಿದರು, 'ನನ್ನ ನಾಡಿಗೂ ಜಗತ್ತಿಗೂ ನಿತ್ಯ ನೂತನ ಶಿಕ್ಷಣ ವಿಚಾರವೆ ನನ್ನ ಶ್ರೇಷ್ಠ ಕೊಡುಗೆ. ನನ್ನ ಮಾತನ್ನು ಇಂದು ಒಪ್ಪದಿರಬಹುದು. ಆದರೆ ಅದನ್ನು ಶಂಕಿಸದ ದಿನ ಬಂದೀತು ಎಂಬ ವಿಶ್ವಾಸವಿದೆ. ನಿತ್ಯ ನೂತನ ಶಿಕ್ಷಣ ವಿಚಾರವು ಬದುಕಿರುವವರೆಗೆ ಭಾರತದ ಜನರ ಹೃದಯದಲ್ಲಿ ನಾನು ಬದುಕಿರುತ್ತೇನೆ').

ಇನ್ನು ನಮ್ಮ ದೇಶದ ಶಿಕ್ಷಣನೀತಿಯ ಗುರಿ ಮತ್ತು ಮಾರ್ಗದರ್ಶಿಯಾಗಬಲ್ಲ ಕೆಲ ಉಪನಿಷತ್ ಸೂತ್ರಗಳು ಇಲ್ಲಿವೆ.

"ನನ್ನ ವಾಣಿಯು ಮನಸ್ಸಿನಲ್ಲಿ ಪ್ರತಿಷ್ಠಿತವಾಗಿದೆ. ಮನಸ್ಸು ವಾಣಿಯಲ್ಲಿ ಪ್ರತಿಷ್ಠಿತವಾಗಿದೆ. ಹೇ ಪ್ರಕಾಶರೂಪವಾಗಿರುವ ಆತ್ಮನ್, ನನಗಾಗಿ ಪ್ರಕಟಗೊಳ್ಳು. ಹೇ, ಮನ ಮತ್ತು ವಾಣಿಗಳೇ, ನನಗಾಗಿ ವೇದಗಳನ್ನು ತರುವುದರಲ್ಲಿ ಸಮರ್ಥರಾಗಿರಿ. ನಾನು ತಿಳಿದಿರುವ ಜ್ಞಾನವು ನನ್ನನ್ನು ತ್ಯಜಿಸದಿರಲಿ. ಈ ಅಧ್ಯಯನದಿಂದ ನಾನು ಹಗಲು ಮತ್ತು ರಾತ್ರಿಯನ್ನು ಜೋಡಿಸುವೆನು. ನಾನು ಋತವನ್ನು ಮಾತನಾಡುವೆನು. ನಾನು ಸತ್ಯವನ್ನು ಮಾತನಾಡುವೆನು. ಅವು ನನ್ನನ್ನು ರಕ್ಷಿಸಲಿ, ಅವು ಮಾತನಾಡುವವನನ್ನು ರಕ್ಷಿಸಲಿ, ಅವು ನನ್ನನ್ನು ರಕ್ಷಿಸಲಿ, ಅವು ಮಾತನಾಡುವವರನ್ನು ರಕ್ಷಿಸಲಿ, ಮಾತನಾಡುವವರನ್ನು ರಕ್ಷಿಸಲಿ. ದೇವರು ಗುರು ಶಿಷ್ಯರಿಬ್ಬರ ವಿಕಾಸಗೊಳಿಸಲಿ, ನಮ್ಮಿಬ್ಬರನ್ನು ಒಟ್ಟಿಗೆ ರಕ್ಷಿಸಲಿ, ನಾವಿಬ್ಬರೂ

ಒಟ್ಟಿಗೆ ಪರಾಕ್ರಮ ಮಾಡುವಂತಾಗಲಿ, ನಮ್ಮ ಅಧ್ಯಯನ ತೇಜಸ್ವಿಯಾಗಿರಲಿ, ನಾವು ಪರಸ್ಪರ ದ್ವೇಷ ಮಾಡದಂತಿರಲಿ.

*****

ನನ್ನ ಅಂಗಗಳು, ವಾಣಿ, ಪ್ರಾಣ, ಚಕ್ಷು, ಕಿವಿ, ಪರಿಪುಷ್ಟವಾಗಲಿ. ಎಲ್ಲ ಇಂದ್ರಿಯಗಳು ಬಲಿಷ್ಠವಾಗಲಿ, ಉಪನಿಷತ್ತು-ಪ್ರತಿಪಾದ್ಯವೆಲ್ಲವೂ ಬ್ರಹ್ಮ. ನಾನು ಆ ಬ್ರಹ್ಮನನ್ನು ಅಸ್ವೀಕಾರ ಮಾಡದೇ ಇರಲಿ, ಬ್ರಹ್ಮ ನನ್ನನ್ನು ನಿರಾಕರಿಸದಿರಲಿ, ನನ್ನ ನಿರಾಕರಣೆಯಾಗದಿರಲಿ, ನನ್ನ ನಿರಾಕರಣೆಯಾಗದಿರಲಿ. ಹೇ ದೇವಗಣನೇ! ನಾವು ಕಿವಿಗಳಿಂದ ಶುಭವಚನವನ್ನು ಕೇಳುವಂತಾಗಲಿ, ಹೇ ಪೂಜನೀಯರೇ! ಕಣ್ಣುಗಳಿಂದ ಶುಭವನ್ನೇ ನೋಡುವಂತಾಗಲಿ, ನಿಮ್ಮ ಸ್ತುತಿ ಮಾಡುತ್ತ-ಮಾಡುತ್ತ ನಮ್ಮ ಸ್ಥಿರ ಅಂಗಗಳಿಂದ ಗಟ್ಟಿಯಾದ ದೇಹದಿಂದ ಈಶ್ವರ ಕೊಟ್ಟಿರುವ ಆಯುಷ್ಯವನ್ನು ಪಡೆಯುವಂತಾಗಲಿ. ಇಂದ್ರಿಯಗಳಿಗಿಂತ ಇಂದ್ರಿಯ ವಿಷಯ ಶ್ರೇಷ್ಠ, ಇಂದ್ರಿಯ-ವಿಷಯಗಳಿಗಿಂತ ಮನಸ್ಸು ಶ್ರೇಷ್ಠ. ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಮಹತ್ತಾದುದು ಆತ್ಮ. ಅಂದರೆ ಮಹತ್ತಾದ ತತ್ವ. ಮಹತ್ ತತ್ವಕ್ಕಿಂತ ಪ್ರಕೃತಿ ಶ್ರೇಷ್ಠ. ಪ್ರಕೃತಿಗಿಂತ ಪುರುಷ ಶ್ರೇಷ್ಠ. ಪುರುಷನಿಗಿಂತ ಶ್ರೇಷ್ಠವಾದುದು ಬೇರಾವುದೂ ಇಲ್ಲ. ಅದೇ ಅಂತಿಮ ಸೀಮೆ ಮತ್ತು ಅದೇ ಶ್ರೇಷ್ಠ ಗತಿ.

****

ಹೇ ಪ್ರಭು, ನನ್ನನ್ನು ಅಸತ್ಯದಿಂದ ಸತ್ಯದೆಡೆಗೆ ಕರೆದುಕೊಂಡು ಹೋಗು, ಅಂಧಕಾರದಿಂದ ಪ್ರಕಾಶದೆಡೆಗೆ ಕರೆದುಕೊಂಡು ಹೋಗು, ಮೃತ್ಯುವಿನಿಂದ ಅಮೃತತ್ವದೆಡೆಗೆ ಕರೆದುಕೊಂಡು ಹೋಗು.

****

ಜಗತ್ತಿನಲ್ಲಿ ಏನೆಲ್ಲ ಜೀವನವಿದೆಯೋ ಅದೆಲ್ಲವೂ ಈಶ್ವರನಿಂದ ಉಂಟಾದುದು. ಆದ್ದರಿಂದ ಅವನ ಹೆಸರಿನಲ್ಲಿ ತ್ಯಾಗ ಮಾಡಿ ನಿನಗೆ ದೊರೆತದ್ದನ್ನು ಭೋಗಿಸು ಹೋಗು. ಯಾರದೇ ಧನದ ಬಗ್ಗೆ ಆಸೆಯನ್ನಿಟ್ಟುಕೊಳ್ಳಬೇಡ.

****

ಯಾವ ರೀತಿ ಆಕಾಶದಿಂದ ಬಿದ್ದ ಹನಿ ಸಮುದ್ರದತ್ತ ಹೋಗುವುದೋ ಅದೇ ರೀತಿ ಪ್ರಪಂಚದ ಎಲ್ಲ ಧರ್ಮಗಳ ಉಪದೇಶದಲ್ಲಿ ನೀತಿ ಶಿಕ್ಷಣವನ್ನೇ ಬೋಧಿಸಲಾಗಿದೆ. ಹೀಗೆ ಪ್ರಪಂಚದ ಚಿಂತಕರೆಲ್ಲರ ಶಿಕ್ಷಣ ವಿಚಾರಗಳಿವೆ. ಅವರ ಶಿಕ್ಷಣದ ಗುರಿ ಸ್ಪಷ್ಟವಾಗಿದೆ, ನಿಖರವಾಗಿದೆ. ಇನ್ನು ಆ ಗುರಿಯನ್ನು ತಲುಪಲು ಅಗತ್ಯವಾಗಿರುವ ಸಾಧನಗಳನ್ನು ಶಿಕ್ಷಣದ ಬಗ್ಗೆ ಪ್ರೀತಿಯುಳ್ಳವರೆಲ್ಲರೂ ತಮ್ಮ ತಮ್ಮ ನೆಲೆಯಲ್ಲಿ ಕಂಡುಕೊಳ್ಳಬೇಕಷ್ಟೆ.

***

ಸಿದ್ದವನಹಳ್ಳಿ ಕೃಷ್ಣಶರ್ಮ ಶತಾಬ್ದಿ -ಒಂದು ನಮನ

–ನೀಲತ್ತಹಳ್ಳಿಕಸ್ತೂರಿ

೨೦೦೪, ಇದು ಶತಮಾನೋತ್ಸವಗಳ ವರ್ಷ. ಅದರಲ್ಲೂ ಕನ್ನಡ ನಾಡಿಗೆ. ಕನ್ನಡದ ಹಲವಾರು ಧೀಮಂತರಿಗೆ ಇದು ಶತಾಬ್ದಿ ಸಂವತ್ಸರ. ಅಂಥವರಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮ ಒಬ್ಬರು. ಹಳ್ಳಿಯಲ್ಲಿ ಹುಟ್ಟಿದಂತವರು, ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀ ವಿಚಾರವೇತ್ತರು, ರಾಜಕಾರಣದಲ್ಲಿ ಇದ್ದೂ ನಿಷ್ಕಳಂಕರಾಗಿದ್ದವರು. ಅಧಿಕಾರದಿಂದ ದೂರ ಇದ್ದವರು. ಯಾವ ಅಧಿಕಾರ ಸ್ಥಾನದ ಹತ್ತಿರವೂ ಸುಳಿದು ನೋಡಲಿಲ್ಲ. ಖಾದಿ, ಹಿಂದೀಪ್ರಚಾರ, ಹರಿಜನಕಾರ್ಯ, ಪತ್ರಿಕೆ, ಸಾಹಿತ್ಯ, ಸಂಘಟನೆ, ಯುವ ಜನರಿಗೆ ಮಾರ್ಗದರ್ಶನ, ರಾಷ್ಟ್ರಸೇವೆಗಾಗಿ ತ್ಯಾಗಕ್ಕೆ ಜನತೆಯನ್ನು ಪ್ರೇರೇಪಿಸಿದ್ದು, ಬಡಜನರಿಗಾಗಿಯೆ ಸಹಕಾರ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದು, ಶಿಕ್ಷಣಕ್ಷೇತ್ರ, ಮೇಲಾಗಿ ಗಾಂಧಿ–ವಿನೋಬಾ–ಸರ್ವೋದಯ ತತ್ವಗಳನ್ನು ಕನ್ನಡ ಜನತೆಗೆ ತಿಳಿಸಿ ಹೇಳಿದ್ದು, ಅನುವಾದಗಳ ಮೂಲಕ ರಾಷ್ಟ್ರನಾಯಕರ ಹೃದಯಗಳನ್ನು ನಮ್ಮ ಜನಕ್ಕೆ ತೆರೆದು ತೋರಿದ್ದು, ಈ ಎಲ್ಲಾ ಕೆಲಸ ಮಾಡಿದರೂ ಏನೂ ಮಾಡದಂತೆ ನಿರ್ಲಿಪ್ತರಾಗಿ ಬಾಳಿದ್ದು, ತಾವು ಕಂಡುಕೊಂಡ ಗಾಂಧೀ ದರ್ಶನಾನಂದವನ್ನು ನಾಡಿಗೆಲ್ಲ ಹಂಚಿದ್ದು–ಕೃಷ್ಣಶರ್ಮಾಜಿಯುವರ ಅನೇಕ ವಿಶಿಷ್ಟತೆಗಳಲ್ಲಿ ಇವು ಕೆಲವು. ಶರ್ಮಾಜಿಗೆ ಸದಾ ನಾಡಚಿಂತೆಯೆ. ತಾರುಣ್ಯದಲ್ಲಿ ನಾಡ ಬಿಡುಗಡೆಯ ಕಾಳಜಿ. ಅದಕ್ಕಾಗಿ ಚಳುವಳಿ. ಯುವ ಸಂಘಟನೆ. ಪತ್ರಿಕಾಕಾರ್ಯ, ಸಾಹಿತ್ಯರಚನೆ. ಸ್ವಾತಂತ್ರ್ಯ ಬಂದ ಮೇಲೆ ಜನತೆಯ ಹಲವು ಬಂಧನಗಳನ್ನು ನಿವಾರಿಸಲು ಕಾಳಜಿ. ಸಹಕಾರ ಸಂಸ್ಥೆಗಳು. ಯುವ ಸಂಘಟನೆಗಳು, ಗಾಂಧೀ ಸಾಹಿತ್ಯ ಸಂಘ, ಭೂದಾನ–ಸರ್ವೋದಯ ಕಾರ್ಯ, ಚಳುವಳಿಗೆ ಬೇಕಾದ ವೈಚಾರಿಕ ಇಂಬು ಒದಗಿಸುವುದು–ಬಾಳಿನ ಉದ್ದಕ್ಕೂ ಹೀಗೆ ನಾಡು–ನುಡಿ ಚಿಂತನೆಯೆ.

ಕೃಷ್ಣಶರ್ಮಾಜಿ ಅಪೂರ್ವ ಚಿಂತಕರು. ಹರಿತವಾದ ಆದರೆ ಸರಿಯಾದ ಮಾತು ಅವರದು. ಲೇಖನದಲ್ಲೂ ಅಷ್ಟೆ. ಸ್ಪಷ್ಟ, ನೇರ. ಕಿರಿದರಲ್ಲಿ ಪಿರಿದರ್ಥ ತುಂಬುವ ಕೌಶಲ. ಅವರದು ರಾಮಾನುಜೀಯ ಪಂಥ. ಭಗವದ್ ರಾಮಾನುಜರು ತಮಗೆ ಉಪದೇಶಿತವಾದ ಮೂಲಮಂತ್ರವನ್ನು, ಗುರುವಿನ ಆದೇಶಕ್ಕೆ ವಿರುದ್ಧವಾಗಿ ಸಾಮಾನ್ಯ ಜನರಿಗೆಲ್ಲ ತಿಳಿಸಿಬಿಟ್ಟರು. ಜಾತ್ರೆಯಲ್ಲಿ ದೇವಾಲಯದ ಗೋಪುರ ಏರಿ, ಜನಜಂಗುಳಿಯಲ್ಲಿ ಕೂಗಿ ಕರೆದು ಎಲ್ಲರಿಗೂ ಮಂತ್ರದ ಮಾರ್ಗವನ್ನು ತೋರಿಬಿಟ್ಟರು. ತಾನೊಬ್ಬ ಗುರುವಿನ ಆಜ್ಞೆ ಮೀರಿ ನರಕಕ್ಕೆ

ಹೋದರೂ ಚಿಂತೆಯಿಲ್ಲ, ಲೋಕದ ಎಲ್ಲರಿಗೂ ಮಂತ್ರಸ್ಪರ್ಶವಾಗಿ ಮಂಗಳವಾಗಲಿ ಎಂಬ ಲೋಕಕಾರುಣ್ಯ ಆಚಾರ್ಯರದು. ಹೃದಯ ವೈಶಾಲ್ಯ! ಅಲ್ಲಮಪ್ರಭು ಹೇಳಲಿಲ್ಲವೇ "ತಾ ಕಂಡ ಶಿವಪಥವ'' ಎಲ್ಲರಿಗೂ ತಿಳಿಸುವುದು. ಶರ್ಮಾಜಿ ಅದೇ ಪಂಥದವರು. ತಮಗೆ ದೊರೆತ ಗಾಂಧೀ ಅನುಭವವನ್ನು, ವಿಚಾರವನ್ನು ಎಲ್ಲರಿಗೂ ತವಕದಿಂದ ತಿಳಿಸಿದರು. ಕನ್ನಡದಲ್ಲಿಯ ಗಾಂಧೀ-ಸರ್ವೋದಯ ಸಾಹಿತ್ಯದ ಸಿಂಹ ಪಾಲು ಕೃಷ್ಣಶರ್ಮರ ಕೊಡುಗೆಯೆ. ಶರ್ಮಾಜಿಯ ಒಡನಾಟವೇ ಒಂದು ಶಿಕ್ಷಣ ಸಂಸ್ಕಾರ. ಅವರು ಎಂದೂ ಒಂಟಿಯಾಗಿ ಇರಲಿಲ್ಲ. ಪ್ರತ್ಯೇಕವಾಗಿ ಇರಲಿಲ್ಲ. ದಂತಗೋಪುರಕ್ಕೆ ಅವರು ತುಂಬ ದೂರ. ತೀರ ಸಾಮಾನ್ಯರೊಂದಿಗೇ ಅವರಿಗೆ ಸಲೀಸು. ಯಾರನ್ನೂ ದೂರ ಮಾಡುತ್ತಿರಲಿಲ್ಲ. ತಮ್ಮ ವಿಚಾರಕ್ಕೆ ವಿರೋಧಿಗಳಾಗಿದ್ದವರಲ್ಲೂ ಅವರಿಗೆ ಸ್ನೇಹವೇ. ಅವರ ಮನೆಗೆ ಎಲ್ಲರೂ ಬರುತ್ತಿದ್ದರು. ಸಾಹಿತಿಗಳು, ರಾಜಕಾರಣಿಗಳು, ಉಗ್ರವಾದಿಗಳು, ಕಮ್ಯುನಿಷ್ಟರು, ಆರ್.ಎಸ್.ಎಸ್.ನವರು, ಹುಡುಗರು, ಮುದುಕರು ಎಲ್ಲರೂ. ತಾವು ಒಬ್ಬರೇ ಬೆಳೆಯಲಿಲ್ಲ. ಹತ್ತಿರ ಬಂದವರೆಲ್ಲ ಬೆಳೆಯಲು ನೆರವಾದರು. ಯಾರು ಯಾರಿಗೆ ಯಾವ ಯಾವ ಚೈತನ್ಯ ಇರುವುದೊ, ಆಸಕ್ತಿ ಇರುವುದೊ ಅದಕ್ಕೆ ಅನುಗುಣವಾಗಿ ಅವರವರ ವ್ಯಕ್ತಿತ್ವ ಹೊಮ್ಮಲು ಅವಕಾಶ, ಪ್ರೋತ್ಸಾಹ ಒದಗಿಸಿ ಕೊಟ್ಟರು. ಅವರ ಗರಡಿಯಲ್ಲಿ ತಯಾರಾದ ಪತ್ರಕರ್ತರು, ಬರಹಗಾರರು, ಸಾರ್ವಜನಿಕ ಕಾರ್ಯಕರ್ತರು ಅನೇಕ ಮಂದಿ.

ಶರ್ಮಾಜಿ ವಾಮನಮೂರ್ತಿ. ಆದರೆ ತ್ರಿವಿಕ್ರಮನ ಕೆಲಸ ಮಾಡಿದರು. ಹಳೆಯ ಮೈಸೂರು ಪ್ರಾಂತ್ಯದಲ್ಲಂತೂ ಸರಿಯೆ. ಆಗ ಉತ್ತರ ಕರ್ನಾಟಕದ ಸಂಪರ್ಕ ಈ ಕಡೆಗೆ ಕಡಿಮೆ ಇತ್ತು. ಶರ್ಮಾಜಿ ಅಲ್ಲಿಗೂ ಹೋದರು. ಧಾರವಾಡದ ಗೆಳೆಯರ ಗುಂಪಿನಲ್ಲಿ ಲೀನವಾದರು. ಆ ಪ್ರಾಂತ್ಯದ ಸಾಹಿತಿಗಳಲ್ಲಿ ಇವರು ಒಂದಾದರು. ದ.ರಾ.ಬೇಂದ್ರೆ, ವಿನಿತರಾಮಚಂದ್ರ, ಗೋಕಾಕ್, ಮುಗಳಿ, ಜಿ.ಬಿ.ಜೋಶಿ, ಮಧುರಚನ್ನ, ಗೋವಿಂದ ಚುಳಕಿ, ಶೇ.ಗೋ.ಕುಲಕರ್ಣಿ, ದ.ಬಾ. ಕುಲಕರ್ಣಿ, ಸಿಂಪಿ ಲಿಂಗಣ್ಣ, ಮೇವುಂಡಿಮಲ್ಲಾರಿ, ಆನಂದಕಂದ, ಬುರ್ಲಿಬಿಂದುಮಾಧವ ಮೊದಲಾದ ಅನೇಕ ಸಾಹಿತಿಗಳ, ವಿಚಾರವಂತರ ಜೊತೆಗೂಡಿದರು. ಗುಂಪಿನ ಆದರ್ಶಗಳ ಪ್ರಚಾರ ಮಾಡಿದರು.

ಮೂರನೆಯ ಹೆಜ್ಜೆ ಅವರು ಇಟ್ಟದ್ದು ನಿಜಾಮರ ನಾಡಿಗೆ. ಮದುವೆ ನಿಮಿತ್ತ ಹೈದರಾಬಾದ್ ಸಂಬಂಧ ಬೆಳೆಯಿತು. ಅಲ್ಲಿಗೆ ಹೋದರು. ಸುಮಾರು ಹತ್ತು ವರ್ಷ ಇದ್ದರು. ಅಲ್ಲಿ ಕಗ್ಗತ್ತಲೆಯ ಖಂಡವಾಗಿದ್ದ ಆ ಸಂಸ್ಥಾನದಲ್ಲಿ ಜನಜಾಗೃತಿಯ ಪಂಜನ್ನು ಹತ್ತಿಸಿ ಬೆಳಗಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದರು. ಕೊನೆಗೆ ಅಲ್ಲಿನ ಎಲ್ಲ ತಳಮಳಕ್ಕೂ "ಕೃಷ್ಣಮೂಲ ಅನರ್ಥಾಯ'' ಎಂದು ಆಗಿನ ನಿಜಾಂ ದೌಲತ್ತು ಭಾವಿಸಿ ಶರ್ಮಾಜಿಯನ್ನು ಗಡೀಪಾರು ಮಾಡಿತು. ೧೯೩೮ರ

ಆಗ! ಸುಮಾರು ಏಳುವರ್ಷ [illegible]ಜೆಯು ಬಾಳು ಗಾಳಿಗೆ ಇಟ್ಟ ಸೊಡರಾಗಿತ್ತು. ಸಂಸಾರ ಹೈದರ[illegible]ರಗೆ ಎಲ್ಲಿಯೋ! ವಾರ್ಧಾಯಾತ್ರೆಯೂ ಆಯಿತು. ಹಳೆಯ ಮೈ[illegible] ಎಡ ಪ್ರಾಂತ್ಯ, ಹೈದರಾಬಾದ್ ಕರ್ನಾಟಕ ಈ ಮೂರರಲ್ಲೂ ಕೃಷ್ಣಶರ್ಮಾ[illegible]ತಿರು. ಕರ್ನಾಟಕ ಆಗುವ ಎಷ್ಟೋ ಮೊದಲೇ ! ಹೀಗೆ ಮೂರೂ ಪ್ರದೇಶ[illegible] ಬೆಸುಗೆಯ ಕೊಂಡಿ ಆಗಿದ್ದರು. ಇವತ್ತೂ ರಾಯಚೂರು, ಗುಲಬರ್ಗಾ, ಧಾರ[illegible]ಡ ಅಲ್ಲೆಲ್ಲ ಸಿದ್ದವನಹಳ್ಳಿಯವರ ಹೆಸರು ಜನಜನಿತ.

ಕೃಷ್ಣಶರ್ಮರ ಬರ[illegible]ಣಿಗೆಯ ಬಗ್ಗೆಯಾಗಲಿ, ಪತ್ರಿಕಾ ಕಾರ್ಯದ ಬಗ್ಗೆಯಾಗಲಿ ಏನು ಹೇಳಿದರೂ ಕಡಿಮೆಯೆ. ಆ ಶೈಲಿ, ಆ ಗದ್ಯದ ಸೊಗಸು, ಆ ಸತ್ಯನಿಷ್ಠೆ, ಆ ಸರಳತೆ, [illegible]ಡಿಕಟ್ಟು, ವಾಚ್ಯ-ವ್ಯಂಗ್ಯಾರ್ಥಗಳ ಮಧುರ ಮಿಲನ, ಆ ಚಿಂತನಾ ಗಹನತೆ ಆ ಶುಭದೃಷ್ಟಿ ಎಲ್ಲ ಅವರವೇ ವೈಶಿಷ್ಟ್ಯಗಳು. ‘ಪರ್ಣಕುಟಿ’, ‘ವಾರ್ಧಾಯಾತ್ರೆ’, ‘ಮಾತಿನ ಮಂಟಪ’, ‘ವ್ಯಕ್ತಿಚಿತ್ರಗಳು’, ‘ರಾಮಾವತಾರ’, ‘ಕೃಷ್ಣಾವತಾರಗಳು’-ಒಂದೊಂದೂ ಹೊಸಗನ್ನಡ ತೋಟದಲ್ಲಿನ ಸಿಂಗಾರ ವೃಕ್ಷಗಳು. ಅವರು ತಮ್ಮ ಬಗ್ಗೆ ಬರೆದಿದ್ದರೆ ಸೊಗಸಾದ ಯುಗ ದಾಖಲೆ ಆಗುತ್ತಿತ್ತು. ಆದರೆ ತಮ್ಮ ಬಗ್ಗೆ ಹೇಳಿಕೊಳ್ಳುವುದು ಅವರ ಜಾಯಮಾನಕ್ಕೆ ವಿರುದ್ಧ. ಅವರು ಬರೆದ ನೆನಪಿನ ಚಿತ್ರಗಳಲ್ಲಿ ತಮಗಿಂತ ತಮ್ಮ ಬಾಲ್ಯ-ತಾರುಣ್ಯಗಳಲ್ಲಿನ ಇತರರ ಬಗ್ಗೆಯೇ ಹೇಳಿದರು. ಅವರ ಸರಳತೆ ಗಾದೆ ಮಾತು. ಒಳಗೂ ಅಷ್ಟೆ ಹೊರಗೂ ಅಷ್ಟೆ.

ಸಾರ್ವಜನಿಕ ಕಾರ್ಯದಲ್ಲಿ ಅವರ ನಿಸ್ಪೃಹತೆ ಈಗ ನಂಬಲೂ ಸಾಧ್ಯವಿಲ್ಲದ್ದು. ಒಮ್ಮೆ ಇಂಜಿನಿಯರಿಂಗ್ ಕಾಲೇಜು ಪ್ರವೇಶ ಸಮಿತಿಯಲ್ಲಿ ಇದ್ದರು. ಮೊದಲ ಸಭೆಯಲ್ಲೇ ಅವರು, ಸದಸ್ಯರು ತಮಗೆಂದೇ ಇರಿಸಿಕೊಳ್ಳುತ್ತಿದ್ದ ಕೋಟಾ ಪದ್ಧತಿಯನ್ನು ವಿರೋಧಿಸಿ ಎಲ್ಲ ಹಂಚಿಕೆಯೂ ನಿಯಮಾನುಸಾರ ನಡೆಯುವಂತೆ ಪಟ್ಟು ಹಿಡಿದು ಸಾಧಿಸಿದರು. ಪ್ರತ್ಯೇಕ ಕೋಟಾಗೆ ಬಾಯಿಬಿಟ್ಟಿದ್ದ ಇತರ ಸದಸ್ಯರು ಪೆಚ್ಚುಮೋರೆ ಹಾಕಿಕೊಳ್ಳಬೇಕಾಯಿತು. ಹಾಗೆ ಸೀಟು ಮಾರಾಟವನ್ನು ತಪ್ಪಿಸಿದರು.

ಶ್ರೀರಾಮ ಸಹಕಾರಿ ಬ್ಯಾಂಕ್, ಬಡಜನರಿಗಾಗಿ ಅವರೇ ಸ್ಥಾಪಿಸಿ ಬೆಳೆಸಿದ ಸಂಸ್ಥೆ. ಅಲ್ಲಿ ತಾವೇ ಕೂತು ಲೆಕ್ಕ ಬರೆಯುತ್ತಿದ್ದರು. ಅದೂ ಎಲ್ಲ ಕನ್ನಡದಲ್ಲಿ! ಸಮಿತಿಯ ಸಭೆಯಲ್ಲಿ ಕಾಫಿ ತಿಂಡಿಬೇಕು ಎಂಬ ಪಿಸುಮಾತು ಇದ್ದಾಗ ತಾವೇ ಜೇಬಿನಿಂದ ರೂಪಾಯಿ ತೆಗೆದು ‘ತರಿಸಿ’ ಎಂದು ಕೊಟ್ಟರು. ಒಂದೊಂದು ಸಮಿತಿ ಸಭೆಯಲ್ಲಿ ಒಬ್ಬೊಬ್ಬರ ಖರ್ಚು ಎಂದಾಯಿತು. ಸಾರ್ವಜನಿಕ ಹಣ ವಿಷದಂತೆ. ಕೈಯಲ್ಲೂ ಮುಟ್ಟಬಾರದು ಎನ್ನುತ್ತಿದ್ದರು, ಕೊನೆಗೆ ರಾತ್ರಿ ಊಟ ಮುಗಿಸಿ ಸಭೆ ಸೇರುವುದಾಯಿತು. ಕಾಫಿ ತಿಂಡಿ ತಾಪತ್ರಯವೇ ಹೋಯಿತು.

ಇಂಥ ಪ್ರಸಂಗ ಎಷ್ಟೋ! ಶರ್ಮಾಜಿ ಸೊಗಸಿನ ಮಾತುಗಾರರು. ಮಾತು, ಬರಹ, ಓಡಾಟ ಮೂರೂ ಅವರ ತ್ರಿಪುಟಿ ಇದ್ದಂತೆ. ಗಂಟೆಗಟ್ಟಲೆ ಮಾತು. ಸವಿಮಾತು, ವಿಚಾರಗರ್ಭಿತ ಮಾತು, ಮನ ಅರಳಿಸುವ ಮಾತು. ಚುನಾವಣೆಗಳಲ್ಲಿ ಬೆಳಗಿನಿಂದ ಸಂಜೆವರೆಗೆ ಮಾತಾಡಿ ಮಾತಾಡಿ ಜನ ಸಮೂಹದ ಮನ ತಿರುಗಿಸಿ ಉಮೇದುವಾರರನ್ನು ಗೆಲ್ಲಿಸುತ್ತಿದ್ದರು, ತಾವು ಮಾತ್ರ ಯಾವ ಚುನಾವಣೆಗೂ ನಿಲ್ಲಲಿಲ್ಲ. ಮೂರು ನಾಲ್ಕು ಬಾರಿ ಸ್ಥಾನಮಾನ ಬಾಗಿಲಿಗೇ ಬಂದಾಗಲೂ ನಯವಾಗಿ ನಿರಾಕರಿಸಿಬಿಟ್ಟರು. ಶರ್ಮಾಜಿಯ ಕೊನೆಯ ದಿನಗಳು ಯಾತನಾಮಯವಾದವು. ಪಾರ್ಕಿನ್ ಸನ್ ಕಾಯಿಲೆಯಿಂದ ಶರೀರ ಸೊರಗಿ ಹೋಯಿತು. ಸುತ್ತಲ ಸ್ಥಿತಿಗತಿ, ಮೌಲ್ಯ ಪತನಗಳಿಂದ, ತಮ್ಮ ನಿರ್ಬಲತೆಯ ನಿಸ್ಸಹಾಯಕತೆಯಿಂದ ಮನಸ್ಸು ಕುಗ್ಗಿಹೋಯಿತು. ೧೪-೧೦-೧೯೭೩ ಭಾನುವಾರ ಕೃಷ್ಣಶರ್ಮರು ಈ ಎಲ್ಲ ಯಾತನೆಯಿಂದ ಮುಕ್ತಿ ಪಡೆದರು. ಶರ್ಮಾಜಿಯವರನ್ನು ನೆನಪಿಸಿಕೊಳ್ಳುವ ಜನ ಇನ್ನೂ ಇದ್ದಾರೆ. ಅವರಿಗೆಲ್ಲ ಶರ್ಮಾಜಿಯ ನೆನಪು ಹೃದ್ಯ, ಚೇತೋಹಾರಿ,

* * *

ವಿಶ್ವ ಪುಸ್ತಕಗಳ ರಾಜಧಾನಿ

2003–2004ನೇ ಸಾಲಿಗೆ ದಿಲ್ಲಿಯನ್ನು ವಿಶ್ವ ಪುಸ್ತಕಗಳ ರಾಜಧಾನಿ ಎಂದು ಘೋಷಿಸಲಾಗಿದೆ. ಇಂತಹ ಗೌರವ ಈ ಮೊದಲು ಅಲೆಗ್ಸಾಂಡ್ರಿಯಾ ಮತ್ತು ಮಾಡ್ರಿಡ್ ನಗರಗಳಿಗೆ ದೊರೆತಿತ್ತು.

ಪ್ರೀತಿ ಮತ್ತು ನಾವು

–ಟಿ. ಎಸ್. ಗೊರವರ

ಇವತ್ತು ನಾವು ಹಲವು ದ್ವಂದ್ವ, ತಲ್ಲಣಗಳ ನಡುವೆ ತೀವ್ರತರವಾಗಿ ಬಾಧಿಸುವ ನೋವುಗಳೊಂದಿಗೆ ಬದುಕನ್ನು ಸಾಗಿಸುತ್ತಿದ್ದೇವೆ. ವೈಯಕ್ತಿಕ ಕಾಮನೆಗಳನ್ನು ಪೂರೈಸಿಕೊಳ್ಳಲು ವಿನಾಕಾರಣ ಬೇರೊಬ್ಬರೊಂದಿಗೆ ಹಗೆತನ, ಅಸೂಯೆ ಬೆಳೆದು ಮೈತ್ರಿಭಾವನೆ ಕಷ್ಟಸಾಧ್ಯವಾಗಿದೆ. ಹರಳುಗಟ್ಟಬೇಕಾದ ಮಾನವೀಯತೆಯ ಸಂಬಂಧಗಳು ಒಡೆದು ಚೂರಾಗುತ್ತಿವೆ. ನಾನು ಕಂಡಂತೆ ಅದೆಷ್ಟೋ ವ್ಯಕ್ತಿಗಳು
ದಿನನಿತ್ಯ ಬಂಗಾರದ ತಟ್ಟೆಯಲ್ಲಿ ಊಟ ಮಾಡುವಂಥ ಸಿರಿವಂತಿಕೆ ಅವರದಾಗಿದ್ದರೂ ಅವರ ಬದುಕಲ್ಲಿ ಎಳ್ಳಷ್ಟೂ ಸುಖವಿಲ್ಲ. ಏಕಾಂಗಿತನ ಬೆಂಗಾವಲಾಗಿ ಕಾಡುತ್ತದೆ. ಚಿಂತೆ ಚಿತೆಯಾಗಿ ಅವರ ಹೃದಯವನ್ನು ದಹಿಸುತ್ತದೆ. ಪ್ರೀತಿಯ ಅರಿವು ಮತ್ತು ಅದರ ಸಾಮೀಪ್ಯದಿಂದ ಗಾವುದ ದೂರವಿರುವ ಹೃದಯಗಳಿಗೆ ಈ ಅನುಭವ ಆಗಿರಲಿಕ್ಕೆ ಸಾಕು!

ಮೈತ್ರಿ, ಮಮತೆ, ಕಾರುಣ್ಯ, ಸಹೃದಯತೆ ಇತ್ಯಾದಿ ಪ್ರೀತಿಯ ಇನ್ನೊಂದು ಮುಖಗಳು. ಅದು ಜಾತಿಯ ಕಟ್ಟುಪಾಡುಗಳನ್ನೇ ಮೀರಿ ನಿಲ್ಲುವಂಥದ್ದು, ಅಂತರಜಾತೀಯ ವಿವಾಹಗಳು ಜರುಗುತ್ತಿರುವುದು ಪ್ರೀತಿಯ ದ್ಯೋತಕವಾಗಿಯೆ!

ಜಾಗತಿಕ ನೆಲೆಯನ್ನು ಒಳಗೊಂಡು ಆಯಾ ಕಾಲ ಮತ್ತು ಆ ಪ್ರದೇಶದ ಕೆಲ ಜನರಲ್ಲಿ ಪ್ರೀತಿಯು ಈ ತನಕ ಜೀವಂತವಾಗಿ ಬದುಕುಳಿದುಕೊಂಡು ಬಂದಿದೆ.

ಯಾರ ಮೂಗಿಗೆ ಪ್ರೀತಿಯ ಗಂಧಗಾಳಿ ತಾಗಿಲ್ಲವೋ ಅವರ ವ್ಯಕ್ತಿತ್ವದಲ್ಲಿ ಮನುಷ್ಯತ್ವದ ಅಥವಾ ಮಾನವೀಯತೆಯ ಎಳೆಗಳಿಲ್ಲ. ಅಂಥವರು ನಿಜಕ್ಕೂ ದುಷ್ಟರು, ಸಮಾಜ ಘಾತಕರು ಆಗುವುದರಲ್ಲಿ ಸಂಶಯವಿಲ್ಲ.

ಗುಜರಾತಿನಲ್ಲಿ ನಡೆದ ನರಮೇಧ ನೆನೆದರೆ ಆ ಬರ್ಬರತೆ ನಡೆದಿದ್ದು ನಿಜವೇ ಎಂಬ ಗುಮಾನಿ ಬರುತ್ತದೆ. ಗರ್ಭಿಣಿಯ ಹೊಟ್ಟೆ ಬಗೆದು ರಕ್ತಸಿಕ್ತವಾದ ಕೂಸನ್ನು ಬೆಂಕಿಗೆ ಎಸೆಯಲಾಯಿತೆಂದು ವರದಿಯಾಗಿದೆ. ಸತ್ತವರು ವೈಯಕ್ತಿಕವಾಗಿ ಯಾವ ತಪ್ಪೂ ಮಾಡಿದವರಲ್ಲ. ಕೊಲೆಗೈದವರಿಗೂ ಅವರ ಮೇಲೆ ವೈಯಕ್ತಿಕ ದ್ವೇಷಗಳೇನೂ ಇರಲಿಲ್ಲ. ಸಹಮಾನವರನ್ನು ನಿರ್ದಯವಾಗಿ ಕೊಲ್ಲುವ ಈ ಕ್ರೌರ್ಯವನ್ನು ಹುಟ್ಟಿಸಿದವರು ಯಾರು?

ಮನುಷ್ಯತ್ವದ ಅಂತಃಸತ್ವವನ್ನು ಅರಿಯದ, ದೇಶಪ್ರೇಮದ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳಲು ಜನಸಾಮಾನ್ಯರ ಮನಸ್ಸುಗಳನ್ನು ಮಂಕುಗೊಳಿಸಿ ಅವರಲ್ಲಿ ಈಡೇರಲಾರದ ಕನಸುಗಳನ್ನು ಬಿತ್ತಿ, ಸಾಮಾಜಿಕ ಅಸಮಾನತೆ, ಅಜ್ಞಾನ ಮತ್ತು ದಾರಿದ್ರ್ಯವನ್ನು ಮುಂದುವರೆಯುವಂತೆ ಮಾಡುತ್ತಿರುವದು ಕೋಮುವಾದಿಗಳೆ ಎಂಬುದು ಸ್ಪಷ್ಟವಾಗೇ ಇದೆ.

ತೀವ್ರ ಬರಗಾಲ ಕಾಡಿ, ದೇಶಾದ್ಯಂತ ಹಲವಾರು ರೈತರು ಅವ್ಯಾಹತವಾಗಿ ಆತ್ಮಹತ್ಯೆಮಾಡಿಕೊಂಡರು. ನೊಂದ ರೈತ ಸಮುದಾಯಕ್ಕೆ ಧೈರ್ಯತುಂಬುವ ಸಾಹಸ ಮಾಡದೆ ಜೀವಕಳೆದುಕೊಂಡ ಕುಟುಂಬಗಳಿಗೆ ಪರಿಹಾರಕೊಡಿಸುವ ನಿಟ್ಟಿನಲ್ಲಿ ಧ್ವನಿ ಎತ್ತದೆ ಇರುವಂತವರು, ಶಿಕ್ಷಣದ ಮೌಲ್ಯ, ನಿರುದ್ಯೋಗದ ಬಗ್ಗೆ ಕಿಂಚಿತ್ತೂ ಆಸ್ಥೆವಹಿಸದವರು, ಧರ್ಮ ತನ್ನ ಮೂಲ ಅರ್ಥಕ್ಕಿಂತ ತೀರ ಬೇರೆಯೇ ಆಗಿ ಪರಸ್ಪರ ದ್ವೇಷ, ಅಸಹಿಷ್ಣುತೆ, ಪ್ರಚೋದನೆ, ಹಿಂಸೆ ಮತ್ತು ದೌರ್ಜನ್ಯಗಳಿಗೂ ಬಳಕೆಯಾಗುತ್ತಿರುವ ಹಾಗೆ ಶ್ರಮಿಸುತ್ತಿರುವಂತವರಿಗೆ ಮಾನವೀಯತೆ ಇಲ್ಲ. ಇಂತಹ ನೆಲೆಗಳಿಂದಲೇ ಹಿಂಸೆ ವಿಶ್ವವ್ಯಾಪಿಯಾಗಿ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿದೆ.


ಇರಾಕಿನಲ್ಲಿ ಅಮೆರಿಕಾದ ಅಮಾನುಷ ಬರ್ಬರ ಕೃತ್ಯಗಳು ಇಪ್ಪತ್ತನೇ ಶತಮಾನದ ಎರಡನೇ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ನಡೆಸಿದ ಹಿಂಸಾಚಾರ, ದೌರ್ಜನ್ಯಗಳನ್ನು ನೆನಪಿಗೆ ತರುವುದಲ್ಲದೆ, ಅದನ್ನು ಮೀರಿಸುವ ಅಮಾನುಷ ಕ್ರೌರ್ಯ ಇರಾಕಿನಲ್ಲಿ ಅಮೇರಿಕಾದ ಅಧ್ಯಕ್ಷ ಜಾರ್ಜ ಬುಷ್ ನಾಯಕತ್ವದಲ್ಲಿ ಜರುಗಿದೆ, ಜರುಗುತ್ತಿದೆ.

ಇರಾಕಿನ ಕೈದಿಗಳಿಗೆ ಅಮೆರಿಕಾದ ಜೈಲಿನಲ್ಲಿ ಕೊಟ್ಟ ಶಿಕ್ಷೆ ಎಂತವರನ್ನೂ ಕೆರಳಿಸುವಂತಹದ್ದು. ಸಾಮ್ರಾಜ್ಯಶಾಹಿ ಅಮೆರಿಕದ ಧೋರಣೆಗಳು ನೀತಿಗೆಟ್ಟವು. ಅಂತಃ ಕರಣದ ಭಾಷೆ ಅವರಿಗೆ ತಿಳಿಯದು.

ಇತ್ತೀಚಿನ ದಿನಗಳಲ್ಲಂತೂ ಎಲ್ಲದಕ್ಕೂ ಹಿಂಸೆಯನ್ನೆ ಪರಿಹಾರವಾಗಿ ಬಳಸುತ್ತಿರುವುದು ವಿಷಾದನೀಯ. ಮುದುಡಿದ ಮನಸ್ಸುಗಳನ್ನು ಅರಳಿಸಿ, ಸಾವಿರಾರು ಲಾಡೆನ್‌ರನ್ನು ಹಿಟ್ಲರ್‌ಗಳನ್ನು ಮನುಷ್ಯರನ್ನಾಗಿಸುವ ಶಕ್ತಿ ಪ್ರೀತಿಗಿದೆ. ಜಗತ್ತಿನ ಅಹಮಿಕೆಯನ್ನು ಕೂಡಾ ಪ್ರೀತಿಯೊಂದೇ ಅಳಿಸಬಲ್ಲದು. ಬಂದೂಕಿನ ನಳಿಕೆಯಲ್ಲಿ ಗುಬ್ಬಿಗೂಡು ಕಟ್ಟಬೇಕಾದರೆ ಅದು ಪ್ರೀತಿಯ ದೆಸೆಯಿಂದ ಮಾತ್ರ ಸಾಧ್ಯ.

ವಿಧವಾ ವಿವಾಹ ಪ್ರವರ್ತಕ : ಗಡಿಯಾರಂ ರಾಮಕೃಷ್ಣ ಶರ್ಮ

–ಕೆ.ಆರ್. ಮೋಹನ್



ಶ್ರೀ ಗಡಿಯಾರಂ ರಾಮಕೃಷ್ಣಶರ್ಮರು ಬಹುಶ್ರುತರು ಹಾಗೂ ಬಹುಮುಖ ಪ್ರತಿಭಾನ್ವಿತರು. ಶರ್ಮರೇ ಬರೆದ 'ವಿದ್ಯಾರಣ್ಯ' ಪುಸ್ತಕದಲ್ಲಿ ಅವರ ಸಂಕ್ಷಿಪ್ತ ಪರಿಚಯವಿದೆ. ಇದಲ್ಲದೆ ಡಾ॥ ಶೇಷಶಾಸ್ತ್ರಿ ಎಂಬುವವರು ವಿಸ್ತಾರವಾದ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಆದರೆ ಶರ್ಮರು ಮಾಡಿದ ಇನ್ನೊಂದು ಪ್ರಮುಖ ಸಾಧನೆಯ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ನನಗೆ ತಿಳಿದ ಮಾಹಿತಿಯನ್ನು ನಿಮ್ಮ ಮುಂದೆ ಇಡುತ್ತೇನೆ.

೧೯೪೦ರಲ್ಲಿ ಶರ್ಮರು ಗುರುಕುಲ ವಿದ್ಯಾಭ್ಯಾಸವನ್ನು ಮುಗಿಸಿ ತುರ್ತಾಗಿ ಅವರ ಅಕ್ಕನ ಊರಾದ ಅಲಂಪುರಕ್ಕೆ ಹೋಗಬೇಕಾಯಿತು. ಹೋದ ಮೇಲೆ ಕೋರ್ಟು, ಕಚೇರಿ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಾಯಿತು. ಆಗ ಅವರಿಗೆ ೨೧ ವರ್ಷ.

ರೆಡ್ಡಿ ಜನಾಂಗಕ್ಕೆ ಸೇರಿದ ೧೨ ವರ್ಷದ ಹುಡುಗಿ ಮದುವೆಯಾದ ಒಂದು ವಾರದಲ್ಲಿಯೇ ಕ್ಷಯ ರೋಗಿಯಾಗಿದ್ದ ಅವಳ ಗಂಡ ಸತ್ತು ಹೋಗಿ ವಿಧವೆಯಾದಳು. ಪದ್ಧತಿ ಪ್ರಕಾರ ಕೈಗೆ ಹಾಕಿಕೊಂಡಿದ್ದ ಬಳೆಯನ್ನು ಒಡೆದು ಹಾಕಿ ಬರೀ ಕೈಲಿ ಇರಬೇಕಾಗಿತ್ತು. ಅವಳು ಬಳೆಗಳನ್ನು ತೆಗೆಯಲು ಒಪ್ಪಲಿಲ್ಲ. ಹುಡುಗಿ ಎಷ್ಟು ಅಮಾಯಕಳೆಂದರೆ ಗಂಡ ಸತ್ತ ದುಃಖಕ್ಕಿಂತ ತಾನು ಬಳೆಗಳನ್ನು ತೊಡುವ ಹಾಗಿಲ್ಲವೆಂಬ ದುಃಖವೇ ಜಾಸ್ತಿಯಾಗಿತ್ತು! ಹುಡುಗಿಯ ತಂದೆ–ತಾಯಂದಿರು, ಊರ ಹಿರಿಯರು ಎಷ್ಟು ಹೇಳಿದರೂ ಅವಳು ಹಿಡಿದ ಪಟ್ಟನ್ನು ಸುತರಾಂ ಬಿಡಲಿಲ್ಲ. ಅಲ್ಲಿನ ಪುರೋಹಿತರು ನರಕದ ಹಾಗೂ ಪಾಪದ ಭಯವನ್ನು ಹುಟ್ಟಿಸಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿದ್ದರು. ಆಗ ಕೆಲವು ಹಿತೈಷಿಗಳು ಶರ್ಮರ ಹತ್ತಿರ ಬಂದು ಧರ್ಮಶಾಸ್ತ್ರ ಪ್ರಕಾರ ಬಳೆಗಳನ್ನು ತೆಗೆದು ಹಾಕಬೇಕೆ ಎಂದು ಅಭಿಪ್ರಾಯ ಕೇಳಿದರು. ಶರ್ಮರು ಗುರುಕುಲದಲ್ಲಿ ಧರ್ಮಶಾಸ್ತ್ರವನ್ನು ಅಧ್ಯಯನ ಮಾಡಿರಲಿಲ್ಲ. ಕೂಡಲೇ ಶರ್ಮರು ಮನು, ಯಾಜ್ಞವಲ್ಕ್ಯ, ಪರಾಶರ ಸ್ಮೃತಿಗಳನ್ನು ತರಿಸಿ ಕೂಲಂಕಷವಾಗಿ ಅಧ್ಯಯನ ಮಾಡಿ ಲೌಕಿಕ ಪದ್ಧತಿ ಪ್ರಕಾರ ಬಳೆಗಳನ್ನು ತೆಗೆದು ಹಾಕಿದರೂ ಅದಕ್ಕೆ ಶಾಸ್ತ್ರಾಧಾರ ವಿಲ್ಲವೆಂದು ನಿಖರವಾಗಿ ತಿಳಿಸಿ ಹುಡುಗಿಗೆ ಬಳೆಗಳನ್ನು ಹಾಕಿಕೊಳ್ಳಲು ಶರ್ಮರು ಅನುಕೂಲ ಮಾಡಿಕೊಟ್ಟರು.

ಪಕ್ಕದ ಹಳ್ಳಿ ನಿಡಿದೂರುನಲ್ಲಿ ಒಬ್ಬ ವೈಷ್ಣವ ಅರ್ಚಕ ತನ್ನ ೧೭ ವರ್ಷದ

ವಿಧವೆ ಮಗಳಿಗೆ ಮರು ಮದುವೆ ಮಾಡಲು ಬಹಳ ಪ್ರಯತ್ನಪಟ್ಟ. ಆದರೆ ಅವನಿಗೆ ಜನಬೆಂಬಲವಿರಲಿಲ್ಲ. ಮೇಲಾಗಿ ಶಾಸ್ತ್ರ ವಿರೋಧವೆಂದು ಬ್ರಾಹ್ಮಣರ ಸಮುದಾಯ ಗುಲ್ಲೆಬ್ಬಿಸಿತ್ತು. ಹತಾಶನಾಗಿ ಶರ್ಮರ ಸಹಾಯವನ್ನು ಯಾಚಿಸಿದ. "ಶಾಸ್ತ್ರ ಪ್ರಕಾರ ವಿಧವಾ ವಿವಾಹಕ್ಕೆ ವಿರೋಧವಿಲ್ಲ, ನಾನು ಬಂದು ನಿಂತು ಮದುವೆ ಮಾಡಿಸುತ್ತೇನೆ" ಎಂದು ಅರ್ಚಕನಿಗೆ ಧೈರ್ಯಕೊಟ್ಟರು. ಕೂಡಲೇ ವಿಧವಾ ವಿವಾಹದ ಬಗ್ಗೆ ಶಾಸ್ತ್ರಾರ್ಥ ಚರ್ಚೆಮಾಡಲು ಕೇಂದ್ರ ಪ್ರದೇಶವಾದ ರಾಮಾಪುರದಲ್ಲಿ ದಿನ, ಕಾಲ, ಸ್ಥಳವನ್ನು ಗೊತ್ತುಮಾಡಿ ಸುತ್ತ ಮುತ್ತಣ ಪ್ರದೇಶಗಳ ಬ್ರಾಹ್ಮಣ ಸಮುದಾಯಕ್ಕೆ ಆಹ್ವಾನ ಕಳುಹಿಸಿದರು. ನಿಗದಿತ ದಿನ ಚರ್ಚೆಗೆ ಯಾರೂ ಬರಲಿಲ್ಲ. ಶ್ರೀ ಶರ್ಮರ ಮಾರ್ಗದರ್ಶನದಲ್ಲಿ ತನ್ನ ಮಗಳ ಲಗ್ನವು ನಡೆಯುತ್ತದೆ ಎಂದು ಅರ್ಚಕನು ಅಚ್ಚುಹಾಕಿಸಿ ಲಗ್ನ ಪತ್ರಿಕೆಗಳನ್ನು ಹಂಚಿದನು. ಅರ್ಚಕನ ಮಗಳ ಮರುವಿವಾಹ ಸಾಂಗವಾಗಿ ನೇರವೇರಿತು. ಮುಂದೆ ಅದೇ ರೀತಿಯಲ್ಲಿ ಶರ್ಮರು ೫ ವಿಧವಾ ವಿವಾಹಗಳನ್ನು ಮಾಡಿಸಿದರು.

ಈ ಮಧ್ಯೆ ಶರ್ಮರಿಗೆ ಒಂದು ವಿಚಾರ ಬಂತು. "ನಾನು ಬೇರೆಯವರಿಗೆ ಶಾಸ್ತ್ರಾರ್ಥ ಹೇಳಿ ವಿಧವಾ ವಿವಾಹ ಮಾಡಿಸುತ್ತಿದ್ದೇನೆ. ಯಾರಾದರೂ ಸ್ವಾಮೀ, ನಿಮ್ಮ ಶಾಸ್ತ್ರ ಉಪದೇಶಗಳು ಬೇರೆಯವರಿಗೆ ಮಾತ್ರವೇ? ನಿಮಗೆ ಅನ್ವಯಿಸುವುದಿಲ್ಲವೆ? ನಿವು ಯಾಕೆ ವಿಧವಾ ವಿವಾಹ ಮಾಡಿಕೊಳ್ಳಬಾರದು? ಎಂದು ಕೇಳಬಹುದು. ನನ್ನ ಹತ್ತಿರ ಇದಕ್ಕೆ ಸರಿಯಾದ ಉತ್ತರವಿರುವುದಿಲ್ಲ. ಆದ್ದರಿಂದ ನಾನು ಇತರರಿಗೆ ಉಪದೇಶಮಾಡುವುದನ್ನು ನಾನೇ ಅನುಷ್ಠಾನಕ್ಕೆ ತಂದರೆ ಆತ್ಮವಂಚನೆ ಆಗುವುದಿಲ್ಲ ಹಾಗೂ ಜನರಿಗೆ ನನ್ನ ಮಾತಿನಲ್ಲಿ ವಿಶ್ವಾಸವಾಗುತ್ತದೆ" ಎಂದು ಭಾವಿಸಿ, ತಾನು ವಿವಾಹವಾದರೆ ವಿಧವೆ ಕನ್ಯೆಯನ್ನೇ ಮದುವೆ ಆಗುತ್ತೇನೆ ಎಂದು ತಮ್ಮ ಮಿತ್ರರ ಹತ್ತಿರ ಘೋಷಿಸಿದರು.

ಅಲಂಪೂರಿನಲ್ಲಿಯೇ ಶರ್ಮರ ಬಾವನ ಸಂಬಂಧಿ 'ಕಮಲಾ' ಎಂಬ ಸ್ಫುರದ್ರೂಪಿ ಹಾಗೂ ಗುಣವತಿ ಹುಡುಗಿ ಇದ್ದಳು. ಅವಳಿಗೆ ೭ನೇ ವರ್ಷಕ್ಕೆ ಮದುವೆ ಆಗಿ ಗಂಡ ಸತ್ತು ೯ನೇ ವರ್ಷಕ್ಕೆ ಬಾಲವಿಧವೆ ಆಗಿದ್ದಳು. ಅವಳು ಶರ್ಮರ ಮನೆಗೆ ನಿತ್ಯ ಬಂದು ಶರ್ಮರ ತಾಯಿಗೆ ಮನೆ ಕೆಲಸಕಾರ್ಯಗಳಲ್ಲಿ ಸಹಾಯಮಾಡಿ ಅಚ್ಚು ಮೆಚ್ಚಿನ ಹುಡುಗಿಯಾಗಿದ್ದಳು. ಶರ್ಮರು ಅವಳನ್ನು ಮೊದಲು ನೋಡಿದಾಗ ಅವಳ ವಯಸ್ಸು ೧೬. ಮುಂದೆ ಒಂದು ದಿನ ಶರ್ಮರ ತಾಯಿ ಶರ್ಮರಿಗೆ 'ಈ ಹುಡುಗಿ ಒಳ್ಳೆ ಶೀಲವತಿ. ಯಾವುದಾದರೂ ಒಳ್ಳೆಗಂಡು ನೋಡಿ ಮರುಮದುವೆ ಮಾಡಿಸು' ಎಂದು ಹೇಳಿದರು. 'ಆಗಲಿ' ಎಂದು ಹೇಳಿ ಶರ್ಮರು ಸುಮ್ಮನಾದರು. ಮುಂದೆ ಎರಡು ವರ್ಷದ ನಂತರ ಮದುವೆಯಾಗಲು ಅವರ ತಾಯಿ ಶರ್ಮರ ಮೇಲೆ ಒತ್ತಾಯ ಮಾಡಿದಾಗ, "ಅಮ್ಮ, ಬೇರೆಯವರನ್ನು ಯಾಕೆ ಹುಡುಕಬೇಕು? ಕಮಲ ಎಂಬ ವಿಧವಾ ಕನ್ಯೆಯನ್ನೇ ಮದುವೆ

ಆಗುತ್ತೇನೆ'' ಎಂದು ಶರ್ಮರು ಹೇಳಿದರು. ಮಗನ ಉತ್ತರ ಕೇಳಿ ತಾಯಿ ಹೌಹಾರಿದರು. 'ನೀನು ಸಂಪ್ರದಾಯ ಮುರಿದು ವಿಧವಾ ಕನ್ಯೆಯನ್ನು ಮದುವೆ ಆದರೆ ನಾವೆಲ್ಲಾ ಕಷ್ಟವನ್ನು ಅನುಭವಿಸಬೇಕಾಗುತ್ತದೆ' ಎಂದು ಹೇಳಿದರು. 'ಅಮ್ಮ, ನೀನೆ ಹೇಳುತ್ತಿ "ಹುಡುಗಿ ಲಕ್ಷಣವಾಗಿದ್ದಾಳೆ''. ಹಾಗಿದ್ದಲ್ಲಿ ಅವಳನ್ನು ಯಾಕೆ ನಿನ್ನ ಸೊಸೆಯನ್ನಾಗಿ ಮಾಡಿಕೊಳ್ಳಬಾರದು'? ಎಂದು ಕೇಳಿದರು. ಅವರ ತಾಯಿಯ ಮನಸ್ಸನ್ನು ಒಪ್ಪಿಸಲು ಹಲವು ತಿಂಗಳು ಬೇಕಾಯಿತು.

ಮುಂದೆ ಅಂದರೆ ೧೯೪೩ರಲ್ಲಿ ಅಲಂಪೂರಿನಲ್ಲಿ ಶರ್ಮರ ಹಾಗೂ ಅವರ ಸ್ನೇಹಿತರ ಪ್ರಯತ್ನಗಳಿಂದ ಆಂಧ್ರ ಮಹಾಸಭೆಯ ಅಧಿವೇಶನ ಜರುಗಲು ಏರ್ಪಾಡಾಯಿತು. ನಿಜಾಂ ಪ್ರಾಂತದಲ್ಲಿ ಆಂಧ್ರ ಮಹಾಸಭೆಯು ರಾಷ್ಟ್ರೀಯ ಕಾಂಗೆಸ್‌ನ ಇನ್ನೊಂದು ರೂಪಾಂತರ. ಈ ಅಧಿವೇಶನ ನಡೆಸಲು ಸರ್ಕಾರದ ಅನುಮತಿ ಇರಲಿಲ್ಲ. ಆದ್ದರಿಂದ ಶರ್ಮ ಹಾಗೂ ಅವರ ಸ್ನೇಹಿತರನ್ನು ದಸ್ತಗಿರಿ ಮಾಡುವ ಸಾಧ್ಯತೆ ಇತ್ತು. ಅಧಿವೇಶನದ ಸಂದರ್ಭದಲ್ಲಿಯೇ ಶರ್ಮರು ವಿವಾಹವಾದರೆ, ವಿಧವಾ ವಿವಾಹ ಸುಧಾರಣಾ ಕಾರ್ಯಕ್ರಮಕ್ಕೆ ಒಳ್ಳೆಯ ಪ್ರಚಾರ ಸಿಗುತ್ತದೆ ಎಂದು ಅವರ ಸ್ನೇಹಿತರು ಅಭಿಪ್ರಾಯ ಪಟ್ಟರು. ಸ್ನೇಹಿತರ ಒತ್ತಾಯ ಮತ್ತು ಇಚ್ಛೆಗೆ ಮಣಿದು ಅಧಿವೇಶನ ಪ್ರಾರಂಭವಾಗುವ ೨ ಗಂಟೆ ಮುಂಚೆ ತರಾತುರಿಯಲ್ಲಿ ವಿಧವೆಯಾಗಿದ್ದ ಕಮಲಳನ್ನು ವಿವಾಹವಾದರು. ಆಗ ಅವರಿಗೆ ೨೪ ವರ್ಷ. ಕನ್ಯೆಗೆ ೧೬ ವರ್ಷ. ಕ್ರಮೇಣ ಶರ್ಮರ ತಂದೆ, ತಾಯಿ, ಅಕ್ಕ ನವವಧುವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದರು. ಮೂರು ವರ್ಷಗಳ ಅವಧಿಯಲ್ಲಿ ಶರ್ಮರು ಸಾಹಿತ್ಯ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಜನಪ್ರಿಯರಾದರು. ಇವರ ಜನಪ್ರಿಯತೆ ಹಾಗೂ ವಿಧವಾ ವಿವಾಹಕ್ಕೆ ತೋರಿಸುತ್ತಿರುವ ಉತ್ಸಾಹ ಮತ್ತು ಧೈರ್ಯ ಸಹಿಸಲಾಗದೆ ಅಲಂಪೂರಿನ ಬ್ರಾಹ್ಮಣ ಸಮುದಾಯ ಶರ್ಮರ ಮೇಲೆ ಬಹಿಷ್ಕಾರ ಹಾಕಿತು. ಇದರಿಂದ ಶರ್ಮ ಮತ್ತು ಅವರ ಪರಿವಾರದವರು ೬/೭ ತಿಂಗಳು ಕಷ್ಟ ಪಡಬೇಕಾಯಿತು. ಆದರೂ ಶರ್ಮರು ವಿಚಲಿತರಾಗಲಿಲ್ಲ. ಅಲ್ಲಿನ ಪ್ರಮುಖ ೧೪ ಬ್ರಾಹ್ಮಣರ ಮೇಲೆ ಮಾನನಷ್ಟ ದಾವೆ ಹಾಕಿದರು. ಅವರಲ್ಲಿ ಇಬ್ಬರು ನ್ಯಾಯವಾದಿಗಳು. ವಿಚಾರಣೆ ಬರುವ ಹಂತದಲ್ಲಿ ಈ ೧೪ ಜನ ಬ್ರಾಹ್ಮಣರಿಗೆ ಹೆದರಿಕೆ ಶುರುವಾಯಿತು. ಏಕೆಂದರೆ Hindu Remarriage Act ಪ್ರಕಾರ ಒಂದು ವೇಳೆ ದಂಡನೆಯಾದರೆ ೧ ವರ್ಷ ಪರಿಶ್ರಮ ಜೈಲುವಾಸ ಹಾಗೂ ದಂಡ ಕೊಡಬೇಕಾಗಿತ್ತು. ಕಾಯಿದೆ ಪ್ರಕಾರ ಶರ್ಮರ ಮದುವೆ ಸಿಂಧುವಾಗಿತ್ತು. ಈ ಗಂಡಾಂತರದಿಂದ ಪಾರಾಗಲು ಈ ೧೪ ಜನರಿಗೆ ಮರ್ಯಾದೆಯುತ ಮುಕ್ತದಾರಿ ಬೇಕಾಯಿತು. ಅವರು ಬ್ರಾಹ್ಮಣರಾಗಿದ್ದ Deputy Collector ಗೆ ಶರಣು ಹೋದರು. Deputy Collector ಶರ್ಮರಿಗೆ ಸಂಧಾನಕ್ಕೆ ಹೇಳಿಕಳುಹಿಸಿದರು. ಸುದೀರ್ಘ ಚರ್ಚೆಯಾದ

ನಂತರ ಶರ್ಮರು ಒಂದು ಉಪಾಯವನ್ನು ಸೂಚಿಸಿದರು. ಹಾಕಿದ ಬಹಿಷ್ಕಾರ ಹಿಂತೆಗೆದುಕೊಂಡು ಉಭಯ ಪಕ್ಷದವರು ಸೌಹಾರ್ದವಾಗಿ ದೇವಸ್ಥಾನದಲ್ಲಿ ಸಹ ಭೋಜನಮಾಡಲಿ ಎಂದು! ಇದು ಎಲ್ಲರಿಗೂ ಒಪ್ಪಿಗೆಯಾಗಿ ಸಹಭೋಜನ ಕೂಟನಡೆಯಿತು. ನಂತರ ಶರ್ಮರು ಕೋರ್ಟಿನಲ್ಲಿ ಹಾಕಿದ್ದ ಮಾನನಷ್ಟ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಂಡು ಶಾಂತ ವಾತಾವರಣಕ್ಕೆ ಅನುವುಮಾಡಿಕೊಟ್ಟರು.

ನವವಧು ಕಮಲಾ ಶರ್ಮರ ಜೊತೆ ಸುಮಾರು ೬೦ ವರ್ಷ ಸಂಸಾರ ನಡೆಸಿ, ಈಚೆಗೆ ೨೦೦೧ ರಲ್ಲಿ ಕಾಲವಾದರು. ಅವರದು ವಸಿಷ್ಠ ಅರುಂಧತಿಯರಂತೆ ಅನ್ಯೋನ್ಯವಾದ ದಾಂಪತ್ಯ ಜೀವನ. ಅವರ ಮಧುರ ದಾಂಪತ್ಯದ ಬಗ್ಗೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಬಹಳ ರಂಜನೀಯವಾಗಿ ವರ್ಣಿಸುತ್ತಾರೆ. ವಿಧವಾ ವಿವಾಹ ಶಾಸ್ತ್ರಸಮ್ಮತವಾಗಿತ್ತು ಎಂದು ಹೇಳಲು ಶರ್ಮರ ದೀರ್ಘ ವೈವಾಹಿಕ ಜೀವನ ಹಾಗೂ ವಿಪುಲ ಸಂತಾನ ಸಾಕ್ಷಿಯಾಗಿವೆ.

ಶರ್ಮರಿಗಿಂತ ಬಹಳ ಮೊದಲೇ ಅಂದರೆ ೧೯ನೇ ಶತಮಾನದಲ್ಲಿ ಬಂಗಾಳದಲ್ಲಿ ಈಶ್ವರಚಂದ್ರ ವಿದ್ಯಾಸಾಗರ, ರಾಜರಾಮಮೋಹನರಾಯ್ ೨೦ನೇ ಶತಮಾನದ ಆದಿಯಲ್ಲಿ ಮಹಾರಾಷ್ಟ್ರದಲ್ಲಿ ಮಹರ್ಷಿಕರ್ವೆ, ಆಂಧ್ರದಲ್ಲಿ ವಿರೇಶಲಿಂಗ ಪಂತಲು ಮುಂತಾದ ಮಹನೀಯರು ವಿಧವಾ ವಿವಾಹ ಆಂದೋಲನವನ್ನು ಮಾಡಿದ್ದರು. ಅವರೆಲ್ಲರಿಗೂ ಅವರದೇ ಸ್ವಯಂ ಪ್ರತಿಭೆ, ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಹಾಗೂ ಬ್ರಿಟಿಷ್ ಸರ್ಕಾರದ ಪೂರ್ಣ ಸಹಕಾರವಿತ್ತು. ಆದರೆ ನಿಜಾಂ ಪ್ರಾಂತ್ಯದ ಅತೀ ಹಿಂದುಳಿದ ಪ್ರದೇಶದಲ್ಲಿ ಅನಕ್ಷರಸ್ಥ ಹಾಗೂ ಪಟ್ಟಭದ್ರ ಸಮಾಜದಲ್ಲಿ ಸರ್ಕಾರದ ಯಕಃಶ್ಚಿತ್ ಬೆಂಬಲವಿಲ್ಲದೆ, ೬೩ ವರ್ಷದ ಹಿಂದೆ ವಿಧವಾ ವಿವಾಹದಂತಹ ಸಾಮಾಜಿಕ ಸುಧಾರಣೆಯನ್ನು ಮಾಡಬೇಕಾದರೆ ಎಷ್ಟು ಕಷ್ಟನಷ್ಟಗಳನ್ನು ಶರ್ಮರು ಅನುಭವಿಸಿರಬಹುದು ಎಂದು ಊಹಿಸಲೂ ಸಾಧ್ಯವಿಲ್ಲ.

ಗುರುಕುಲದಲ್ಲಿ ವಿದ್ಯಾಭ್ಯಾಸಮಾಡಿ, ವಿಧವಾ ವಿವಾಹ ಶಾಸ್ತ್ರಸಮ್ಮತವೆಂದು ಮನವರಿಕೆ ಆದ ಮೇಲೆ ಅದನ್ನು ತಮ್ಮ ನಿಜ ಜೀವನದಲ್ಲಿ ಅನುಷ್ಠಾನಕ್ಕೆ ತಂದು, ಇತರ ವಿಧವಾ ಕನ್ಯೆಯರ ವಿವಾಹಗಳನ್ನು ಮಾಡಿಸಿದ್ದು ಒಂದು ಉದಾತ್ತವಾದ ಯಜ್ಞವೇ ಸರಿ. ನಿಜವಾಗಿಯೂ ಶರ್ಮರು ಪುಣ್ಯಕೀರ್ತಿಗಳು.

* * *

ಕಲಿಕೆಯ ಸಂತೋಷವನ್ನು ಪ್ರೋತ್ಸಾಹಿಸುವುದು

(ಇತ್ತೀಚೆಗೆ ತಾನೆ ದೆಹಲಿಯಲ್ಲಿ ಮುಗಿದ ರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನದ ಸಂಕ್ಷಿಪ್ತ ವರದಿ)

-ವರದಿ: ಮಾಲಾಕುಮಾರ್

ಕಳೆದ ೨೦ ವರ್ಷಗಳಲ್ಲಿ ಸಾಕ್ಷರತೆ ಶೇ ೪೪ರಿಂದ ೬೫ಕ್ಕೆ ಏರಿದೆ. ಒಳ್ಳೆಯದು. ದೇಶದಲ್ಲಿರುವ ೬ ರಿಂದ ೧೪ ವರ್ಷದೊಳಗಿನ ೧೯೨ ದಶಲಕ್ಷ ಮಕ್ಕಳು ಯಾವುದೇ ಶಾಲೆಯಲ್ಲಿ ದಾಖಲಾಗಿಲ್ಲ. ಇದು ತೀರಾ ಶೋಚನೀಯ. ೫ ನೇತರಗತಿಯಲ್ಲಿರುವ ೧೯ದಶಲಕ್ಷ ಮಕ್ಕಳಲ್ಲಿ ೬ ದಶಲಕ್ಷ ಮಕ್ಕಳು ಓದಲು ಮತ್ತು ಬರೆಯಲು ಅಸಮರ್ಥರಾಗಿದ್ದಾರೆ. ಅತಿ ಶೋಚನೀಯ. ಆದ್ದರಿಂದ ಮಕ್ಕಳು ಕೇವಲ ಶಾಲೆಯಲ್ಲಿರುವುದನ್ನು ಖಚಿತಮಾಡಿಕೊಳ್ಳುವುದಷ್ಟೇ ಸಾಲದು. ಅವರು ಕಲಿಯುತ್ತಾರೆಂಬುದನ್ನೂ ಖಚಿತ ಮಾಡಿಕೊಳ್ಳಬೇಕೆಂಬುದೇ ಉದ್ದೇಶವಾಗಿರಬೇಕು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣದ ಮೌಲ್ಯವನ್ನು ವರ್ಧಿಸುವ ವಿಷಯವಾಗಿ ರಾಷ್ಟ್ರೀಯ ಸಮ್ಮೇಳನವು ಭಾರತಾದ್ಯಂತ ಸಂತೋಷದಾಯಕ ಶಿಕ್ಷಣದ ಬಗ್ಗೆ ನಡೆಯುವಂಥ ಪ್ರಯೋಗಗಳನ್ನು ಮತ್ತು ಪದ್ಧತಿಗಳನ್ನು ಹಂಚಿಕೊಳ್ಳಬೇಕೆಂಬುದರ ಅಗತ್ಯತೆಯನ್ನು ದೃಢೀಕರಿಸಿತು. ಈ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರಪತಿ ಎ. ಪಿ. ಜೆ. ಅಬ್ದುಲ್ ಕಲಾಮ್ ಈ ಪ್ರಶ್ನೆಯನ್ನು ಕೇಳಿದರು; "ಉನ್ನತ ತರಗತಿಗಳಿಗೆ ಬಂದ ನಂತರ ಮಕ್ಕಳು ತಮ್ಮ ಮುಗುಳ್ನಗೆಯನ್ನು ಏಕೆ ಕಳೆದು ಕೊಳ್ಳುತ್ತಾರೆ? ಮಕ್ಕಳಿಗೆ ತಮ್ಮಲ್ಲಿರುವ ಕ್ರಿಯಾಶೀಲತೆಯನ್ನು ಅಭಿವ್ಯಕ್ತಗೊಳಿಸಲು ಅಗತ್ಯವಾದ ಸೃಜನಾತ್ಮಕ ಚಟುವಟಿಕೆಗಳಿಗೆ ಕಾಲಾವಕಾಶವನ್ನು ಮಾಡಿಕೊಟ್ಟಲ್ಲಿ ಮತ್ತು ಕಲಿಕೆಯಲ್ಲಿರುವ ಸಂತೋಷವನ್ನು ಕಂಡು ಹಿಡಿಯಲು ಅವರಿಗೆ ಅವಕಾಶ ಮಾಡಿಕೊಟ್ಟಲ್ಲಿ ಅವರ ಮುಖದ ಮೇಲೆ ಮುಗುಳ್ನಗೆ ಪುನಃ ಅವತರಿಸಲು ಸಾಧ್ಯವಿದೆ. ಮಕ್ಕಳು ತಮ್ಮ ೧೨ವರ್ಷಗಳ ಶಿಕ್ಷಣಾವಧಿಯಲ್ಲಿ ೨೫,೦೦೦ ಗಂಟೆಗಳಷ್ಟು ಕಾಲವನ್ನು ಶಾಲೆಯಲ್ಲಿ ಕಳೆಯುತ್ತಾರೆ. ಮಕ್ಕಳಲ್ಲಿರುವ ಕ್ರಿಯಾತ್ಮಕತೆಯನ್ನು ಉತ್ತೇಜಿಸಲು ಈ ಸಮಯ ಅಧ್ಯಾಪಕರಿಗೆ ಅಗತ್ಯವಾದುದಕ್ಕಿಂತಲೂ ಹೆಚ್ಚಾಗಿದೆ' ಎಂಬುದಾಗಿಯೂ ರಾಷ್ಟ್ರಪತಿಯವರು ಹೇಳಿದರು. ಈ ಮಾತು ಸುಲಭವಾದುದೆಂದು ಅನಿಸಬಹುದು. 'ನಮ್ಮ ಬಹುಸಂಖ್ಯಾತ ಶಾಲೆಗಳ ಮೇಲೆ, ಸಂಸ್ಥೆಗಳ ಮೇಲೆ, ಅಧ್ಯಾಪಕರ ಮೇಲೆ ಮತ್ತು ವಿದ್ಯಾರ್ಥಿಗಳ ಮೇಲೆ ಇರುವ ಒತ್ತಡವನ್ನು ಗಮನಿಸಿದಾಗ ಮತ್ತು ವಿಶ್ವದ ೧೨೬ ಉನ್ನತ ಶ್ರೇಣಿಯ ದೇಶಗಳನ್ನು ದಾಟಿ ನಮ್ಮ ದೇಶ ಮುಂದೆ ಹೋಗಬೇಕಾದರೆ ಶಾಲೆಗಳಲ್ಲಿಯ ಪ್ರಾಥಮಿಕ ಶಿಕ್ಷಣದ ಮೌಲ್ಯವರ್ಧನೆಯನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಪಠ್ಯವನ್ನು ಕೇವಲ ಜ್ಞಾಪಕದಲ್ಲಿಟ್ಟುಕೊಳ್ಳುವಂಥ ವಿದ್ಯಾರ್ಥಿಗಳನ್ನು ಹೊರದಬ್ಬುವ ಕಾರ್ಖಾನೆಗಳು ಈ ಶಾಲೆಗಳು ಎಂದು

ಆಲೋಚಿಸುವುದನ್ನು ನಾವು ಬಿಡಬೇಕು' ಎಂಬುದಾಗಿ ಅಜಿಂ ಪ್ರೇಮ್‌ಜಿ ಹೇಳಿದರು. ಅಜಿಂ ಪ್ರೇಮ್‌ಜಿ ಪ್ರತಿಷ್ಠಾನವು ಈ ಸಮ್ಮೇಳನವನ್ನು ಆಯೋಜಿಸಿತ್ತು. ಈ ಸಮ್ಮೇಳನದಲ್ಲಿ ಕೇಂದ್ರಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯವು ಸಹ ಭಾಗಿಯಾಗಿತ್ತು. ಮಕ್ಕಳಲ್ಲಿರುವ ಬೌದ್ಧಿಕ, ಸಾಮಾಜಿಕ ಮತ್ತು ನೈತಿಕ ಗುಣಧರ್ಮಗಳನ್ನು ಪೋಷಿಸುವಂತಹ ಶಾಲೆಗಳ ಅಗತ್ಯವಿದೆ. ಇದಕ್ಕಾಗಿ ಪಠ್ಯಕ್ರಮದಲ್ಲಿ, ಅಧ್ಯಾಪಕರ ಪ್ರಶಿಕ್ಷಣದಲ್ಲಿ ಮತ್ತು ಮೌಲ್ಯ ಮಾಪನದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಉತ್ತರ ಪ್ರದೇಶದಂಥ ರಾಜ್ಯದಲ್ಲಿ, ಎಲ್ಲಿ ಮೂರುವರೆಕೋಟಿ ವಿದ್ಯಾರ್ಥಿಗಳಿಗೆ ಬೋಧಿಸಲು ಕೇವಲ ಮೂರು ಲಕ್ಷ ಉಪಾಧ್ಯಾಯರಿದ್ದಾರೊ ಅಂಥ ಕಡೆಗೆ ಈ ಬದಲಾವಣೆಯನ್ನು ತರುವುದೆಂತು? ಎಂಬ ಬಗ್ಗೆ ಆಲೋಚಿಸಬೇಕಾಗುತ್ತದೆ. ಲೊರೆಟೊ ಶಾಲೆಯ ಸಿಸ್ಟರ್ ಶಿರಿಲ್‌ರವರ ಪ್ರಕಾರ ಕ್ರಿಯಾತ್ಮಕತೆಯನ್ನು ಹೊಂದಲು ಪಿ.ಎಚ್.ಡಿ. ಅಗತ್ಯವೇನಿಲ್ಲ. ಕಲಿಕಾ ವಿಧಾನಕ್ಕೆ ನೆರವಾಗಲು ಆಸಕ್ತಿಯುಳ್ಳ ಮತ್ತು ಕಲಿಸುವ ಬಗ್ಗೆ ಪ್ರೀತಿಯುಳ್ಳ ಯುವಕರಿಗೆ ಅವಕಾಶಕೊಡಬೇಕೆಂಬ ಸಂಗತಿಯತ್ತ ಗಮನ ಸೆಳೆಯಬೇಕೆಂಬುದು ಶಿರಿಲ್‌ರವರ ಉದ್ದೇಶವಾಗಿತ್ತು. ೧೪ ರಿಂದ ೧೫ ವರ್ಷದೊಳಗಿನವರ ಯುವಕರ ಕೈಗೆ ನಾವು ಕೋವಿಗಳನ್ನು ಕೊಡುತ್ತಿರುವಾಗ ೧೮ ರಿಂದ ೧೯ ವರ್ಷದ ಯುವಕರಿಗೆ ಸಬಲೀಕರಣದ ಹೊಣೆಯನ್ನು ಕೊಡಲು ಸಾಧ್ಯವಿಲ್ಲವೆ? ಅನೇಕ ಬಗೆಯ ಪ್ರಯತ್ನಗಳ ಮಧ್ಯೆಯೂ ವಿದ್ಯಾರ್ಥಿಗಳ ಸಾಧನೆಯ ಮಟ್ಟಗಳು ಇನ್ನೂ ಕಡಿಮೆಯೇ ಇವೆ. ಈ ದೋಷಕ್ಕೆ ಅತಿಯಾದ ಭಾರವೇ ಕಾರಣವೆಂದು ದೆಹಲಿ ವಿಶ್ವವಿದ್ಯಾಲಯದ ಕೇಂದ್ರೀಯ ಶಿಕ್ಷಣ ಸಂಸ್ಥೆಯ ಡಾ॥ ಕೃಷ್ಣಕುಮಾರ್ ಹೇಳಿದರು. ಮಗು ಚಿಕ್ಕದಾಗಿದ್ದಷ್ಟು ಹೆಚ್ಚು-ಹೆಚ್ಚು ಅದಕ್ಕೆ ಕಲಿಸಲು ನಾವೇಕೆ ಪ್ರಯತ್ನಿಸುತ್ತಿದ್ದೇವೆ? ಪಠ್ಯವು ಮಾಹಿತಿಗಳ ಬುಟ್ಟಿಯೆಂದು ನಾವು ಭಾವಿಸಬಾರದು ಬದಲಿಗೆ ಅದು ಅನುಭವಗಳ ಗುಚ್ಛ! ಠಾಗೋರ್, ಗಾಂಧಿ, ಅರಬಿಂದೋ ಮತ್ತು ಕೃಷ್ಣಮೂರ್ತಿಯಂಥವರು ಕಲ್ಪಿಸಿಕೊಂಡಿದ್ದ ರೀತಿಯಲ್ಲಿ ಮಗು ಕಲಿಯುವುದಕ್ಕೆ ಆ ಪಠ್ಯಕ್ರಮ ಸಮರ್ಥನನ್ನಾಗಿ ಮಾಡುತ್ತದೆ. ಒಂದು ಅಂತಾರಾಷ್ಟ್ರೀಯ ಅಧ್ಯಯನದ ಪ್ರಕಾರ ಹೆಚ್ಚು ಗುಣಮಟ್ಟದ ಲಾಭಗಳು ವಿಶಾಲವಾದ ಕ್ಷೇತ್ರದಲ್ಲಿಯ ಹೆಚ್ಚು ಜನರಿಗೆ ಹೆಚ್ಚು ಕಾಲ ಬಾಳುವಂಥ ರೀತಿಯಲ್ಲಿ ಬೇಗ ತಲುಪುವಂತಾಗಬೇಕೆಂದು ತಿಳಿಸುತ್ತದೆ. ಇದನ್ನು ಸಾಧಿಸಬೇಕಾದರೆ ಹೆಚ್ಚು ಜನರನ್ನು ತೊಡಗಿಸಿ ಶಿಕ್ಷಣವನ್ನು ಬೆಳಸಬೇಕು. ಮತ್ತು ಯಶಸ್ವಿಯಾಗಿರುಮಂಥ ಮಾದರಿಗಳನ್ನು ಪುನಾರೂಪಿಸಬೇಕು. ಈ ಕಾರ್ಯಕ್ಕಾಗಿ ಸಾರ್ವಜನಿಕರ ಸಹಾಯವನ್ನು ಪಡೆಯಬೇಕು. ಈ ಸಮ್ಮೇಳನದಲ್ಲಿ ಉತ್ತರ ಪ್ರದೇಶದ ಶಿಕ್ಷಾಲಯ ಪ್ರಕಲ್ಪ, ಕರ್ನಾಟಕದ ನಲಿ-ಕಲಿ, ಲಾತೂರಿನ ಕ್ರಿಯಾಶಾಲೆಗಳು, ಮಧ್ಯಪ್ರದೇಶದ ಶಿಕ್ಷಣ ಭರವಸೆಯೋಜನೆ ಮುಂತಾದ ಕೆಲವು ಯಶಸ್ವಿ ಪ್ರಯೋಗಗಳನ್ನೂ ಪ್ರಸ್ತಾಪಿಸಲಾಯಿತು. ಶಾಲೆಗೆ ಮಕ್ಕಳು ಸೇರುವುದರ ಜೊತೆಗೆ ಶಿಕ್ಷಣದ ಗುಣಮಟ್ಟವೂ ಇರಬೇಕೆಂಬುದು ಸಹ ಅಷ್ಟೇ ಮುಖ್ಯ ಎಂಬುದು ಈ ಸಮ್ಮೇಳನದಲ್ಲಿ ರೂಪಿತವಾದ ಒಟ್ಟಾರೆ ಅಭಿಪ್ರಾಯವಾಗಿದೆ.

ಸಾಭಾರ- ಡೆಕನ್‌ಹೆರಾಲ್ಡ್

ಅನು- ಸುರೇಂದ್ರ ಕೌಲಗಿ.

ನಳಂದ ವಿದ್ಯಾಪೀಠ : ಒಂದು ಆದರ್ಶ ವಿಶ್ವವಿದ್ಯಾಲಯ

–ಜಿ. ಆರ್. ರಂಗಸ್ವಾಮಯ್ಯ

ಸಂಸ್ಕೃತಿ ಪ್ರಧಾನವಾದ ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸಕ್ಕೆ ವಿಶಿಷ್ಟ ಸ್ಥಾನವಿತ್ತು. ನಹಿ ಜ್ಞಾನೇನ ಸದೃಶಂ ಎಂಬುದನ್ನೇ ಆದರ್ಶವಾಗಿ ಹೊಂದಿದ್ದ ಭಾರತೀಯರು ಜ್ಞಾನಾರ್ಜನೆಗೆ ವಿಶೇಷ ಗಮನ ಹರಿಸಿದ್ದರು. ಈ ಧ್ಯೇಯವನ್ನು ಕೇವಲ ಉಚ್ಛರಿಸುವುದರಿಂದ ಅವರು ತೃಪ್ತಿ ಪಡಲಿಲ್ಲ. ತನು, ಮನ, ಧನಗಳನ್ನು ಜ್ಞಾನಾರ್ಜನೆಗೆ ಸಮರ್ಪಿಸುತ್ತಿದ್ದರು. ರಾಜನಿಗಿಂತಲೂ ಜ್ಞಾನಿಗೆ ವಿಶೇಷ ಗೌರವ. ರಾಜ ಮಹಾರಾಜರು ಬುದ್ಧಿಜೀವಿಗಳನ್ನು ಪೋಷಿಸಿ ಗೌರವಿಸುತ್ತಿದ್ದರು. ಅನೇಕ ವಿದ್ಯಾಪೀಠಗಳು ರಾಮಾಯಣ ಮಹಾಭಾರತಗಳ ಕಾಲದಿಂದಲೂ ಪ್ರಸಿದ್ಧವಾಗಿದ್ದವು. ಸಿಕಂದರ್ ಮಹಾಶಯನ ದಂಡಯಾತ್ರೆಯಲ್ಲಿ ಭಾರತಕ್ಕೆ ಬಂದಿದ್ದ ಗ್ರೀಕ್ ವಿದ್ವಾಂಸರು ತಕ್ಷಶಿಲ ಮುಂತಾದ ವಿದ್ಯಾಕೇಂದ್ರಗಳಿಂದ ಬಹುಮಟ್ಟಿಗೆ ಪ್ರಭಾವಿತರಾದರು. ಅವರು ಕಟಕ ಗಣರಾಜ್ಯದ ನಾಗರಿಕರ ದಾರ್ಶನಿಕ ಮುನ್ನಡೆ ಮತ್ತು ವಿಜ್ಞಾನ ಕಲಾಭಿರುಚಿಯನ್ನು ಮನಸಾರೆ ಅಭಿನಂದಿಸಿದ್ದಾರೆ. ದಕ್ಷಿಣ ಭಾರತದಲ್ಲೂ ಸಂಘಂ ಸಾಹಿತ್ಯ ಕೇಂದ್ರವು ಪ್ರಾಚೀನ ಭಾರತೀಯರ ಸಾಹಿತ್ಯ ಮತ್ತು ಜ್ಞಾನವರ್ಧನೆಯ ಪ್ರಯತ್ನಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನೊದಗಿಸುತ್ತದೆ. ಕ್ರಿ.ಶ. ೪ ರಿಂದ ೧೦ನೇ ಶತಮಾನದ ಮಧ್ಯದಲ್ಲಿ ಭಾರತದ ನಾನಾ ಭಾಗಗಳಲ್ಲಿ ಅನೇಕ ವಿದ್ಯಾ ಕೇಂದ್ರಗಳಿದ್ದವು. ಇವುಗಳಲ್ಲಿ ಉಜ್ಜಯಿನಿ, ಪಾಟಲೀಪುತ್ರ, ಕಂಚಿ, ಮಧುರೆ, ಬಳ್ಳಿಗಾಮಿ, ಓದಂಡಪುರಿ, ವಿಕ್ರಮಶೀಲ ಮತ್ತು ನಳಂದ ಉಚ್ಛ್ರಾಯ ಮಟ್ಟದಲ್ಲಿದ್ದವು. ಇವುಗಳಲ್ಲೆಲ್ಲಾ ನಳಂದವು ೧೩ ನೇ ಶತಮಾನದ ಅಂತ್ಯದವರೆಗೂ ಅತ್ಯಂತ ಪ್ರಭಾವಶಾಲಿಯಾದ ಹಾಗೂ ಪ್ರಖ್ಯಾತವಾದ ವಿದ್ಯಾ ಕೇಂದ್ರವಾಗಿತ್ತು. ಬೌದ್ಧ ಜೈನಮತ ಗ್ರಂಥಗಳೂ, ಸಮಕಾಲೀನ ಶಾಸನಗಳೂ, ಚೈನಾದೇಶದ ಯಾತ್ರಿಕರಾದ ಹ್ಯೂಯೆನ್‌ತ್ಸಾಂಗ್ ಮತ್ತು ಇಟ್ಸಿಂಗ್ ಇವರ ಬರವಣಿಗೆಗಳೂ ಹಾಗೂ ಟಿಬೆಟ್ಟಿನ ತಾರಾನಾಥನ ಬರೆವಣಿಗೆಯೂ ನಳಂದ ವಿಶ್ವವಿದ್ಯಾನಿಲಯದ ಐತಿಹಾಸಿಕ ಮಾಹಿತಿಗಳ ಬಗ್ಗೆ ವಿವರವಾಗಿ ತಿಳಿಯಲು ಮುಖ್ಯಾಧಾರಗಳು. ಅಲ್ಲದೆ ಆಂಗ್ಲ ವಿದ್ವಾಂಸನೂ, ಪ್ರಾಚ್ಯ ಸಂಶೋಧಕನೂ ಆದ ಡಾ॥ ಸ್ಪೂನರ್ ೧೯೧೩ ರಲ್ಲಿ ನಡೆಸಿದ ಭೂ ಸಂಶೋಧನೆಯ ಸಮಯದಲ್ಲಿ ಬೆಳಕಿಗೆ ಬಂದ ಅವಶೇಷಗಳು ಮೇಲ್ಕಂಡ ಬರೆವಣಿಗೆಯ ಆಧಾರಗಳನ್ನು ಪುಷ್ಟೀಕರಿಸುತ್ತವೆ. ಕಾಲಗರ್ಭದಲ್ಲಿ ನಶಿಸಿದ ನಳಂದ ವಿದ್ಯಾಪೀಠದ ನಿವೇಶನವನ್ನು ೧೯ನೇ ಶತಮಾನದಲ್ಲಿ

ವಿದ್ವಾಂಸರು ಪರಿಶೋಧಿಸಿದರು. ಆಂಗ್ಲ ತಜ್ಞ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮನು ೧೮೬೧ ರ ಸುಮಾರಿನಲ್ಲಿ ಬಿಹಾರ್ ರಾಜ್ಯದ ರಾಜ್‌ಘರ್‌ಗೆ ಏಳುಮೈಲಿ ದೂರದಲ್ಲಿರುವ ಈಗಿನ ಬರಗಾನ್ ಗ್ರಾಮವೇ ಪ್ರಾಚೀನ ನಳಂದ ವಿದ್ಯಾಕೇಂದ್ರದ ನಿವೇಶನವೆಂದು ನಿರ್ದಿಷ್ಟವಾಗಿ ಶೋಧಿಸಿ ತಿಳಿಯಪಡಿಸಿದನು.

ಬೌದ್ಧ ಮತ್ತು ಜೈನಮತ ಗ್ರಂಥಗಳಲ್ಲಿ ಪ್ರಾಚೀನ ನಳಂದಕ್ಕೆ ಸಂಬಂಧಿಸಿದಂತೆ ಹಲವು ದಂತಕಥೆಗಳೂ ಪ್ರಚಾರದಲ್ಲಿವೆ. ಆ ಪ್ರಕಾರ ಅಲ್ಲಿನ ಕೆರೆಯೊಂದರಲ್ಲಿ ನಳಂದ ಎಂಬ ಯಕ್ಷನೊಬ್ಬನು ವಾಸಿಸುತ್ತಿದ್ದರಿಂದ ಆ ಗ್ರಾಮಕ್ಕೆ ನಳಂದ ಎಂಬ ಹೆಸರು ಬಂದಿತು. ಅಲ್ಲದೆ ಬುದ್ಧ ದೇವನು ತನ್ನ ಹಿಂದಿನ ಜನ್ಮದಲ್ಲಿ ಅಲ್ಲಿ ವಾಸಿಸುತ್ತಿದ್ದನೆಂದೂ ಭಿಕ್ಷುಕರಿಗೆ ಎಂದೂ ಏನನ್ನೂ ಇಲ್ಲವೆನ್ನಲಿಲ್ಲವಾದ್ದರಿಂದ (ನ–ಆಲಂ–ದ) ನಳಂದ ಎಂಬ ಹೆಸರು ಬಂದಿತೆಂದೂ ಪ್ರತೀತಿ. ಆ ಗ್ರಾಮದ ಸುತ್ತಮುತ್ತಲೂ ಇಂದೂ ಅನೇಕ ಕೆರೆ ಕೊಳಗಳಿವೆ. ಇವುಗಳಲ್ಲಿ ನಾಳ ಅಥವಾ ತಾವರೆಯು ವಿಶೇಷವಾಗಿ ಬೆಳೆಯುತ್ತದೆ. ಬಹುಶಃ ಈ ಮೂಲದಿಂದಲೇ ನಳಂದ ಎಂಬ ಹೆಸರು ಬಂದಿರಬಹುದೆಂದು ವಿದ್ವಾಂಸರ ಅಭಿಪ್ರಾಯ ಬೌದ್ಧಮತ ಗ್ರಂಥಗಳ ಪ್ರಕಾರ ನಳಂದವು ಕ್ರಿ. ಪೂ. ಆರನೇ ಶತಮಾನದಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದಿತ್ತೆಂದು ತಿಳಿದುಬರುತ್ತದೆ. ಅಲ್ಲಿನ ಹೊರವಲಯದಲ್ಲಿ ವಿಶಾಲವಾದ ಮಾವಿನ ತೋಪಿತ್ತು. ಮಹಾವೀರ ಮತ್ತು ಶಾಕ್ಯಮುನಿಯು ತಮ್ಮ ಮತ ಪ್ರಚಾರ ಕಾಲದಲ್ಲಿ ಆಗಾಗ ಅಲ್ಲಿ ತಂಗುತ್ತಿದ್ದರು. ಒಂದು ಸಾರಿ ಮಹಾವೀರನ ಶಿಷ್ಯನಾದ ಉಪಾಲಿ ಎಂಬಾತನು ಬುದ್ಧನ ಸಾನ್ನಿಧ್ಯಕ್ಕೆ ಹೋಗಿ ಆತನ ಬೋಧನೆ ಮತ್ತು ವ್ಯಕ್ತಿತ್ವಕ್ಕೆ ಮಾರುಹೋಗಿ ಬೌದ್ಧಮತ ವನ್ನವಲಂಬಿಸಿದನೆಂದು ಪ್ರತೀತಿ. ಅಲ್ಲದೆ ನಳಂದವು ಸಾರಿಪುತ್ರನ ಜನ್ಮ ಸ್ಥಳವೆಂದು ಫಾಹಿಯಾನನ ಬರವಣಿಗೆಗಳಿಂದ ತಿಳಿದು ಬರುತ್ತದೆ. ತಾರನಾಥನ ಪ್ರಕಾರ ಅಶೋಕಚಕ್ರವರ್ತಿಯು ನಳಂದವನ್ನು ಸಂದರ್ಶಿಸಿ ಅಲ್ಲಿ ಒಂದು ಸ್ತೂಪವನ್ನು ಕಟ್ಟಿಸಿದನು. ಕ್ರಿಸ್ತೋದಯಕ್ಕೆ ಶತಮಾನಗಳ ಹಿಂದೆಯೇ ಅನೇಕ ಬೌದ್ಧ ಸ್ತೂಪಗಳೂ, ಸಂಘಾರಾಮಗಳೂ ಇದ್ದವು. ಬೌದ್ಧ ಭಿಕ್ಷುಗಳೂ ಅಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಿದ್ದರು.

ಬೌದ್ಧ ಮತೀಯರ ಸಾಮಾನ್ಯ ವ್ಯಾಸಂಗ ಕ್ಷೇತ್ರವಾಗಿದ್ದ ನಳಂದವು ಕ್ರಮೇಣ ಮಹಾಯಾನ ಶಾಖೆ ಪ್ರಾಬಲ್ಯಕ್ಕೆ ಬಂದಮೇಲೆ ಜ್ಞಾನ ಕೇಂದ್ರವಾಗಿ ಬೆಳೆಯಿತು. ಒಂದನೇ ಕುಮಾರಗುಪ್ತ ಚಕ್ರವರ್ತಿಯು ಕಾಲದಲ್ಲಿ ಸಖರಾದಿತ್ಯನೆಂಬ ಶ್ರೀಮಂತ ವ್ಯಾಪಾರಿಯು ನಳಂದದಲ್ಲಿ ಒಂದು ಮಹಾ ವಿಹಾರವನ್ನು ಕಟ್ಟಿಸಿ ಹೇರಳವಾಗಿ ಧನಸಹಾಯವನ್ನು ಮಾಡಿ ಅದರ ಪುರೋಭಿವೃದ್ಧಿಗೆ ಕಾರಣನಾದನು. ಅನಂತರ

ರಾಜ್ಯವಾಳಿದ ಗುಪ್ತ ಚಕ್ರವರ್ತಿಗಳು ನಳಂದ ವಿದ್ಯಾ ಕೇಂದ್ರವನ್ನು ಪೋಷಿಸಿದರು. ಕ್ರಿ..ಶ. ಏಳು ಮತ್ತು ಎಂಟನೇ ಶತಮಾನಗಳಲ್ಲಿ ನಳಂದ ವಿಶ್ವವಿದ್ಯಾಲಯವು ಜಗತ್ಪ್ರಸಿದ್ಧವಾಗಿದ್ದಿತು. ಭಾರತದ ಎಲ್ಲಾ ಭಾಗಗಳಿಂದಲೂ ಮಾತ್ರವಲ್ಲದೆ ಏಷ್ಯಾದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರತೊಡಗಿದರು. ಚೈನಾ ದೇಶದ ಬೌದ್ಧ ಯಾತ್ರಿಕರಾದ ಹ್ಯೂಯೆನ್‌ತ್ಸಾಂಗ್ ಮತ್ತು ಇಟ್ಸಿಂಗ್ ಅವರುಗಳು ಈ ವಿದ್ಯಾಕ್ಷೇತ್ರದಲ್ಲಿ ಅಭ್ಯಸಿಸಿದ ಪರಕೀಯರಲ್ಲಿ ಅಗ್ರಗಣ್ಯರು.

ಅರ್ವಾಚೀನ ಕಾಲದಲ್ಲೂ ಒಂದು ವಿಶ್ವವಿದ್ಯಾಲಯದ ಘನತೆಯು ಅಲ್ಲಿ ವ್ಯಾಸಂಗಕ್ಕೆ ವಿಧಿಸಿದ ಗಹನವಾದ ವಿಷಯಗಳು, ಸಿಬ್ಬಂದಿ, ಸಲಕರಣೆಗಳು, ಉಪಾಧ್ಯಾಯ ವರ್ಗದ ದಕ್ಷತೆ, ವಿದ್ಯಾರ್ಥಿಗಳ ನಿಷ್ಠೆಯಿಂದ ಕೂಡಿದ ಅಧ್ಯಯನ, ಶಿಸ್ತು ಸಂಯಮ, ಅವರ ಮುಂದಿನ ಬಾಳ್ವೆಯ ಸಾರ್ಥಕತೆ, ಮತ್ತು ಅಲ್ಲಿನ ಪುಸ್ತಕ ಭಂಡಾರ ಇವುಗಳನ್ನು ಅವಲಂಬಿಸಿರುತ್ತದೆ. ಈ ಅಂಶಗಳ ಹಿನ್ನೆಯಲ್ಲಿ ಕಾಲ, ದೇಶಗಳ ಪರಿಮಿತಿಯಿಂದ ಅವಲೋಕಿಸಿದರೆ ನಳಂದ ವಿಶ್ವವಿದ್ಯಾಲಯದ ಸಾಧನೆಗಳು ಇಂದಿಗೂ ಸಹ ಆಶ್ಚರ್ಯಕರ ಸಂಗತಿಗಳಾಗಿ ಉಳಿದಾವು. ನಳಂದ ವಿದ್ಯಾಪೀಠವು ಅನೇಕ ಭವ್ಯ ಕಟ್ಟಡಗಳನ್ನೊಳಗೊಂಡಿತ್ತು. ಸುತ್ತಲೂ ಇಟ್ಟಿಗೆಗಳಿಂದ ಕಟ್ಟಿದ ಆವರಣ ಗೋಡೆ ಇತ್ತು. ಆವರಣದ ಒಳಗಡೆ ಮತ್ತು ಹೊರಗಡೆ ಮಾವಿನ ತೋಪುಗಳನ್ನು ಬೆಳೆಸಿದ್ದರು. ಅಲ್ಲಲ್ಲಿ ತಾವರೆ ಹೂವಿನಿಂದ ಕೂಡಿದ ಪುಷ್ಕರಣಿಗಳಿದ್ದವು. ವಿಶಾಲವಾದ ಕಟ್ಟಡಗಳ ಕಂಭಗಳು ಸುಂದರವಾಗಿ ಕೆತ್ತನೆ ಕೆಲಸಗಳಿಂದಲಂಕೃತವಾಗಿದ್ದವು. ಕಟ್ಟಡಗಳ ಮೇಲ್ಛಾವಣಿಗೆ ಬಣ್ಣ ಬಣ್ಣದ ಹೆಂಚುಗಳನ್ನು ಹೊದ್ದಿಸಲಾಗಿತ್ತು. ವ್ಯಾಸಂಗಕ್ಕೆ, ಪೂಜೆ, ಪ್ರಾರ್ಥನೆ ಮತ್ತು ಗ್ರಂಥಭಂಡಾರಕ್ಕೆ ಬೇರೆ ಬೇರೆ ಕಟ್ಟಡಗಳಿದ್ದವು. ಕಟ್ಟಡಗಳು ಅನೇಕ ಅಂತಸ್ತುಗಳಿಂದ ಕೂಡಿದ್ದವು. ರಸಾಯನ ಶಾಸ್ತ್ರದ ಪ್ರಯೋಗ ಶಾಲೆಯು ಒಂದು ಕಟ್ಟಡದ ಎರಡನೇ ಅಂತಸ್ತಿನಲ್ಲಿ ಇದ್ದಿತೆಂದು ತಿಳಿದುಬರುತ್ತದೆ. ಅತ್ಯಂತ ಮೇಲಿನ ಮಾಡದ ಕಿಟಕಿಗಳಿಂದ ಅನತಿ ದೂರದಲ್ಲಿ ಮೋಡಗಳನ್ನು ವೀಕ್ಷಿಸಬಹುದಾಗಿದ್ದಿತು. ಖಗೋಳ ಶಾಸ್ತ್ರಾಭ್ಯಾಸಕ್ಕಾಗಿ ಅತಿ ಎತ್ತರವಾದ ವೀಕ್ಷಣಾಲಯಗಳನ್ನು ಕಟ್ಟಿದ್ದರು. ಧರ್ಮಚಕ್ರವು ಈ ವಿಶ್ವವಿದ್ಯಾನಿಲಯದ ಚಿಹ್ನೆಯಾಗಿತ್ತು. ನಳಂದ ವಿದ್ಯಾಪೀಠದಲ್ಲಿ ಸಜ್ಜಾದ ಪುಸ್ತಕ ಭಂಡಾರವಿದ್ದಿತು. ಗ್ರಂಥ ಭಂಡಾರಕ್ಕಾಗಿ ಮೂರು ದೊಡ್ಡ ಕಟ್ಟಡಗಳಿದ್ದವು. ಪ್ರತಿಯೊಂದು ಕಟ್ಟಡವೂ ಮೂರು ಅಂತಸ್ತಿನಿಂದ ಕೂಡಿದ್ದಿತು. ಈ ಕಟ್ಟಡಗಳಲ್ಲಿ ಸಹಸ್ರಾರು ಓಲೆಗರಿಯ ಗ್ರಂಥಗಳಿದ್ದವು. ಬರವಣಿಗೆಯು ಅಂದವಾಗಿಯೂ, ಸ್ಪಷ್ಟವಾಗಿಯೂ ಇತ್ತು. ಈ ಕಟ್ಟಡಗಳಿಗೆ ಕ್ರಮವಾಗಿ ರತ್ನೋದಧಿ, ರತ್ನರಂಜಕ

ಮತ್ತು ರತ್ನಸಾಗರ ಎಂಬ ಹೆಸರುಗಳಿದ್ದುವು. ಗ್ರಂಥ ಭಂಡಾರದ ಪ್ರದೇಶವನ್ನು 'ಧರ್ಮಗಂಜ್' ಎಂದು ಕರೆಯುತ್ತಿದ್ದರು. ಗ್ರಂಥಾಗಾರದ ವೈಜ್ಞಾನಿಕ ವ್ಯವಸ್ಥೆ ಮತ್ತು ಅದು ಪಡೆದಿದ್ದ ಮಹತ್ವ ಆಧುನಿಕ ಕಾಲದಲ್ಲೂ ಆದರ್ಶನೀಯ ಮತ್ತು ಅನುಕರಣೀಯವಾಗಿ ತೋರುತ್ತದೆ.

ನಳಂದ ವಿದ್ಯಾಪೀಠದಲ್ಲಿ ಬೋಧಿಸುತ್ತಿದ್ದ ವಿಷಯಗಳು ಗಮನಾರ್ಹವಾದುವು. ಬೌದ್ಧಮತದ ತತ್ವಗಳು–ಹೀನಯಾನ, ಮಹಾಯಾನ ಶಾಖೆಗಳಿಗೆ ಸಂಬಂಧಿಸಿದ ವಿಶಿಷ್ಟ ವ್ಯಾಸಂಗ–ವೈದಿಕ ಮತದ ತತ್ವಗಳು ಅದಕ್ಕೆ ಸಂಬಂಧಿಸಿದ ಸಾಹಿತ್ಯ, ತರ್ಕ, ವ್ಯಾಕರಣ ಭಾಷಾಶಾಸ್ತ್ರ, ಅಲಂಕಾರ ಶಾಸ್ತ್ರ, ಆಯುರ್ವೇದ, ಖಗೋಳ ಶಾಸ್ತ್ರ, ರಸಾಯನ ಶಾಸ್ತ್ರ, ಲೋಹ ಶಾಸ್ತ್ರ ಮತ್ತು ಶಿಲ್ಪ ಕಲೆ–ಈ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ವ್ಯಾಸಂಗ ಮಾಡಬಹುದಾಗಿದ್ದ ವಿಷಯಗಳೆಲ್ಲವನ್ನೂ ಶಿಕ್ಷಣಕ್ಕಳವಡಿಸಲಾಗಿತ್ತು. ನಳಂದವು ಆದ್ಯವಾಗಿ ಬೌದ್ಧ ಮತೀಯ ವಿದ್ಯಾಕೇಂದ್ರವಾದರೂ, ಹಿಂದೂ ಧರ್ಮ, ಸಂಸ್ಕೃತ ಸಾಹಿತ್ಯ ಹಾಗೂ ವೈಜ್ಞಾನಿಕ ವಿದ್ಯಾಭಾಸಕ್ಕೆ ಕೊಟ್ಟಿದ್ದ ಗಮನವು ಈ ವಿಶ್ವವಿದ್ಯಾನಿಲಯದ ಆದರ್ಶ ಮತ್ತು ದಾರ್ಶನಿಕ ಹೃದಯ ವೈಶಾಲ್ಯಕ್ಕೆ ಸಾಕ್ಷಿಯಾಗಿದ್ದವು.

ನಮಗೆ ದೊರಕಿರುವ ಕೆಲವೇ ಮಹೋಪಾಧ್ಯಾಯರುಗಳ ವಿವರಗಳು ಅವರ ಆಳವಾದ ಪಾಂಡಿತ್ಯ, ಹಿರಿಮೆ ಮತ್ತು ಆದರ್ಶಗಳನ್ನು ಸ್ಪಷ್ಟೀಕರಿಸುತ್ತವೆ. ಧರ್ಮಪಾಲ, ಚಂದ್ರಪಾಲ, ಗುಣಮತಿ, ಸ್ಥಿರಮತಿ, ಪ್ರಭಾವಿಮಿತ್ರ, ಜಿನಮಿತ್ರ ಮತ್ತು ಶೀಲಭದ್ರ ಈ ಆಚಾರ್ಯರು ನಳಂದ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ಅತ್ಯುನ್ನತ ಹುದ್ದೆಗಳಲ್ಲಿ ಇದ್ದವರು. ಈ ವಿದ್ಯಾಪೀಠವು ಶೀಲ, ಅರ್ಹತೆ ಮತ್ತು ಪಾಂಡಿತ್ಯಗಳಿಂದ ಕೂಡಿದ ಪ್ರಗಲ್ಭ ಪಂಡಿತರುಗಳನ್ನು ದೇಶದ ನಾನಾ ಮೂಲೆಗಳಿಂದ ಆಹ್ವಾನಿಸುತ್ತಿತ್ತು. ಆಚಾರ್ಯ ಧರ್ಮಪಾಲನು ದಕ್ಷಿಣ ಭಾರತದ ಕಾಂಚಿ ಪುರದವನು. ಈತನು ತನ್ನ ಪಾಂಡಿತ್ಯದಿಂದ ನಳಂದ ವಿದ್ಯಾಪೀಠದ ಅತ್ಯುನ್ನತ ಪದವಿಯನ್ನಲಂಕರಿಸಿದ್ದನು. ಧರ್ಮಪಾಲನು ಯೋಗಾಚಾರತತ್ವದ ವಿಷಯವಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈ ವಿದ್ಯಾಪೀಠದ ಇತರ ಪ್ರಾಧ್ಯಾಪಕರಾದ ಸ್ಥಿರಮತಿಯ ದಂಡಕಾರಣ್ಯದಿಂದಲೂ, ಗುಣಮತಿಯು ವಲ್ಲಭಿಯಿಂದಲೂ ಬಂದವರು. ಹ್ಯೂಯರ್ತ್ಸಾಂಗನ ಗುರುವಾದ ಶೀಲಭದ್ರನು ಪೂರ್ವ ಬಂಗಾಳದವನು. ಭಾರತದ ಯಾವ ಪ್ರದೇಶಕ್ಕೆ ಸೇರಿದವರಾದರೂ ಪಾಂಡಿತ್ಯದ ಆಧಾರದ ಮೇಲೆ ನಳಂದ ಪೀಠದ ಪ್ರಾಧ್ಯಾಪಕ ಪದವಿಗೆ ಅರ್ಹರಾಗಬಹುದಿತ್ತು. ನಳಂದದ ಹಿರಿಮೆಗೆ ಇದು ಪ್ರಮಾಣಭೂತವಾಗಿದೆ. ಜ್ಞಾನವು

ಜಾತಿ, ಎಲ್ಲೆ ಮತ್ತು ಪ್ರಾಂತ್ಯಗಳನ್ನು ಮೀರಿದುದೆಂಬ ಅಂಶವನ್ನು ನಳಂದ ಪೀಠದ ಅಧಿಕಾರವರ್ಗವು ಮನವರಿಕೆ ಮಾಡಿಕೊಂಡಿತ್ತು. ಆಯಾ ವಿಭಾಗದ ಆಚಾರ್ಯರ ಹೆಸರುಗಳನ್ನು ಫಲಕಗಳ ಮೇಲೆ ಕೆತ್ತುತ್ತಿದ್ದರು.

ದೇಶ ವಿದೇಶಗಳಿಂದ ಜ್ಞಾನಾಕಾಂಕ್ಷಿಗಳಾದ ವಿದ್ವಾಂಸರೂ ಹಾಗೂ ವಿದ್ಯಾರ್ಥಿಗಳು ನಳಂದಕ್ಕೆ ವಿಶೇಷ ವ್ಯಾಸಂಗಕ್ಕಾಗಿ ಬರುತ್ತಿದ್ದರು. ಆದರೆ ಪ್ರವೇಶ ಕೋರಿ ಬಂದವರಿಗೆಲ್ಲರಿಗೂ ಇಲ್ಲಿ ಅವಕಾಶ ಸಿಕ್ಕುತ್ತಿರಲಿಲ್ಲ. ಅಭ್ಯರ್ಥಿಗಳನ್ನು ಆರಿಸಿಕೊಳ್ಳಲು ಕೆಲವು ನಿಯಮಾವಳಿಗಳಿದ್ದವು. ಪ್ರವೇಶ ಕೋರಿ ಬಂದ ಅಭ್ಯರ್ಥಿಗಳು ವಿದ್ಯಾಪೀಠದ ಹೊರವಲಯದಲ್ಲಿ ನಿರ್ಮಿಸಿದ್ದ ಕಟ್ಟಡದಲ್ಲಿ ಸುಮಾರು ಮೂರು ತಿಂಗಳ ಕಾಲ ವಾಸಿಸಬೇಕಿತ್ತು. ಅವರಿಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಆ ಸಮಯದಲ್ಲಿ ಅಭ್ಯರ್ಥಿಗಳ ನಡೆ, ನುಡಿ, ಶಿಸ್ತು, ಸಂಯಮ ಹಾಗೂ ಗ್ರಹಣ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತಿತ್ತು. ಅನಂತರ ಪ್ರಸಿದ್ಧ ವಿದ್ವಾಂಸರು ಆಯ್ಕೆಯನ್ನು ನಡೆಸುತ್ತಿದ್ದರು. ಈ ವಿದ್ವಾಂಸರಿಗೆ 'ದ್ವಾರಪಂಡಿತ'ರೆಂದು ಹೆಸರಿದ್ದಿತು. ಪ್ರವೇಶ ಪರೀಕ್ಷೆಯಲ್ಲಿ ನೂರರಲ್ಲಿ ಕೇವಲ ಮೂವತ್ತು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದರು. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯವಿದ್ದಿತು. ಹ್ಯೂಯೆನ್‌ತ್ಸಾಂಗನು ನಳಂದದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅಲ್ಲಿ ಸುಮಾರು ಹತ್ತು ಸಹಸ್ರ ಮಂದಿ ವಿದ್ಯಾರ್ಥಿಗಳಿದ್ದರು. ಅಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ ಈ ವಿದ್ಯಾಲಯದ ದೀರ್ಘ ಇತಿಹಾಸದಲ್ಲಿ ಒಂದು ಸಾರಿಯಾದರೂ ವಿದ್ಯಾರ್ಥಿಗಳ ಶಿಸ್ತು ಮೀರಿದ ಘಟನೆಯು ವರದಿಯಾಗಿಲ್ಲ. ವಿದ್ಯಾರ್ಥಿಗಳ ಮತ್ತು ಆಚಾರ್ಯ ವರ್ಗದ ಮಧುರ ಬಾಂಧವ್ಯ ಹಾಗೂ ಸಂಯಮಗಳು ಆದರ್ಶವಾಗಿದ್ದವು. ಕಾರ್ಯಕ್ರಮಗಳು ನಿಯತ ಕಾಲದಲ್ಲಿ ನಡೆಯುತ್ತಿದ್ದವು. ನೀರಿನ ಘಂಟಾಪಾತ್ರೆಯ ಸಹಾಯದಿಂದ ವೇಳೆಯನ್ನು ಗೊತ್ತುಪಡಿಸಿಕೊಳ್ಳುವ ವ್ಯವಸ್ಥೆ ಇತ್ತು. ನಳಂದ ವಿಶ್ವವಿದ್ಯಾಲಯದ ಶಿಕ್ಷಣ ಪದ್ಧತಿಯು ಮುಂದುವರೆದ ರಾಷ್ಟ್ರಗಳ ಶಿಕ್ಷಣದ ವಿಧಾನವನ್ನು ಮನವರಿಕೆ ಮಾಡಿಕೊಡುತ್ತದೆ. ಇಲ್ಲಿ ಬೋಧನೆ, ಸಂಶೋಧನೆ ಹಾಗೂ ಪ್ರಸಾರ ಇವುಗಳಿಗೆ ಅವಕಾಶವಿತ್ತೆಂದು ತಿಳಿದುಬರುತ್ತದೆ. ವಿದ್ಯಾರ್ಥಿಗಳ ವ್ಯಾಸಂಗದ ದರ್ಜೆಗಳಿಗನುಗುಣವಾಗಿ ಅನೇಕ ವರ್ಷಗಳಿದ್ದವು. ಕೆಳ ದರ್ಜೆಯ ತರಗತಿಗಳಲ್ಲಿ ಪಠ್ಯ ಪುಸ್ತಕಗಳನ್ನು ಬೋಧಿಸಲಾಗುತ್ತಿತ್ತು. ಮೇಲ್ತರಗತಿಯ ವಿದ್ಯಾರ್ಥಿಗಳಿಗೆ ಉಪನ್ಯಾಸದ ಮೂಲಕ ಬೋಧಿಸುತ್ತಿದ್ದರು. ಉಚ್ಚ ಶಿಕ್ಷಣದಲ್ಲಿ ಆಧುನಿಕ ಕಾಲದ ವ್ಯಾಸಂಗಗೋಷ್ಠಿಯಂತಹ ಪದ್ಧತಿ ಇತ್ತು. ಪ್ರಶ್ನೆ ಮತ್ತು ಉತ್ತರದ ಮೂಲಕ ಗಹನ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಸರ್ವೋಚ್ಚ ವ್ಯಾಸಂಗದಲ್ಲಿ ನಿರತರಾಗಿರುತ್ತಿದ್ದ

ಪ್ರತಿ ಮೂರು ಮಂದಿ ವಿದ್ಯಾರ್ಥಿಗಳಿಗೊಬ್ಬರಂತೆ ಮಾರ್ಗದರ್ಶಕ ಪ್ರಾಧ್ಯಾಪಕರಿರುತ್ತಿದ್ದರು. ಈ ವರ್ಗದ ವಿದ್ಯಾರ್ಥಿಗಳು ತಾವೇ ತಮ್ಮ ತಮ್ಮ ವ್ಯಾಸಂಗದ ವಿಷಯಗಳ ಮೇಲೆ ಪ್ರೌಢ ಪ್ರಬಂಧವನ್ನು ರಚಿಸಬೇಕಾಗಿದ್ದಿತು. ಅಂತಹ ಪ್ರಬಂಧಗಳನ್ನು ಇಬ್ಬರು ಅಥವಾ ಮೂರು ಮಂದಿ ಪ್ರಾಧ್ಯಾಪಕರು ಪರೀಕ್ಷಿಸುತ್ತಿದ್ದರು. ಇಂತಹ ಪರೀಕ್ಷೆಯಲ್ಲಿ ತೇರ್ಗಡೆಯಾದನಂತರ ಅವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗುತ್ತಿತ್ತು. ಈ ವಿಶ್ವವಿದ್ಯಾಲಯದಲ್ಲಿ ಪ್ರಶಸ್ತಿ ಪಡೆದ ವಿದೇಶೀಯ ಗಣ್ಯ ವಿದ್ಯಾರ್ಥಿಗಳಲ್ಲಿ ಹ್ಯೂಯೆನ್‌ತ್ಸಾಂಗನೂ ಒಬ್ಬನು. ಈತನಿಗೆ 'ಧರ್ಮಾಚಾರ್ಯ', 'ಮೋಕ್ಷಾಚಾರ್ಯ' ಮತ್ತು 'ಮಹಾಯಾನ ದೇವ' ಎಂಬ ಪ್ರಶಸ್ತಿಗಳನ್ನು ಕೊಡಲಾಗಿತ್ತು. ಪ್ರಶಸ್ತಿಪತ್ರ ವಿತರಣೆಯಲ್ಲಿ ಆಧುನಿಕತೆ ಇತ್ತೆಂದು ಟಿಬೇಟಿನ ಗ್ರಂಥಾಧಾರಗಳಿಂದ ತಿಳಿದು ಬರುತ್ತದೆ. ಆ ಪ್ರಕಾರ ವಿಕ್ರಮಶೀಲ ವಿದ್ಯಾಪೀಠದ ಪದವೀ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಒಂದು ಸಾರಿ ಹರ್ಷ ಚಕ್ರವರ್ತಿಯು ಅಲಂಕರಿಸಿದ್ದನು. ಇದೇ ರೀತಿಯ ಸಂಪ್ರದಾಯ ನಳಂದ ವಿಶ್ವವಿದ್ಯಾಲಯದಲ್ಲೂ ಇದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ನಳಂದವು ಅನೇಕ ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಸ್ಫೂರ್ತಿ ನೀಡಿತು. ಸೌರಾಷ್ಟ್ರದ ಮೈತ್ರಕ ಸಂತತಿಯ ರಾಜರು ನಳಂದದ ಪ್ರಾಧ್ಯಾಪಕರಾದ ಗುಣಮತಿ ಹಾಗೂ ಸ್ಥಿರಮತಿ ಇವರನ್ನು ಆಹ್ವಾನಿಸಿ ವಲಭಿ ವಿದ್ಯಾಪೀಠವನ್ನು ಸ್ಥಾಪಿಸಿದರು. ವಿಕ್ರಮಶೀಲ, ಓದಾಂತಪುರಿ(ಓದಂಡಪುರಿ) ಮತ್ತು ಜಗದ್ದಲ, ಈ ವಿದ್ಯಾಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆಗೆ ನಳಂದ ವಿಶ್ವವಿದ್ಯಾಲಯವು ಸ್ಫೂರ್ತಿ ನೀಡಿತು. ಕ್ರಿ. ಶ. ೮ನೇ ಶತಮಾನದಲ್ಲಿ ಬಂಗಾಳದ ಪಾಲಸಂತತಿಯ ಗೋಪಾಲರಾಜನು ನಳಂದದ ಆಚಾರ್ಯರನ್ನು ಆಹ್ವಾನಿಸಿ ಓದಾಂತಪುರಿ ವಿದ್ಯಾಪೀಠವನ್ನು ಸ್ಥಾಪಿಸಿದನು. ಅನೇಕ ಗಣ್ಯ ವಿದ್ವಾಂಸರು ಏಷ್ಯಾಖಂಡದ ನಾನಾ ದೇಶಗಳಿಂದ ತಮ್ಮ ಸಮಸ್ಯೆಗಳ ನಿವಾರಣೆಗಾಗಿ ನಳಂದ ವಿದ್ಯಾಲಯದ ಆಚಾರ್ಯರಲ್ಲಿಗೆ ಬರುತ್ತಿದ್ದರು. ಪರಸ್ಪರ ಚರ್ಚೆಯ ಮೂಲಕ ತಮ್ಮ ತಮ್ಮ ದೇಶಗಳಿಗೆ ಆಹ್ವಾನಿಸಿ ಗೌರವಿಸುತ್ತಿದ್ದರು.

ನಳಂದ ವಿಶ್ವವಿದ್ಯಾಲಯವು ಭಾರತೀಯ ಸಂಸ್ಕೃತಿಯನ್ನು ಟಿಬೆಟ್, ಚೈನಾ, ಕೊರಿಯಾ ಮತ್ತು ಜಪಾನ್ ದೇಶಗಳಲ್ಲಿ ಪ್ರಸಾರಮಾಡಿತು. ಬೌದ್ಧಮತ ಗ್ರಂಥಗಳಲ್ಲದೆ ಹಿಂದೂಮತದ ದಾರ್ಶನಿಕ ಹಾಗೂ ಸಂಸ್ಕೃತ ಸಾಹಿತ್ಯ ಗ್ರಂಥಗಳು ಟಿಬೆಟ್ ಮತ್ತು ಚೈನಾ ದೇಶಗಳ ಭಾಷೆಗಳಿಗೆ ತರ್ಜುಮೆಯಾದವು. ಹೀಗೆ ತರ್ಜುಮೆಯಾದ ಗ್ರಂಥಗಳಲ್ಲಿ ಪಾಣಿನಿಯ ಅಷ್ಟಾಧ್ಯಾಯಿಯೂ, ಚರಕಸಂಹಿತವೂ, ಕಾಳಿದಾಸನ ಮೇಘಸಂದೇಶವೂ ಸೇರಿವೆ. ಟಿಬೆಟಿನ ರಾಜನ ಆಹ್ವಾನದ ಮೇರೆಗೆ ನಳಂದ ಸಂಸ್ಥೆಯ

ಆಚಾರ್ಯರಲ್ಲೊಬ್ಬನಾದ ಶಾಂತರಕ್ಷಿತನು ಅಲ್ಲಿಗೆ ಹೋಗಿ ಅನೇಕ ಬೌದ್ಧಮತ ಗ್ರಂಥಗಳನ್ನು ಟಿಬೆಟ್ ಭಾಷೆಗೆ ಭಾಷಾಂತರಿಸಿ ಕ್ರಿ. ಶ. ೭೬೨ ರಲ್ಲಿ ಅಲ್ಲೇ ಮರಣ ಹೊಂದಿದನು. ಅದೇ ಕಾಲದಲ್ಲಿ ಟಿಬೆಟ್ಟಿಗೆ ಆಹ್ವಾನಿತರಾದ ಇತರ ಆಚಾರ್ಯರಲ್ಲಿ ಪದ್ಮಸಂಭವನು ಅತಿ ಮುಖ್ಯನು. ಈತನು ಟಿಬೆಟ್ಟಿನ ಲಾಮಾಪೀಠದ ಸಂಸ್ಥಾಪಕನು. ಇಡೀ ಏಷ್ಯಾಖಂಡದಲ್ಲೆಲ್ಲಾ ಜ್ಞಾನಕೇಂದ್ರವೆಂದು ಪ್ರಸಿದ್ಧವಾಗಿದ್ದ ಈ ವಿಶ್ವವಿದ್ಯಾಲಯದ ಆದಾಯ ಮೂಲಗಳು ಹೇರಳವಾಗಿದ್ದವು. ರಾಜ ಮಹಾರಾಜರು ಧನ, ಧಾನ್ಯ ಕೊಡುಗೆಯ ಮೂಲಕ ಪೋಷಿಸುತ್ತಿದ್ದುದಲ್ಲದೆ ಅನೇಕ ಗ್ರಾಮಗಳ ಹುಟ್ಟುವಳಿಯನ್ನು ವಿಶ್ವವಿದ್ಯಾಲಯದ ವೆಚ್ಚಕ್ಕಾಗಿ ದತ್ತಿಕೊಟ್ಟಿದ್ದರು. ಗುಪ್ತ ಸಂತತಿಯ ಅನೇಕ ಸಾರ್ವಭೌಮರು ನಳಂದ ಮಹಾವಿಹಾರವನ್ನು ಅನೇಕ ರೀತಿಯಲ್ಲಿ ಪೋಷಿಸಿ ಪ್ರೋತ್ಸಾಹ ಕೊಟ್ಟಿದ್ದರು. ನಳಂದ ವಿದ್ಯಾಕೇಂದ್ರದ ಪ್ರಾಧ್ಯಾಪಕರ ಪಾದಸೇವಕ ನೆಂದು ತನ್ನನ್ನು ತಾನೇ ಕರೆದುಕೊಂಡ ಸಾಮ್ರಾಟ್ ಶ್ರೀಹರ್ಷನ ಶ್ರದ್ಧೋತ್ಸಾಹಗಳು ಆ ವಿಶ್ವವಿದ್ಯಾಲಯದ ಅಮರ ಕೀರ್ತಿಗೆ ಬಹುಮಟ್ಟಿಗೆ ಸಹಕಾರಿಯಾದವು. ಆತನ ಕಾಲದಲ್ಲಿ ನಳಂದ ವಿಶ್ವವಿದ್ಯಾಲಯವು ಸರ್ವತೋಮುಖವಾದ ಅಭಿವೃದ್ಧಿಯನ್ನೂ ಹೊಂದಿತು. ಹರ್ಷವರ್ಧನನು ತನ್ನ ಸಾಮ್ರಾಜ್ಯದ ನೂರು ಗ್ರಾಮಗಳ ಹುಟ್ಟುವಳಿಯನ್ನು ವಿದ್ಯಾಸಂಸ್ಥೆಯ ವೆಚ್ಚಕ್ಕಾಗಿ ಬಿಟ್ಟುಕೊಟ್ಟನು. ಅಲ್ಲಿ ಒಂದು ವಿಶಾಲವಾದ ಸೌಧವನ್ನು ಕಟ್ಟಿಸಿ ಅದಕ್ಕೆ ಹಿತ್ತಾಳೆಯ ತಗಡುಗಳನ್ನು ಹೊದ್ದಿಸಿದನು. ಕನೂಜಿನಲ್ಲಿ ತಾನು ಸೇರಿಸಿದ್ದ ಸರ್ವಧರ್ಮ ಸಮ್ಮೇಳನಕ್ಕೆ ನಳಂದದಿಂದ ಒಂದು ಸಾವಿರ ವಿದ್ವಾಂಸರನ್ನು ಆಹ್ವಾನಿಸಿ ಗೌರವಿಸಿದನು. ತನ್ನ ಮಿತ್ರ ರಾಜರು ಹಾಗೂ ಶ್ರೀಮಂತ ಪ್ರಜೆಗಳು ವಿದ್ಯಾಲಯದ ಮೇಲ್ಮೆಗೆ ಮುಂದಾಗಲು ಕರೆಕೊಟ್ಟನು. ಆತನ ಪ್ರಜೆಗಳು ಪ್ರತಿನಿತ್ಯವೂ ಅಕ್ಕಿ, ಹಾಲು, ಹಣ್ಣು, ತುಪ್ಪಮತ್ತು ಇತರ ಸಾಮಗ್ರಿಗಳನ್ನು ವಿದ್ಯಾಕೇಂದ್ರಕ್ಕೆ ಒದಗಿಸುತ್ತಿದ್ದರು. ಅವನಾದ ಮೇಲೆ ಕ್ರಿ.ಶ.೮ನೇ ಶತಮಾನದಲ್ಲಿ ಕನೂಜ್ ರಾಜ್ಯದ ಪ್ರಧಾನಿ ಯಶೋವರ್ಮದೇವನ ಕುಮಾರನಾದ ಮಾಲದನು ತನ್ನ ವಿಪುಲವಾದ ಆಸ್ತಿ, ಐಶ್ವರ್ಯವನ್ನು ಈ ವಿಶ್ವವಿದ್ಯಾಲಯಕ್ಕೆ ದಾನಮಾಡಿದನು. ಈತನು ಬರೆಸಿದ ಶಾಸನವು ನಳಂದದ ಹಿರಿಮೆಯನ್ನು ಪ್ರತಿಬಿಂಬಿಸುವ ಸಮಕಾಲೀನ ಕನ್ನಡಿಯಂತಿದೆ. 'ಪ್ರಗಲ್ಭ ಪಾಂಡಿತ್ಯದಿಂದ ಕೂಡಿದ ಪ್ರಾಧ್ಯಾಪಕರ ನಿಧಿಯಾದ ನಳಂದವು ಸಕಲಸಾರ್ವಭೌಮರ ಸಂಪತ್ತಿನ ನಗರಗಳನ್ನು ನಾಚುವಂತೆ ಮಾಡಿದೆ' ಎಂದು ಈ ಶಾಸನದಲ್ಲಿ ಕೆತ್ತಲಾಗಿದೆ. ಕೈಲಾಸ ಪರ್ವತವನ್ನು ಹೋಲುವ ಸುಂದರ ಭವ್ಯಮಂದಿರವನ್ನು ಗುಪ್ತಸಂತತಿಯ ಬಲಾದಿತ್ಯದೇವನು ನಳಂದದಲ್ಲಿ ಬುದ್ಧ ದೇವನಿಗಾಗಿ ನಿರ್ಮಿಸಿದನೆಂದು ಇದೇ ಶಾಸನದಿಂದ ತಿಳಿದುಬರುತ್ತದೆ.

ಎಂಟನೇ ಶತಮಾನದ ಉತ್ತರಾರ್ಧದಲ್ಲಿ ಪಾಲವಂಶದ ಅರಸರಾದ ಗೋಪಾಲ ಮತ್ತು ಧರ್ಮಪಾಲರು ಈ ವಿದ್ಯಾಪೀಠಕ್ಕೆ ವಿಶೇಷ ಪ್ರೋತ್ಸಾಹಕೊಟ್ಟರು. ಸುಮಾರು ಅದೇಕಾಲದಲ್ಲಿ ವಿಪುಲಶ್ರೀಮಿತ್ರ ಎಂಬುವನು ನಳಂದದಲ್ಲಿನ ಹಲವು ಶಿಥಿಲವಾದ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ ಇನ್ನೂ ಕೆಲವು ಹೊಸ ಕಟ್ಟಡಗಳನ್ನೂ ಹಾಗೂ ತಾರಾಭಗವತಿಯ ಪೂಜಾಮಂದಿರವನ್ನೂ ಕಟ್ಟಿಸಿದನು ಎಂಬುದಾಗಿ ಅಲ್ಲಿ ಸಿಕ್ಕಿರುವ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ನಳಂದ ವಿಶ್ವವಿದ್ಯಾಲಯಕ್ಕೆ ದೇಶೀಯ ರಾಜರಿಂದ ಮಾತ್ರವಲ್ಲದೆ ಏಷ್ಯಾಖಂಡದ ಇತರ ರಾಜ್ಯಗಳಿಂದಲೂ ಕಾಣಿಕೆಯು ಬರುತ್ತಿತ್ತು. ೯ನೇ ಶತಮಾನದಲ್ಲಿ ಸುವರ್ಣದ್ವೀಪ(ಸುಮಾತ್ರ)ದ ಮಹಾರಾಜನಾದ ಬಲಪುತ್ರದೇವನು ಬಂಗಾಳದ ದೇವಪುತ್ರ ಸಾಮ್ರಾಟನ ಅಪ್ಪಣೆಯನ್ನು ಪಡೆದು ನಳಂದದಲ್ಲಿ ಹೊಸ ಭವನಗಳನ್ನು ನಿರ್ಮಿಸಿದುದಲ್ಲದೆ ಐದು ಗ್ರಾಮಗಳ ಹುಟ್ಟುವಳಿಯು ವಿದ್ಯಾಪೀಠಕ್ಕೆ ಸಂದಾಯವಾಗುವ ಏರ್ಪಾಟನ್ನು ಮಾಡಿದನು.

ಕ್ರಿ. ಶ. ೫ನೇ ಶತಮಾನದಲ್ಲಿ ಪ್ರಸಿದ್ಧಿಗೆ ಬಂದ ನಳಂದ ವಿದ್ಯಾಪೀಠವು ಸುಮಾರು ೭೫೦ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಬೆಳೆದು ೧೧೯೭-೧೨೦೩ರ ಸುಮಾರಿನಲ್ಲಿ ಅಂತ್ಯವಾಯಿತು. ಭಕ್ತಿಯಾರ್ ಖಿಲ್ಜಿಯ ದಂಡಯಾತ್ರೆಯಿಂದ ನಿರ್ನಾಮವಾಯಿತು. ಸುಸಜ್ಜಿತವಾದ ಕಟ್ಟಡಗಳಿಂದ ಕೂಡಿದ ನಳಂದ ವಿಶ್ವವಿದ್ಯಾಲಯವು ಯಾರೋ ಸಾಮ್ರಾಟನ ರಾಜಧಾನಿಯಾಗಿರಬೇಕೆಂದು ಊಹಿಸಿ, ಕಾವಿ ಸಮವಸ್ತ್ರಧಾರಿಗಳಾಗಿದ್ದ ಆಚಾರ್ಯರೂ ಹಾಗೂ ವಿದ್ಯಾರ್ಥಿಗಳೂ ಸೈನಿಕರಿರಬೇಕೆಂದು ಭಾವಿಸಿ ಭಕ್ತಿಯಾರ್ ಖಿಲ್ಜಿಯು ನಳಂದವನ್ನು ಮುತ್ತಿದನು. ಈ ಆಕ್ರಮಣದಲ್ಲಿ ಅಸಂಖ್ಯಾತ ಆಚಾರ್ಯರೂ ವಿದ್ಯಾರ್ಥಿಗಳೂ ಕೊಲೆಯಾದರು. ಸಹಸ್ರಾರು ಗ್ರಂಥೋಪಕರಣಗಳಿಂದ ಕೂಡಿದ ಸೌಧಗಳು ಅಗ್ನಿಗೆ ಆಹುತಿಯಾದವು. ವಿದ್ಯಾಸಂಸ್ಥೆಯೆಂದು ತಿಳಿದನಂತರ ಭಕ್ತಿಯಾರ್ ಖಿಲ್ಜಿಗೆ ವಿಸ್ಮಯ ಹಾಗೂ ವಿಷಾದಗಳು ಮೂಡಿದವು. ಅಳಿದುಳಿದ ಗ್ರಂಥಗಳ ವಿಷಯಗಳನ್ನು ತಿಳಿಯುವ ಆಸಕ್ತಿಯು ಆತನಿಗೆ ಕೆರಳಿತು. ಆದರೆ ಆ ಹೊತ್ತಿಗೆ ಅವುಗಳನ್ನು ಓದಿ ತಿಳಿಸುವವರೇ ಇಲ್ಲದಂತಾಗಿತ್ತು. ನಾಮಾವಶೇಷವಾದ ವಿದ್ಯಾಕೇಂದ್ರವನ್ನು ಹಲವು ಕಾಲಾನಂತರ ಮಗಧಾಮಾತ್ಯ ಕುಕ್ಕುಟ ಸಿದ್ಧಸೇನನ ಸಹಾಯದಿಂದ ಪುನರುಜ್ಜೀವನಗೊಳಿಸಲು ಮುದಿತಭದ್ರನೆಂಬ ಆಚಾರ್ಯನು ಪ್ರಯತ್ನಿಸಿದನೆಂದೂ ಆದರೆ ಹಿಂದೂ ಮತ್ತು ಬೌದ್ಧ ಮತೀಯರ ವೈಷಮ್ಯದಿಂದ ಆ ಪ್ರಯತ್ನವು ಸಫಲವಾಗಲಿಲ್ಲವೆಂದೂ ಟಿಬೆಟ್ಟಿನ ಗ್ರಂಥಾಧಾರಗಳಿಂದ ತಿಳಿದು ಬರುತ್ತದೆ. ಪ್ರಾಚೀನ ಭಾರತೀಯರ ಜ್ಞಾನಾಕಾಂಕ್ಷೆಯ ಆಗರವಾದ ನಳಂದ ವಿಶ್ವವಿದ್ಯಾಲಯವು ಆಸುರೀಯ ಆಘಾತಕ್ಕೆ ಸಿಕ್ಕಿ ನಾಮಾವಶೇಷವಾಯಿತು. ಆದರೆ ಭಾರತೀಯ ಇತಿಹಾಸದ ಚಿರಂತನ ನೆನಪುಗಳಲ್ಲೊಂದಾದ ಅದರ ಮನನವು ಸದಾಕಾಲದಲ್ಲೂ ಭಾರತೀಯರ ಜ್ಞಾನವರ್ಧನೆಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುವ ಚೈತನ್ಯಶಕ್ತಿಯಾಗಿದೆ.

ಸಾಭಾರ: ಪ್ರಬುದ್ಧ ಕರ್ನಾಟಕ

ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರ

–ಕೆ.ಎಸ್. ಪಾರ್ಥಸಾರಥಿ,

ಶಿಕ್ಷಣವೆಂಬುದು ಸಾಮಾಜಿಕ ಪರಿವರ್ತನೆಯ ಬಹುಮುಖ್ಯ ಉಪಕರಣ. ಪರಿವರ್ತನೆ ಎಂದರೇನು, ಏನನ್ನು ಪರಿವರ್ತನೆ ಮಾಡಬೇಕು, ಯಾಕೆ, ಹೇಗೆ ಎಂಬ ಚರ್ಚೆಗೆ ತೊಡಗಬಲ್ಲ ಪರಿಜ್ಞಾನವನ್ನು ಶಿಕ್ಷಣ ನೀಡಬೇಕು. ಮೂಲ ಸಮಸ್ಯೆಯಾದ ಹಸಿವು, ಬಡತನ ಇತ್ಯಾದಿ ನೀಗಿಸಿಕೊಳ್ಳಲು ಸಮಾಜದ ಒಟ್ಟಾರೆ ಉತ್ಪಾದಕತೆ ವೃದ್ಧಿಸಬೇಕೆನ್ನುವುದು ನಿರ್ವಿವಾದ. ವ್ಯಕ್ತಿಯ ಮತ್ತು ಸಂಘಟನೆಗಳ ಉತ್ಪಾದಕ ಶಕ್ತಿ ಹೆಚ್ಚಬೇಕು. ಅಂತಹ ಸಾಮರ್ಥ್ಯ ನೀಡುವ ವಿದ್ಯಾರ್ಜನೆ ದೊರೆಯಬೇಕು. ಈ ಪ್ರಕ್ರಿಯೆ ತಾಂತ್ರಿಕ ತರಬೇತಿ, ನಿರ್ವಹಣ ಚತುರತೆ, ಹಣಕಾಸು ವ್ಯವಹಾರ ಮುಂತಾದ ವಿಷಯಗಳೆನ್ನೆಲ್ಲಾ ಒಳಗೊಂಡಿರುತ್ತದೆ. ಇದರ ಜೊತೆಗೆ ವ್ಯಕ್ತಿಯ ಸರ್ವಾಂಗೀಣ ವಿಕಾಸವೂ ಆಗಬೇಕು. ಶೋಷಣೆಯಿಂದ ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಪರಿಜ್ಞಾನ, ತಾನೇ ಶೋಷಕನಾಗದ ಸಾಮಾಜಿಕ ನ್ಯಾಯತತ್ಪರತೆ, ಹೃದಯವಂತಿಕೆ, ಸಾಮಾಜಿಕ ಜವಾಬ್ದಾರಿಯಿಂದ ಕೂಡಿದ ನಡೆವಳಿಕೆಗಳು, ಇವುಗಳನ್ನೆಲ್ಲಾ ಶಿಕ್ಷಣದ ಪ್ರಕ್ರಿಯೆಯಲ್ಲಿ ಮೈಗೂಡಿಸಿಕೊಳ್ಳಬೇಕು. ಅವನ ನಾಳಿನ ವ್ಯಕ್ತಿತ್ವ, ಸಮಾಜದಲ್ಲಿ ಇತರರಿಗೆ ಮಾದರಿಯಾಗುವಂತೆ ರೂಪುಗೊಳ್ಳಬೇಕು. ಹೊಟ್ಟೆಪಾಡು ನೋಡಿಕೊಳ್ಳುವುದೊಂದೆ ಜೀವನದ ಮೂಲ ಉದ್ದೇಶವಾಗಬಾರದು. ಆದರೆ ಅದನ್ನು ಪರಿಹರಿಸಿಕೊಳ್ಳದೆ ಮುಂದುವರಿಯಲಾಗದ ವಾಸ್ತವವೂ ನಮ್ಮ ಮುಂದಿದೆ. ಆ ಅಂಶವನ್ನು ಒಪ್ಪಿಕೊಳ್ಳಬೇಕು. ಲಂಗೋಟಿ ಕಟ್ಟಿಕೊಂಡು ಅಲೆಮಾರಿಯಾಗಿಯೂ ಇರಬಹುದು ಎಂಬುವವರ ವಿಷಯವಲ್ಲ ನಾವು ಇಲ್ಲಿ ಚರ್ಚಿಸುತ್ತಿರುವುದು. ಹೊಟ್ಟೆಪಾಡನ್ನು ಪರಿಹರಿಸಿಕೊಳ್ಳುವುದು ಎಂದರೆ ಆ ಕ್ರಿಯೆಗೆ ವಿಸ್ತೃತ ವ್ಯಾಪ್ತಿ ಇದೆ. ಮಿತಿ ಎನಿಸಿದರೂ ಹೊಟ್ಟೆ ತುಂಬುವಷ್ಟು ಆಹಾರ, ಆರೋಗ್ಯ, ಇರಲು ಸರಳವಾದರೂ ಚೊಕ್ಕವಾಗಿ ಕಟ್ಟಿರುವ ವಸತಿ, ಪ್ರಕೃತಿಯೊಡನೆ ನಿಕಟ ಸಂಪರ್ಕ–ಇವುಗಳನ್ನು ನೀಗಿಕೊಂಡರೆ ಜೀವನದ ಮೂಲ ಉದ್ದೇಶವಾದ ಸಾಂಸ್ಕೃತಿಕ ಬೆಳವಣಿಗೆ, ಕಲೆ, ವಿಜ್ಞಾನ, ತತ್ವಜ್ಞಾನ, ಸಾಹಿತ್ಯ, ಸಂಗೀತ, ಮಾನವೀಯ ಮತ್ತು ಸಾಮಾಜಿಕ ಮೌಲ್ಯಗಳು–ಇವುಗಳ ಕುರಿತು ಸ್ವಸ್ಥ ಮನಸ್ಸಿನ ನೆಲೆಯಿಂದ ಚಿಂತಿಸಲು ಸಾಧ್ಯವಿದೆ. ಇವೆಲ್ಲಾ ಮಾನವನ ಮನದಾಳದ ಮೂಲ ಪ್ರಜ್ಞೆಗಳಾಗಿರುವುದರಿಂದಲೇ ಅರೆಹೊಟ್ಟೆಯಲ್ಲೂ ಮಾನವ ಇವುಗಳ ಬಗ್ಗೆ ಒಂದಿಷ್ಟು ಆಸಕ್ತಿ ತೋರಿಸುತ್ತಾ ಬಂದಿದ್ದಾನೆ. ಹಾಗಿರುವುದರಿಂದಲೇ ಜನಪದ ಸಂಸ್ಕೃತಿ ಅಷ್ಟು ಮೌಲಿಕವಾಗಿ, ಸುಂದರವಾಗಿ, ಸರಳವಾಗಿ, ಬೆಳೆದಿರುವುದು. ಒಂದು ವೇಳೆ ಸುಶಿಕ್ಷಿತ ಸಮಾಜದಲ್ಲಿ ಹಸಿವು–ನೀರಡಿಕೆಗಳಂತಹ ಸಮಸ್ಯೆಗಳನ್ನು ನೀಗಿಕೊಂಡಿದ್ದರೆ.

ಮೂಲ ಪ್ರಜ್ಞೆಗಳಾದ ಸಾಂಸ್ಕೃತಿಕತೆ ಮುಂತಾದುವನ್ನು ಅದೆಷ್ಟು ತೃಪ್ತಿಕರವಾಗಿ ಸಾಧಿಸಬಹುದಿತ್ತು. ಈ ಬೇರು ಗಟ್ಟಿಯಾಗಿರುವುದಿಂದಲೇ ಜನರು ಜೀವನದ ಉದರಂಭರಣದ ಸಮಸ್ಯೆಗಳ ಬಗ್ಗೆ ಹತಾಶರಾಗದೆ, ಅಭಿವೃದ್ಧಿಗಾಗಿ ಹೋರಾಡಲು ಉತ್ಸುಕರಾಗಿರುವುದು. ಹೀಗೆ ಆಗಬಹುದಾದ ಸಾಧನೆಗಳು ಇನ್ನೂ ನೂರುಪಟ್ಟು ಇವೆ.

ಸುಶಿಕ್ಷಿತನಾದವನು ನೆರೆಹೊರೆಯವರೊಡನೆ ಹಾಗೂ ಪ್ರಭುತ್ವದೊಡನೆ ಸಹಕರಿಸುತ್ತಾನೆ. ಪ್ರಭುತ್ವ ಭ್ರಷ್ಟವಾಗದಂತೆ, ನಿರಂಕುಶವಾಗದಂತೆ ನಿಯಂತ್ರಿಸಲು ಪ್ರಯತ್ನಿಸುತ್ತಾನೆ. ಅಂಥ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವ್ಯಕ್ತಿತ್ವದ ಸಾಮರ್ಥ್ಯದ ಪರಾಕಾಷ್ಠೆಯನ್ನು ತಲುಪುವಂತೆ ಬೆಳೆಯಲು ಮುಕ್ತ ಅವಕಾಶವಿರುತ್ತದೆ. ಗಾಳಿ ಬೆಳಕು ತುಂಬಿದ ಕೊಠಡಿ, ಸುತ್ತುವರಿದ ಸಸ್ಯರಾಶಿ, ಕುಡಿಯುವ ನೀರು, ಶೌಚಾಲಯ ಇವೆಲ್ಲ ವ್ಯವಸ್ಥಿತವಾಗಿರುತ್ತದೆ. ಈಗಂತೂ ೧೦ ನೆಯ ತರಗತಿಯವರೆಗೆ ಮನೆಯಲ್ಲಿ ಸಿಗದ ಪೌಷ್ಠಿಕ ಆಹಾರವನ್ನು ಶುಭ್ರವಾಗಿ ತಯಾರಿಸಿ ಮಕ್ಕಳಿಗೆ ಬಿಸಿಯೂಟ ನೀಡುವ ವ್ಯವಸ್ಥೆ ಆಗುವುದರಲ್ಲಿದೆ. ಒಳ್ಳೆಯ ವಾಚನಾಲಯ, ಪುಸ್ತಕ ಭಂಡಾರ, ವೈಜ್ಞಾನಿಕ ಪ್ರಯೋಗಶಾಲೆ, ಮಾನವಿಕ ಶಿಕ್ಷಣಸಾಮಗ್ರಿಗಳ ಸಂಗ್ರಹಾಲಯ, ಹಲಬಗೆಯ ಕ್ರೀಡೆ, ವ್ಯಾಯಾಮ, ಆಟದ ಬಯಲು, ರಂಗಮಂಟಪ, ಮನೆಗೆ ಹತ್ತಿರದಲ್ಲೇ ಶಾಲೆ, ಹೀಗೆಲ್ಲ ಹೇಳುತ್ತಾ ಹೋಗಬಹುದು. ಇವೆಲ್ಲಕ್ಕಿಂತ ಮುಖ್ಯವಾಗಿ ಎಲ್ಲಾ ಶಾಸ್ತ್ರಗಳ ಅಭ್ಯಾಸಕ್ಕೂ ಮೂಲವಾದ ಕೇವಲ ಶುಷ್ಕ ತರ್ಕವಲ್ಲದ ಕಾರ್ಯ-ಕಾರಣ- ಸಂಬಂಧ-ವಿಶ್ಲೇಷಣೆ, ಅದರಿಂದ ಹೊರಹೊಮ್ಮುವ ಮಥಿತಾರ್ಥಗಳು, ಅವಕ್ಕೆ ಲಗ್ಗೆ ಹಾಕಬಲ್ಲ ವೈಚಾರಿಕ ನಿಶಿತಮತಿಯನ್ನೂ ವಿದ್ಯಾರ್ಥಿಗೆ ನೀಡಬೇಕು. ಅದು ಅವನಿಗೆ ದಕ್ಕಿದರೆ, ತಾನು ಇಲ್ಲಿಯವರೆಗೂ ಓದಿ ಅಭ್ಯಾಸಮಾಡಿ ಕಂಡರಿಯದ ಹೊಸ ಪರಿಸ್ಥಿತಿಯು ಉದ್ಭವಿಸಿದಾಗಲೂ ವಿಚಲಿತನಾಗದೆ, ಚಿಂತನಾಮಾರ್ಗವನ್ನನುಸರಿಸಿ ಅರ್ಥೈಸಿಕೊಳ್ಳಲು ಸಮರ್ಥನಾಗಿರುತ್ತಾನೆ. ಭೂಗೋಳದ ರಚನೆಯನ್ನೂ, ಅಕ್ಷಾಂಶ-ರೇಖಾಂಶಗಳನ್ನೂ, ವಿವಿಧ ವರ್ಣದ ಮಣ್ಣಿನ ಗುಣಗಳನ್ನೂ, ಹವಾಮಾನ ಉಂಟಾಗುವ ರೀತಿಗಳನ್ನೂ ತಿಳಿಸಿದರೆ, ಇಂಥ ಅಕ್ಷಾಂಶ ರೇಖಾಂಶದ ನಡುವಿನ ಭೂಪ್ರದೇಶದಲ್ಲಿ ಏನು ಬೆಳೆಯುತ್ತವೆ, ಜನಜೀವನ ಹೇಗಿರಬಹುದು ಎಂದೆಲ್ಲಾ ಹೇಳಬಹುದೆಂದು ನನ್ನ ಗುರುಗಳು ೬ ನೆಯತರಗತಿಯಲ್ಲಿ ಕಲಿಸಿದ್ದರಾಗಿ ಹೈಸ್ಕೂಲಿನ ಭೂಗೋಳ ಪಾಠ ನನಗೆ ಹೂವೆತ್ತಿದಷ್ಟು ಹಗುರವಾಗಿತ್ತು. ಉರುಹೊಡೆಯುವ ಪ್ರಮೇಯವೇ ಬರಲಿಲ್ಲ.

ನಾವು ಮಾಡುವ ಒಳಿತು ಕೆಡಕುಗಳ ಪರಿಣಾಮವನ್ನು ನಾವೇ ಕಾಲಕ್ರಮದಲ್ಲಿ ಅನುಭವಿಸಬೇಕಾಗುತ್ತದೆ ಎಂದರೆ ಅದು ಅರ್ಥವಾಗುತ್ತದೆ. ಆದರೆ ಹುಟ್ಟುತ್ತಲೇ ಅದಾವುದೋ ಬುತ್ತಿ ಇಟ್ಟುಕೊಂಡು ಬಂದಿದ್ದೇವೆ ಎಂದೋ, ಇಂದು ಮಾಡಿದ ಒಳ್ಳೆಯ ಕೆಲಸದ ಶ್ರಮದ ಫಲ ಇಂದೇ ದೊರಕದೇ ಇದ್ದರೆ ಅದು ಹಿಂದಿನ ಜನ್ಮದಲ್ಲಿ

ಮಾಡಿದ ಪಾಪದ ಪರಿಣಾಮವೆಂತಲೋ ಅಥವಾ ಈಗ ಸಿಗದಿದ್ದರೂ ಮುಂದಿನ ಜನ್ಮದಲ್ಲಿ ದೊರೆಯುತ್ತದೆ ಎಂತಲೋ ಹೇಳುತ್ತಲೇ ಇಂದು ಮಾಡಿದ ಕೆಟ್ಟ ಕೆಲಸದ ಪರಿಣಾಮವನ್ನು ಮುಂದಿನ ಜನ್ಮದಲ್ಲಿ ಒಳ್ಳೆಯದು ಮಾಡಿ ತಪ್ಪಿಸಿಕೊಳ್ಳಬಹುದು ಎಂದರೆ ಇದೆಂಥ ತರ್ಕ? ಇನ್ನೊಂದು ಜನ್ಮವಿದೆಯೋ ಇಲ್ಲವೊ ಎನ್ನುವುದಕ್ಕಿಂತ ನಿರಾತಂಕವಾಗಿ ಈಗ ಭ್ರಷ್ಟನಾಗಬಹುದು ಎನ್ನುವಂತಾಗಿಬಿಡುತ್ತದಲ್ಲ! ಈ ಪಾಠ ಸ್ವೀಕರಿಸಿದ ಯಾರು ತಾನೆ ಲಂಚಕೋರನಾಗದಿರಲು ಸಾಧ್ಯ? ಲಂಚವನ್ನೂ ತೆಗೆದುಕೋ, ಅದರ ಒಂದು ಪಾಲನ್ನು ತಿರುಪತಿ ತಿಮ್ಮಪ್ಪನಿಗೆ ಕೊಡು ಎಂಬ ಇಂದಿನ ಪರಿಪಾಠದ ಹಿಂದೆ ಈ ರೀತಿಯ ಪ್ರತಿಗಾಮಿ ಶಿಕ್ಷಣದ ಕೈವಾಡವಿದೆ. ಇದು ಕೊನೆಗೊಳ್ಳದೆ ಶೋಷಣೆ ಹೇಗೆ ತಾನೆ ನಿಲ್ಲುತ್ತದೆ? ಈ ಕುಟಿಲ ನೀತಿಯ, ಈ ಮೌಲ್ಯದ ಅಪಮೌಲ್ಯದ ವಿರುದ್ಧ ಕಿಡಿಕಾರುವ ವಿಚಾರಮತಿಗಳನ್ನು ಬೆಳೆಸುವುದು ಶಿಕ್ಷಣದ ಒಂದು ಮುಖ್ಯ ಜವಾಬ್ದಾರಿಯಾಗುತ್ತದೆ. ಇಂದಿನ ಅನಿಷ್ಟಗಳನ್ನು ಸರಿಪಡಿಸಲು ತಾನೇ ಮುಂದಾಗದೆ ಠಕ್ಕರನ್ನು ಮುಂದಲೆ ಹಿಡಿದು ಬೀದಿಗೆಳೆಯುವ ಕೆಚ್ಚಿನ ಯುವಕರನ್ನು ತಯಾರುಮಾಡುವ ಶಿಕ್ಷಣ ಇಂದು ಅಗತ್ಯ. ಮೌಲ್ಯಗಳು ಆಕಾಶದಿಂದೇನೂ ಉದುರುವುದಿಲ್ಲ. ಅವು ಜೀವನದ ಫಲವತ್ತತೆಯಿಂದ ವಿಕಸಿತವಾಗುವ ಅಂಶಗಳು. ವಾಸ್ತವ ಜೀವನಕ್ಕೆ ಸಂಬಂಧಿಸದೆ ಉಪದೇಶಿಸುವ ಯಾವ ಮೌಲ್ಯಗಳೂ ಉಪದೇಶ ಪಡೆದವನಿಗೆ ಯಾವ ಪ್ರಯೋಜನವನ್ನೂ ತಾರದೆ, ತಮ್ಮನ್ನು ತಾವೆ ಪ್ರಬಲ ಶೋಷಣೆಗೆ ಮನಸಾರ ಒಪ್ಪಿಸಿಕೊಳ್ಳುವ ದಾಸಬುದ್ಧಿಯನ್ನು, ವ್ಯಕ್ತಿಗತ ಅಸಹಾಯಕತೆಯನ್ನು ಸೃಷ್ಟಿಸುತ್ತವೆ. ಮೌಲ್ಯಗಳನ್ನು ಬಾಯಿಪಾಠ ಮಾಡಿಸಲಾಗುವುದಿಲ್ಲ. ಅವು ಹೇಗೆ ಉಗಮವಾಗುತ್ತವೆ ಎಂಬುದನ್ನು, ಅವುಗಳ ಅಗತ್ಯವನ್ನು, ಸಮಾಜ ಜೀವನದಲ್ಲಿ ಅವುಗಳ ಸೃಜನಾತ್ಮಕ ಪಾತ್ರವನ್ನು ತಿಳಿಸುವದು ಅಗತ್ಯ. ಜೀವನದ ವಿಕಾಸಕ್ಕೆ, ಜೀವನದ ಪ್ರೀತಿಗೆ, ಐಕ್ಯಮತ್ಯಕ್ಕೆ ನೆರವಾಗುವಂತಹ ಸರಳ ನಿಯಮಗಳನ್ನು ಮಾತ್ರ ಸ್ವೀಕರಿಸುವ ವಿಮರ್ಶಾಬುದ್ಧಿಯನ್ನು ವಿದ್ಯಾರ್ಥಿದೆಸೆಯಲ್ಲಿ ತುಂಬಿಕೊಡಬೇಕು. ಇವೆಲ್ಲವೂ ಸಮರ್ಥ ಶಿಕ್ಷಕರಿಂದ ಆಗಬೇಕಾಗಿದೆ. ಶಿಕ್ಷಕರಿಗೆ ಸಮಾಧಾನದ ಬಾಳ್ವೆ ನಡೆಸಲು ಅಗತ್ಯವಿದ್ದಷ್ಟು ಗೌರವಧನ ನೀಡಬೇಕು. ಒಳ್ಳೆಯ ಶಿಕ್ಷಕ ವಿದ್ವಾಂಸನಾಗಿದ್ದು, ಸುಸಂಸ್ಕೃತನಾಗಿರುತ್ತಾನೆ. ಭೋಗ ಪೂರ್ಣಜೀವನವನ್ನೇನೂ ಬಯಸುವುದಿಲ್ಲ. ಇತರರಿಗೆ ಮಾದರಿಯಾದ ಸಾತ್ವಿಕ ಜೀವನಲ್ಲಿ ತೃಪ್ತನಾಗಿರುತ್ತಾನೆ.ಅವರು ಬರೇ ಶಾಲಾ ಅವಧಿಯಲ್ಲಲ್ಲದೆ ಸದಾ ಕಾಲವೂ ಶಿಕ್ಷಕರೇ ಆಗಿರುತ್ತಾರೆ. ವೈದ್ಯರಂತೆ! ಅಂಥವರ ಬಗ್ಗೆ ಜನರು ಆದರವನ್ನು ಗೌರವವನ್ನು ತಾವಾಗೇ ನೀಡಲು ಮುಂದಾಗುತ್ತಾರೆ. ಉತ್ತಮ ಶಿಕ್ಷಕ ತನ್ನ ವಿಷಯಕ್ಕೆ ಸಂಬಂಧಪಟ್ಟ ವಿಷಯ ಜ್ಞಾನವಲ್ಲದೆ, ಎಲ್ಲ ವಿಷಯಗಳ ಬಗೆಗಿನ ಸಾಧಾರಣ ಜ್ಞಾನವನ್ನೂ ಗಳಿಸಿರುತ್ತಾನೆ. ಉತ್ತಮ ಶಿಕ್ಷಕ ತನ್ನದೇ ನೆಲೆಯಲ್ಲಿ ತಾನೊಬ್ಬ ನಿರಂತರ ವಿದ್ಯಾರ್ಥಿ ಎಂದೇ ಭಾವಿಸುತ್ತಾನೆ. ಆದ್ದರಿಂದ ಬೆಳೆಯುತ್ತಿರುವ ಜ್ಞಾನದ ಜಾಡುಹತ್ತಿ ಅದನ್ನು ತಾನು ಅರಗಿಸಿಕೊಳ್ಳುತ್ತಾ ಹೋಗುತ್ತಾನೆ. ತನ್ನ ವಿದ್ಯಾರ್ಥಿಗಳಿಗೆ

ಅದನ್ನು ನಿರ್ವಂಚನೆಯಿಂದ, ಮಾತೃ ವಾತ್ಸಲ್ಯದಿಂದ ಧಾರೆ ಎರೆಯುತ್ತಾನೆ. ಅವನು ಮನೆ ಪಾಠ ಹೇಳುತ್ತಾ ಹಣಗಳಿಸುವ ವ್ಯಾಪಾರಿಯಾಗುವುದಿಲ್ಲ. ಶಾಲೆಯ ಸಂಸ್ಥೆಯಲ್ಲಿ, ಅದರ ಮೂಲಭೂತ ಸೌಕರ್ಯಗಳಲ್ಲಿ ಸಾಮೂಹಿಕ ವಾತಾವರಣದಲ್ಲಿ ಇರಬಹುದಾದ ಕೊರತೆಗಳನ್ನೇ ಕಾರಣವಾಗಿಸಿ, ತನ್ನ ವೈಫಲ್ಯವನ್ನು ಸಮರ್ಥಿಸಿಕೊಳ್ಳುವ ಹೊಣೆಗೇಡಿಯಾಗುವುದಿಲ್ಲ. ಪೋಷಕರ–ಶಾಲೆಯ–ಸುತ್ತುವರಿದ ಸಮಾಜದ ನಡುವೆ ಜೈವಿಕ ಸಂಬಂಧ ಬೆಳೆಸಲು ಸದಾ ಹೋರಾಡುತ್ತಾನೆ. ಶಾಲೆಗೆ ಸಮೀಪದಲ್ಲೇ ತಾನೂ ವಾಸಿಸುತ್ತಾನೆ. ಯಾವ ವೇಳೆಯಲ್ಲೂ ವಿದ್ಯಾರ್ಥಿಗಳಿಗೆ ಅವನ ಮನೆ ತೆರೆದಿರುತ್ತದೆ. ಇಡೀ ಜೀವಿತಾವಧಿಯಲ್ಲಿಯೂ ತಾವು ವಿದ್ಯಾರ್ಥಿಗಳು ಎಂಬಂತೆ ನಿರಂತರ ವ್ಯಾಸಂಗ ಶೀಲರಾದ ಉಪಧ್ಯಾಯರು ಸ್ವಯಂ ಪ್ರಜ್ಞೆ, ಪರಿಸರ ಪ್ರಜ್ಞೆ, ಎಲ್ಲಾ ಜೀವಿಗಳೊಡನೆ ಸಹಬಾಳ್ವೆ ನಡೆಸುವ ಮನೋಧರ್ಮ, ದುಡಿಮೆಯ ಬಗ್ಗೆ ಗೌರವಭಾವಗಳನ್ನು ಹೊಂದಿರುತ್ತಾರೆ. ನಡೆ ನುಡಿಯಲ್ಲಿ ಸತ್‌ಶೀಲವನ್ನು ಬೆಳೆಸುವ ಶಿಕ್ಷಕರು ತಮ್ಮ ಶಕ್ತ್ಯಾನುಸಾರ ಸೇವೆಸಲ್ಲಿಸುತ್ತಾ ತಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸುತ್ತಾ ಬದುಕುತ್ತಾರೆ.

ಒಳ್ಳೆಯ ಜೀವನವೆಂದರೆ ದುಡಿಮೆಯಿಂದ ಬಿಡುಗಡೆ ಎಂದು ಭಾವಿಸುವವರು ಶೋಷಕರಾಗುತ್ತಾರೆ. ಪರೋಪಜೀವಿಗಳಾಗುತ್ತಾರೆ. ದುಡಿಮೆಯನ್ನು ಶಾರೀರಿಕ ಮತ್ತು ಬೌದ್ಧಿಕ ಎಂದು ವಿಭಜಿಸಿ ಬೌದ್ಧಿಕವನ್ನು ಉತ್ತಮವೆಂದೂ ಶಾರೀರಿಕವನ್ನು ಅಧಮವೆಂದೂ ಹೇಳುವವರು ಈ ವಿಷಯದ ಗತಿತಾರ್ಕಿಕ ಮೂಲಾರ್ಥವನ್ನು ತಿಳಿದುಕೊಂಡು, ತಮ್ಮ ತಪ್ಪು ಅಭಿಪ್ರಾಯವನ್ನು ಸರಿಪಡಿಸಿಕೊಳ್ಳುವುದು ಅಗತ್ಯ. ಹಾಗಿಲ್ಲದಿದ್ದರೆ ಅವರು ಜೀವನದ ಲೌಕಿಕ ಆಧಾರವನ್ನೇ ಪ್ರಶ್ನಿಸುತ್ತಾರೆ. ಈ ದ್ವಂದ್ವವನ್ನು ಸರಿಪಡಿಸಿಕೊಳ್ಳಲೆಂದೇ ಬೌದ್ಧಿಕ ಜೀವಿಗಳು ಪ್ರತಿನಿತ್ಯ ಕಾಯಕವೆಂದು ಶಾರೀರಿಕ ದುಡಿಮೆಯಲ್ಲಿ ತೊಡಗಬೇಕೆಂದು ಹಿರಿಯ ಚಿಂತಕರೆಲ್ಲಾ ತಿಳಿದಿದ್ದರು. ಜೀವನ ನಿರ್ವಹಣೆಗಾಗಿ ಪ್ರತಿಯೊಬ್ಬರೂತಮ್ಮ ಕೈಲಾದ ಸೃಜನಾತ್ಮಕ ಕಾಯಕವನ್ನು ಕೈಗೊಳ್ಳಬೇಕು. ವ್ಯಕ್ತಿಯ ದುಡಿಮೆಯ ಅಗತ್ಯವನ್ನು ಪ್ರೀತಿಯಿಂದ ಸ್ವೀಕರಿಸಿ ಅದನ್ನು ಕಲಾತ್ಮಕವಾಗಿಸುವುದು ವಿದ್ಯೆಯ ಉದ್ದೇಶವಾಗಿದೆ. ಮುಂಬರುವ ವೈಜ್ಞಾನಿಕ ಸಮಾಜದಲ್ಲಿ ವ್ಯಕ್ತಿಯ ಸ್ವಾಭಿಮಾನವನ್ನು ಮುರಿಯುವ ಅಸಹ್ಯಕರ ಕೆಲಸಗಳನ್ನು, ಬೆನ್ನು ಮೂಳೆ ಮುರಿಸುವ ದಾರುಣ ದುಡಿಮೆಯನ್ನು ಯಂತ್ರಗಳು ನಿರ್ವಹಿಸುತ್ತವೆ. ಮನುಷ್ಯನಿಂದ ಹೇಸಿಗೆ ತೆಗೆಸುವ, ಜೀತಾದಾಳನ್ನಾಗಿ ಮಾಡಿಕೊಳ್ಳುವ ಅನೀತಿಯುತ ಸಮಾಜಗಳಿಗೆ ಇತಿಶ್ರೀ ಹಾಡುವ ಸಾಮರ್ಥ್ಯ ನೀಡುವ ಕ್ರಾಂತಿಕಾರಿ ಪರಿವರ್ತನೆಗೆ ಶಿಕ್ಷಣದ ಅಗತ್ಯವಿದೆ. ಜಾತಿ, ವರ್ಗ, ಮತ, ಧರ್ಮ, ಲಿಂಗಭೇದ ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯವೆಂಬ ಹಲಬಗೆಯ ಅಮಾನವೀಯ ಮೌಲ್ಯಗಳನ್ನು, ಸಮಾಜ ವಿಚ್ಛಿದ್ರಕ ಪ್ರಕ್ರಿಯೆಗಳನ್ನು ಕೊನೆಗಾಣಿಸುವ ಶಿಕ್ಷಣವನ್ನು ನೀಡಬೇಕು. ವ್ಯಕ್ತಿಯ ಹಿತದಲ್ಲಿ ಸಮಷ್ಟಿಯ ಹಿತವನ್ನು, ಆ ಸಾಧನೆಯಲ್ಲಿ ತನ್ನ ವೈಯಕ್ತಿಕ ಸಾಫಲ್ಯತೆಯನ್ನು ಕಾಣಬಲ್ಲ ವ್ಯಕ್ತಿತ್ವ ನಿರ್ಮಾಣವಾಗಬೇಕು. ಹಲವು ಬಗೆಯ ಅಸಮಾನತೆ ಶೋಷಣೆಯ ಮೂಲ ಎಂಬ ಗ್ರಹಿಕೆ ವಿದ್ಯಾರ್ಥಿಗಳಲ್ಲಿ ತುಂಬಬೇಕು. ಅಂಥ ಸುಶಿಕ್ಷಿತರ ಸಮಾಜದಲ್ಲಿ ಮಾತ್ರ ಸಮಾಜದ

ಗಂಭೀರ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿದೆ. ಉತ್ತಮ ಶಿಕ್ಷಣವೊಂದೇ ಸಮಾಜ ಪರಿವರ್ತನೆಯ ಕೆಲಸವನ್ನು ಮೂಲಭೂತವಾಗಿ, ನೇರವಾಗಿ ಮಾಡಲಾರದು. ಆದರೆ ಈ ಹೊಣೆಗಾರಿಕೆ ಹೊರುವ ಸಾಮರ್ಥ್ಯವನ್ನು ಅದು ವ್ಯಕ್ತಿಗೆ ನೀಡುತ್ತದೆ. ಅಂತಹ ವ್ಯಕ್ತಿ ಸಮಾಜದ ಇತರೆ ಪರಿಕರಗಳಾದ ಉತ್ಪಾದನೆ, ಆರ್ಥಿಕತೆ, ಪ್ರಭುತ್ವ, ಕಲೆ, ಸಾಹಿತ್ಯ, ತತ್ವಶಾಸ್ತ್ರ, ರಾಜಕೀಯ ಮುಂತಾದವುಗಳ ಒಳಹೊಕ್ಕು, ಅವುಗಳನ್ನೇ ಪರಿವರ್ತನೆಯ ಮಾಧ್ಯಮಗಳನ್ನಾಗಿ ಮಾಡಿಕೊಳ್ಳಬಲ್ಲ. ವಿಶ್ವವಿದ್ಯಾಲಯದ ಹಂತದ ಶಿಕ್ಷಣ ಇದರಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಈ ಶಿಕ್ಷಣಕ್ಕೆ ಪೂರ್ವಭಾವಿಯಾಗಿ ಪ್ರೌಢಶಾಲೆಯವರೆಗಿನ ಶಿಕ್ಷಣ, ಸಮರ್ಥ ವಿದ್ಯಾರ್ಥಿಯನ್ನು ರೂಪಿಸಬಲ್ಲುದಾಗಿದೆ. ಶಿಕ್ಷಕರ ಕಟಿಬದ್ಧತೆ, ಸೇವಾ ಮನೋಭಾವಗಳ ಜೊತೆ ನಮ್ಮ ರಾಷ್ಟ್ರಾಧ್ಯಕ್ಷ ಶ್ರೀ ಅಬ್ದುಲ್ ಕಲಾಂ ಅವರು ಹೇಳುವಂತೆ ಮಿಷನರಿ ಉತ್ಸಾಹವೂ ಇದ್ದರೆ ಸರ್ಕಾರ ಅಥವಾ ರಾಜಕೀಯ ಉಂಟುಮಾಡಬಹುದಾದ ಬದಲಾವಣೆಗೆ ಕಾಯದೆಯೇ ಈಗಿರುವ ವ್ಯವಸ್ಥೆಯಲ್ಲೇ ತಮ್ಮದೇ ನೆಲೆಯಲ್ಲಿ, ತಮ್ಮದೇ ಮಟ್ಟದಲ್ಲಿ ತಡಮಾಡದೆ ಕಾರ್ಯತತ್ಪರರಾಗಲು ಅವಕಾಶವಿದೆ.

ಸಮಾಜ ಪರಿವರ್ತನೆಯಾಗಬೇಕು ಎಂಬುದರಲ್ಲಿ ಯಾವುದೇ ವಿವಾದ ವಿದ್ದಂತಿಲ್ಲ. ಆ ಪರಿವರ್ತನೆಯ ಸ್ವರೂಪವೆಂತಹದು ಎಂಬುದರಲ್ಲಿ ಅಲ್ಪಸ್ವಲ್ಪ ಅಭಿಪ್ರಾಯ ಭೇದ ಬರಬಹುದಾದರೂ, ಆ ಭೇದ ಪರಿಹಾರವಾಗುವವರೆಗೂ ಈಗಿರುವಂತೆಯೇ ಮುಂದುವರಿಯಬೇಕು. ಮುಂದುವರಿಯುತ್ತದೆ ಎನ್ನುವುದು ಸರಿಯಾಗದು. ಶಿಕ್ಷಣ ಕ್ಷೇತ್ರವು ವಿದ್ಯಾರ್ಥಿಗೆ ಆ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ನೀಡುತ್ತದೆಯೇ ವಿನಃ ಹೀಗೆ ಮಾಡಬೇಕೆಂದೇನೂ ಸೂಚಿಸುವುದಿಲ್ಲ ಅದು ಎಲ್ಲ ಸಾಧ್ಯತೆಗಳ ತಿಳಿವನ್ನು ಮೂಡಿಸುತ್ತದೆ, ಅಷ್ಟೆ. ಹಾಗಿದ್ದರೇನೆ ಅದು ಉತ್ತಮ ಶಿಕ್ಷಣವೆನಿಸಿಕೊಳ್ಳುತ್ತದೆ. ಮಾರ್ಗದ ಆಯ್ಕೆಯನ್ನು ಸಮಾಜದ ಸಂದರ್ಭವೇ ನಿರ್ಧರಿಸುತ್ತದೆ.

ಆದ್ದರಿಂದ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಅಗತ್ಯವಾದ ಈ ಎಲ್ಲ ಮೂಲ ಪರಿಕರಗಳೂ ಆತ ಪ್ರೌಢಶಾಲೆಯ ವ್ಯಾಸಂಗ ಮುಗಿಸುವ ವೇಳೆಗೆ ಲಭ್ಯವಾಗುವುದು ಅಗತ್ಯ. ಅಂಥ ವಿದ್ಯೆಯನ್ನು ಪಡೆದವನು ಮಾತ್ರ ಪ್ರೌಢನೆಂದೆನಿಸಿಕೊಳ್ಳುತ್ತಾನೆ. ಅವನು ವಿಶ್ವವಿದ್ಯಾಲಯದ ಮೆಟ್ಟಿಲು ಹತ್ತಿ ಜಗತ್ತಿನ ವೈಶಾಲ್ಯವನ್ನು ಗಾಬರಿಯಿಲ್ಲದೆ ಧೈರ್ಯದಿಂದ, ಭರವಸೆಯಿಂದ ಅವಲೋಕಿಸಲು ಸಮರ್ಥನಾಗುತ್ತಾನೆ.

* * *

ಜವಾಹರಲಾಲ್ ನೆಹರುರವರ ಪತ್ರ

ಖಾಸಗಿ ೩೧-೮-೧೯೬೨

ಪ್ರಿಯ ರೇಣು,

ಈ ದಿನ ಬೆಳಿಗ್ಗೆ ಲೋಕಸಭೆಯಲ್ಲಿ ನಾವು ನೋಡಿದ ಅಸಾಧಾರಣವಾದ ಪ್ರದರ್ಶನದ ಬಗ್ಗೆ ನನಗೆ ಬಹಳ ನೋವು ಮತ್ತು ಸಂಕಟವೂ ಆಯಿತು. ಯಾವುದೇ ಒಬ್ಬ ವ್ಯಕ್ತಿ ಆಗಾಗ್ಗೆ ತನ್ನ ಮನೋಸ್ಥಿಮಿತತೆಯನ್ನು ಕಳೆದು ಕೊಳ್ಳಬಹುದು ಆದರೆ ಅವ್ಯಾಹತವಾದ ಗಲಭೆ ಮತ್ತು ಅಧ್ಯಕ್ಷರ ಆದೇಶದ ಉಲ್ಲಂಘನೆ ಮಾಡುವುದಲ್ಲದೆ ಅವರಿಗೆ ಅವಮಾನ ಮಾಡುವಂಥ ಪ್ರಸಂಗವನ್ನು ನಾವು ಕಳೆದ ೧೨ ವರ್ಷಗಳಿಂದ ಅನುಭವಿಸಿರಲಿಲ್ಲ. ಸಮಾಜವಾದಿ ಪಕ್ಷದ ಸದಸ್ಯರು ಖಂಡನೀಯವಾದ ರೀತಿಯಲ್ಲಿ ವರ್ತಿಸುವ ಪದ್ಧತಿಯನ್ನು ಹೊಂದಿದ್ದಾರೆ. ಇದು ದುರ್ದೈವದ ಸಂಗತಿ. ಬಹುಶಃ ಅವರಿಗೆ ಇದಕ್ಕಿಂತ ಉತ್ತಮವಾದ ರೀತಿ ಗೊತ್ತಿಲ್ಲ. ನನ್ನನ್ನು ಆಶ್ಚರ್ಯಚಕಿತನನ್ನಾಗಿಯೂ ಮತ್ತು ನೋವಿಗೂ ಒಳಪಡಿಸಿದ ವಿಷಯ ಲೋಕಸಭೆಯ ಕಮ್ಯುನಿಷ್ಟ್ ಸದಸ್ಯರ ನಡವಳಿಕೆ! ಅವರು ಸಮಾಜವಾದಿಗಳ ಅಗೌರವಯುತ ವರ್ತನೆಯನ್ನು ಬೆಂಬಲಿಸಿದರು. ಇದೆಲ್ಲವೂ ಖಂಡಿತವಾಗಿ ನಮ್ಮ ವ್ಯವಸ್ಥೆಯನ್ನು ಮುರಿದು ಹಾಕುವುದು.

ನಿಮ್ಮ ಆತ್ಮೀಯ

ಜವಾಹರಲಾಲ್ ನೆಹರು.

ಮೇಲ್ಕಾಣಿಸಿದ ಪತ್ರವನ್ನು ಜವಹರಲಾಲ್ ನೆಹರುರವರು ೧೯೬೨ ಆಗಸ್ಟ್‌ರಲ್ಲಿ ಲೋಕ ಸಭೆಯ ಅಧ್ಯಕ್ಷರಿಗೂ ಮತ್ತು ವಿರೋಧ ಪಕ್ಷಗಳ ಸದಸ್ಯರಿಗೂ ಮಧ್ಯೆ ನಡೆದ ಕಾವೇರಿದ ಚರ್ಚೆಯ ನಂತರ, ಲೋಕಸಭೆಯಲ್ಲಿ ಕಮ್ಯುನಿಸ್ಟ್ ಗುಂಪಿನ ಉಪನಾಯಕರಾಗಿದ್ದ ರೇಣು ಚಕ್ರವರ್ತಿಗೆ ಬರೆದದ್ದು.

***

ಜನಪದ ನಿಲಯದ ಅಂತರಂಗದಲ್ಲಿ -೧೦

-ಸುರೇಂದ್ರ ಕೌಲಗಿ



ಭಕ್ತ ಮಂಡಳಿಯ ರಾಘವಾಚಾರ್ಯರು ನನ್ನ ಬಗ್ಗೆ ಅಪಾರವಾದ ಮಮತೆ ಇಟ್ಟುಕೊಂಡಿದ್ದರು. ನನ್ನ ಯೋಗ ಕ್ಷೇಮವನ್ನು ವಿಚಾರಿಸುತ್ತಿದ್ದರು. ನನ್ನ ತಂದೆ ತಾಯಿಗಳ ಬಗ್ಗೆ ವಿಚಾರಿಸುತ್ತಿದ್ದರು. ನನ್ನ ಪೂರ್ವ ಚರಿತ್ರೆಯನ್ನು ಆಸಕ್ತಿಯಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಹೀಗಾಗಿ ನಾನು ಯಾವ ಸಂಕೋಚವಿಲ್ಲದೆ ಅವರ ಮನೆಗೆ ಹೊಗುತ್ತಿದ್ದೆ. ಎಂಥ ಅವೇಳೆಯಲ್ಲೂ ನನಗೆ ಊಟ ಸಿಗುತ್ತಿತ್ತು. ಅವರ ದಯೆಯಿಂದಲೇ ವಾಸವಾಗಿರಲು ನನಗೆ ಕಲ್ಯಾಣಿ ಬೀದಿಯಲ್ಲಿರುವ ಭಕ್ತಮಂಡಳಿಯ ಕಟ್ಟಡದ ಜಗಲಿಯ ಮೇಲಿದ್ದ ಪುಟ್ಟ ಕೋಣೆ ಉಚಿತವಾಗಿ ದೊರೆಯಿತು. ಕೋಣೆಯ ಉದ್ದ ಸುಮಾರು ೭ ಅಡಿ ಅಗಲ ೪ ಅಡಿ. ವಿದ್ಯುತ್ ದೀಪದ ವ್ಯವಸ್ಥೆಯಿತ್ತು. ಈ ಪುಟ್ಟ ಕೋಣೆಯಲ್ಲಿ ನನ್ನ ವಾಸ. ಊಟ ರಾಘವಾಚಾರ್ಯರ ಮನೆಯಲ್ಲಿ. ಒಂದು ಅರ್ಥದಲ್ಲಿ ಊಟ ಮತ್ತು ವಸತಿ ಭಕ್ತಮಂಡಳಿಯಲ್ಲಿಯೇ ಎಂದು ಹೇಳಬಹುದು. ಈ ಕೋಣೆಯಲ್ಲಿ ಕುಳಿತುಕೊಂಡೇ ನನ್ನ ಮುಂದಿನ ಕಾರ್ಯ ಯೋಜನೆಗಳನ್ನುಕುರಿತು ಆಲೋಚಿಸುತ್ತಿದ್ದೆ. ಹೆಚ್ಚಿನ ಸಮಯವನ್ನು ಓದುವುದರಲ್ಲಿ, ಬರೆಯುವುದರಲ್ಲಿ, ಮತ್ತು ನೂಲುತೆಗೆಯುವುದರಲ್ಲಿ ಕಳೆಯುತ್ತಿದ್ದೆ. ಆಗಾಗ್ಗೆ ಜಗ್ಗುನಾರಾಯಣರ ಜೊತೆಗೆ ಊರಲ್ಲಿ ಸುತ್ತಾಡಿಕೊಂಡು ಬರಲು ಹೋಗುತ್ತಿದ್ದೆ. ಮಾತನಾಡುವ ಇಚ್ಛೆಯಾದರೆ ಪು.ತಿ.ಕೃಷ್ಣಯ್ಯಂಗಾರರ ಮನೆಗೆ ಹೋಗುತ್ತಿದ್ದೆ. ಆಗ ಪು.ತಿ.ಕೃಷ್ಣಯ್ಯಂಗಾರರದು ತುಂಬಿದ ಸಂಸಾರ. ಅವರ ಮನೆಗೆ ಹೋದಾಗಲೆಲ್ಲ ಆದರ, ಆತಿಥ್ಯ ಇರುತ್ತಿತ್ತು. ಹೀಗೆ ನಿಧಾನವಾಗಿ ಚಿಕ್ಕದಾದರೂ ಹಿತಕರವಾಗಿದ್ದ ಮೇಲುಕೋಟೆಯ ವಿಶಿಷ್ಟಪೂರ್ಣವಾದ ಸಮಾಜದಲ್ಲಿ ಪ್ರವೇಶ ಪಡೆಯಲಾರಂಭಿಸಿದೆ. ಆಗ ಮೇಲುಕೋಟೆಯಲ್ಲಿ ಭಕ್ತಮಂಡಳಿ ಪ್ರಾರಂಭಿಸಿದ್ದ ಪ್ರೌಢಶಾಲೆಯಿತ್ತು. ಅದು ೧೯೪೮ ರಲ್ಲಿ ಪ್ರಾರಂಭವಾಗಿತ್ತು. ಆದರೆ ಅದಕ್ಕೆ ಸ್ವಂತ ಕಟ್ಟಡವಿರಲಿಲ್ಲ. ಒಂದು ಹಳೆಯ ಛತ್ರದಲ್ಲಿ ಶಾಲೆ ನಡೆಯುತ್ತಿತ್ತು. ಶ್ರೀ ಅನಂತ ನಾರಾಯಣ ಅಯ್ಯಂಗಾರ್ ಮುಖ್ಯೋಪಾಧ್ಯಾಯರಾಗಿದ್ದರು. ಅವರು ಸಾಹಿತ್ಯ, ನಾಟಕ, ಗಮಕ

ಇತ್ಯಾದಿಗಳಲ್ಲಿ ಬಹು ಆಸಕ್ತಿಯುಳ್ಳವರಾಗಿದ್ದರು. ನೋಡುವುದಕ್ಕೆ ಲಕ್ಷಣವಾಗಿದ್ದರು. ಶಾಲೆಯ ಅಭಿವೃದ್ಧಿಯಲ್ಲಿ ಬಹಳ ಆಸಕ್ತಿ ಹೊಂದಿದ್ದರು. ಎಲ್ಲ ಉಪಾಧ್ಯಾಯರೊಂದಿಗೂ ಸಹ ಸ್ನೇಹಪೂರ್ಣವಾಗಿ ವರ್ತಿಸುತ್ತಿದ್ದರು. ಆದ್ದರಿಂದ ಅವರು ಎಲ್ಲರಿಗೂ ಬೇಕಾದ ಮನುಷ್ಯರಾಗಿದ್ದರು. ಅನಂತ ನಾರಾಯಣ ಅಯ್ಯಂಗಾರರಿಗೆ ನನ್ನ ತುಸು ಪರಿಚಯವಾಗಿತ್ತು. ನಾನು ಸರ್ವೋದಯ ಕಾರ್ಯಕರ್ತನೆಂಬುದು ಅವರಿಗೆ ಗೊತ್ತಾಗಿತ್ತು. ಆದ್ದರಿಂದ ಒಂದು ಸಲ ಗಾಂಧೀ ಜಯಂತಿಯ ಸಂದರ್ಭದಲ್ಲಿ ನನ್ನನ್ನು ತಮ್ಮ ಶಾಲೆಗೆ ಆಹ್ವಾನಿಸಿ ಗಾಂಧೀಯವರ ಬಗ್ಗೆ ಮಾತನಾಡಲು ಹೇಳಿದರು. ಮೇಲುಕೋಟೆಯಲ್ಲಿ ಅದೇ ನನ್ನ ಮೊದಲ ಸಾರ್ವಜನಿಕ ಭಾಷಣವಾಗಿತ್ತು ಮತ್ತು ಮೊದಲ ಸಾರ್ವಜನಿಕ ಸಂಪರ್ಕವಾಗಿತ್ತು. ಆ ಸಮಾರಂಭದ ಕಾರಣದಿಂದ ಅನಂತನಾರಾಯಣ ಅಯ್ಯಂಗಾರರಿಗೂ ನನಗೂ ಹೆಚ್ಚು ಪರಿಚಯವಾಯಿತು. ತುಂಬ ಆತ್ಮೀಯವಾಗಿ ಮಾತನಾಡುತ್ತಿದ್ದರು. ಕೆಲವೊಂದು ಸಲ ನನ್ನನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸುತ್ತಿದ್ದರು ಆಸಮಯದಲ್ಲಿ ಅವರು ನನ್ನೊಂದಿಗೆ ಊರಿನ ಅನೇಕ ಮಹನೀಯರ ಬಗ್ಗೆ, ಶಾಲೆಯಬಗ್ಗೆ ಹಾಗೂ ಗಮಕಸಾಹಿತ್ಯದ ಬಗ್ಗೆ ಮಾತನಾಡುತ್ತಿದ್ದರು. ಅವರೊಂದಿಗೆ ಸಮಯ ಕಳೆಯಲು ಖುಷಿಯಾಗುತ್ತಿತ್ತು. ಇದೇ ರೀತಿ ನನಗೆ ಮೇಲುಕೋಟೆಯಲ್ಲಿಯ ಅನೇಕ ಗೌರವಾನ್ವಿತ ಹಾಗೂ ಪಾಂಡಿತ್ಯವುಳ್ಳ ಕುಟುಂಬಗಳ ಜೊತೆಗೆ ಸಂಪರ್ಕ ದೊರೆಯುತ್ತಾಹೋಯಿತು. ಅವರ ಮನೆಗಳಲ್ಲಿ ಮದುವೆ-ಮುಂಜಿಗಳಾದರೆ ನನ್ನನ್ನು ಆಹ್ವಾನಿಸುತ್ತಿದ್ದರು. ಬೆಟ್ಟದ ಮೇಲಿನ ನರಸಿಂಹಸ್ವಾಮಿಗೆ ಅಭಿಷೇಕ ಇತ್ಯಾದಿ ಮಾಡಿಸಿದಾಗಲೂ ನನ್ನನ್ನು ಕರೆಯುತ್ತಿದ್ದರು. ಇಂಥ ಸಮಯಗಳಲ್ಲೆಲ್ಲಾ ನನಗೆ ರುಚಿಯಾದ ಊಟ ಸಿಗುತ್ತಿತ್ತು. ಆಗ ನನಗೆ ಊಟದ ಸಮಸ್ಯೆಯೂ ಪ್ರಧಾನವಾಗಿದ್ದುದರಿಂದ ಇಂಥ ಅವಕಾಶಗಳು ನನ್ನ ಆ ಸಮಸ್ಯೆಯನ್ನು ಬಹಳಷ್ಟು ಕಡಿಮೆ ಮಾಡುತ್ತಿದ್ದವು.

ಪು.ತಿ.ಕೃಷ್ಣಅಯ್ಯಂಗಾರರ ಪರಿಚಯದ ಕಾರಣದಿಂದ ನನಗೆ ಅವರ ಅಣ್ಣನವರೂ, ವರಕವಿಯೂ ಆಗಿದ್ದ ಪು.ತಿ. ನರಸಿಂಹಾಚಾರ್ಯರ ಪರಿಚಯವಾಗಲು ಸಾಧ್ಯವಾಯಿತು. ಪು.ತಿ.ನ. ರವರನ್ನು ನಾನು ಮೊದಲ ಬಾರಿಗೆ ಭೇಟಿ ಮಾಡಿದ್ದು ಪು.ತಿ.ಕೃಷ್ಣಅಯ್ಯಂಗಾರರ ಮನೆಯಲ್ಲೇ. ಆಗ ಅವರು ನನ್ನ ಪೂರ್ವಾಪರ ವಿಚಾರಿಸಿ, ನಾನು ಮೇಲುಕೋಟೆಗೆ ಬಂದ ಕಾರಣವನ್ನು ವಿಚಾರಿಸಿ ನನ್ನ ಹಿನ್ನಲೆ ಮತ್ತು ಮನೋಭಾವವನ್ನು ತಿಳಿದಾದ ಮೇಲೆ ನನ್ನೊಂದಿಗೆ ಆಗಾಗ್ಗೆ ಮೇಲುಕೋಟೆಯ ಪುನರುತ್ಥಾನದ ಸಾಧ್ಯತೆಯನ್ನು ಕುರಿತು ಮಾತನಾಡುತ್ತಿದ್ದರು. ಮೇಲುಕೋಟೆಯ ಬಗ್ಗೆ

ಇದ್ದಂಥ ತಮ್ಮ ಅಪಾರ ಪ್ರೇಮವನ್ನು ತಿಳಿಸುತ್ತಿದ್ದರು. ಮುಂದೆ ಅವರು ಮೇಲುಕೋಟೆಗೆ ಬಂದಾಗಲೆಲ್ಲ ನನ್ನನ್ನು ಬರಹೇಳಕಳುಹಿಸುತ್ತಿದ್ದರು. ನನ್ನ ಯೋಗಕ್ಷೇಮ ಮತ್ತು ಕೆಲಸ ಕಾರ್ಯಗಳ ಬಗ್ಗೆ ವಿಚಾರಿಸುತ್ತಿದ್ದರು. ಆದರೆ ನಾನು ಸಾಹಿತಿಯಾಗಿರಲಿಲ್ಲವಾದ್ದರಿಂದ ಅವರೊಂದಿಗೆ ಸಾಹಿತ್ಯ ಕುರಿತು ಏನನ್ನೂ ಮಾತನಾಡಲಾರದವನಾಗಿದ್ದೆ. ಲೋಕಾರೂಢಿಯಾದ ಕೆಲವು ಮಾತುಗಳು, ಪ್ರಚಲಿತ ಕೆಲವು ರಾಜಕೀಯ ವಿಷಯಗಳಿಗೆ ಮಾತ್ರ ಅವರ-ನನ್ನ ಸಂಭಾಷಣೆ ಸೀಮಿತವಾಗಿರುತ್ತಿತ್ತು. ನನಗೆ ಅವರ ಅಪಾರ ಸಾಹಿತ್ಯಸಿಂಧುವಿನ ಒಂದು ಬಿಂದುವಿನ ಸ್ಪರ್ಶವೂ ಆಗಿರಲಿಲ್ಲ. ಹಾಗಾಗಿ ಅವರ ವ್ಯಕ್ತಿತ್ವದ ಮುಂದೆ ನಾನೊಬ್ಬ ಅಜ್ಞ ಯುವಕನಾಗಿದ್ದೆ.

ಆಗ ಚಂಪಿಯೆಂದೇ ಪ್ರಸಿದ್ಧರಾಗಿದ್ದ ಸಂಪತ್ಕುಮಾರ್ ಅವರೊಂದಿಗೆ ಕೊಳಗಳಿಗೆ ಈಜಲು ಮತ್ತು ಬಟ್ಟೆ ಒಗೆಯಲು ಹೋಗುತ್ತಿದ್ದೆ. ಚಂಪಿ ಹುಡುಗಾಟದ ಮಾತನಾಡುವ ಆದರೆ ತುಂಬ ಸ್ವಚ್ಛ ಮನಸ್ಸಿನ ವ್ಯಕ್ತಿ. ಊರಲ್ಲಿ ಯಾರದೇ ಮನೆಯಲ್ಲಿ ವಿಪತ್ತು ಉಂಟಾಗಿದ್ದರೆ ಅಲ್ಲಿ ಚಂಪಿ ಕಡ್ಡಾಯವಾಗಿ ಹಾಜರಿರುತ್ತಿದ್ದರು. ಏಕೆಂದರೆ ಚಂಪಿ ಬ್ರಹ್ಮಚಾರಿ. ಮನೆಯಲ್ಲಿ ವಯಸ್ಸಾದ ತಾಯಿ ಮಾತ್ರ ಇದ್ದರು. ಅವರು ಇದ್ದ ಕುಣಿಗಲ್ ಬೀದಿಯಲ್ಲಿಯ ಮನೆಯೋ ಯಾವಾಗಲೂ ಬೀಳುವ ಸ್ಥಿತಿಯಲ್ಲಿಯೇ ಇರುತ್ತಿತ್ತು. ಆದರೆ ದೇವರ ದಯೆ ಅದು ಬೀಳುತ್ತಿರಲಿಲ್ಲ. ಅದೇ ಮನೆಯಲ್ಲಿಯೇ ಚಂಪಿ ತಮ್ಮ ಅವಸಾನದವರೆಗೂ ಕಾಲಕಳೆದರು. ನಾನು ಹಲವಾರು ಬಾರಿ ಚಂಪಿಯವರ ಈ ಮನೆಗೆ ಭೇಟಿ ಕೊಟ್ಟಿದ್ದೆ. ಅವರ ತಾಯಿ ಇಳಿವಯಸ್ಸಿನಲ್ಲಿಯೂ ತುಂಬ ಚಟುವಟಿಕೆ ಯುಳ್ಳವರಾಗಿದ್ದರು. ನನಗೆ ಒಂದು ಲೋಟ ಬಿಸಿ ಕಾಫಿ ಕೊಡದೆ ಎಂದೂ ಹೋಗಗೊಡುತ್ತಿರಲಿಲ್ಲ. ಚಂಪಿ ಅತಿ ಬಡತನದಲ್ಲಿಯೇ ಹುಟ್ಟಿದ್ದರು. ಬಡತನದಲ್ಲಿಯೇ ಜೀವನ ಕಳೆದರು. ಬಡತನದಲ್ಲಿಯೇ ಅಸು ನೀಗಿದರು ಆದರೆ ತಮ್ಮ ಹುಡುಗಾಟದ ಮಾತುಗಳಿಂದ ತಮ್ಮ ಆಪತ್‌ಬಂಧುತ್ವದಿಂದ ಅವರು ಎಲ್ಲರಿಗೂ ಬೇಕಾಗಿದ್ದುಕೊಂಡೇ ತೀರಿಕೊಡರು. ಅವರು ತೀರಿಕೊಂಡಾಗ ಇಡೀ ಗ್ರಾಮವೇ ಕಣ್ಣೀರು ಹಾಕಿತು. ಅದು ಸಾಮಾನ್ಯನ ಬಗ್ಗೆ ಇದ್ದ ಅಸಾಮಾನ್ಯ ಅನುಕಂಪವಾಗಿತ್ತು.

(ಮುಂದುವರಿಯುವುದು)

ಸಹೃದಯರಿಂದ

ಆಗಸ್ಟ್ ಸಂಚಿಕೆಯ ನೆಹರುರವರ ಲೇಖನ ಚೆನ್ನಾಗಿ ಭಾಷಾಂತರವಾಗಿದೆ. ಪ್ರಸ್ತುತ ಹಾಗೂ ಸಮಯೋಚಿತ.

–ಕೆ.ಎಸ್. ಪಾರ್ಥಸಾರಥಿ
ಬೆಂಗಳೂರು

* * *

ತಮ್ಮ ಡೈಜೆಸ್ಟ್ ಚೆನ್ನಾಗಿ ಮೂಡಿಬರುತ್ತಿದೆ.

–ಆರ್. ಎಸ್. ಪಾಟೀಲ
ಗದಗ

* * *

ವಾಚಕಮಿತ್ರರಲ್ಲಿವಿನಂತಿ.

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಂದ ಪ್ರಸ್ತುತ ವಿಷಯಗಳಿಗೆ ಸಂಬಧಿಸಿದಂತೆ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿಕೊಡಲು ಆಸಕ್ತಿಯುಳ್ಳ ಸ್ನೇಹಿತರ ಸಹಾಯವನ್ನು ಜನಪದ ವಿಚಾರ ಬಯಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

–ಪ್ರಕಾಶಕರು

ಸಂತಾಪ

ನಿಟ್ಟೂರು ಶ್ರೀನಿವಾಸರಾವ್

ಕರ್ನಾಟಕ ಮತ್ತು ಬೆಂಗಳೂರು ನಗರದ ಸಾರ್ವಜನಿಕ ಜೀವನದ ಮೇಲೆ ತಮ್ಮದೇ ಆದ ಕತೃತ್ವ ಶಕ್ತಿಯಿಂದ ಪ್ರಭಾವವನ್ನು ಬೀರಿ, ಈಶಾವಾಶ್ಯ ಉಪನಿಷತ್ತಿನ 'ಇಹಲೋಕದಲ್ಲಿ ಕರ್ತವ್ಯ ಕರ್ಮ ಮಾಡುತ್ತಾ ಮಾಡುತ್ತಾ ನೂರುವರ್ಷ ಬದುಕಲು ಬಯಸಬೇಕು. ದೇಹಧಾರಿಯಾದವನಿಗೆ ಇದೇ ಮಾರ್ಗ. ಬೇರೆ ಯಾವ ಮಾರ್ಗವೂ ಇಲ್ಲ. ಹೀಗಿದ್ದರೆ ಮನುಷ್ಯನಿಗೆ ಕರ್ಮ ಅಂಟುವುದಿಲ್ಲ. ಫಲವಾಸನೆ ಇದ್ದರೆ ಅಂಟುತ್ತದೆ' ಎಂಬ ಆರ್ಷೇಯ ಮಾತಿನ ಭಾವಾರ್ಥದಂತೆ ನೂರೊಂದು ವರ್ಷ ಬದುಕಿ ನಮ್ಮನ್ನಗಲಿದ ನಿಟ್ಟೂರು ಶ್ರೀನಿವಾಸರಾಯರಿಗೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * *

ಶಂಕರ ಮೊಕಾಶಿ ಪುಣೇಕರ

ಕನ್ನಡದ ಹಿರಿಯಸಾಹಿತಿ ಶಂಕರ ಮೊಕಾಶಿ ಪುಣೇಕರ ೧೧-೦೮-೨೦೦೪ ರಂದು ನಿಧನರಾದರು. ಓರ್ವ ಶ್ರೇಷ್ಠ ಸಾಹಿತಿ ಮತ್ತು ಚಿಂತಕರನ್ನು ಕಳೆದುಕೊಂಡು ಕನ್ನಡ ಭಾಷೆ ಬಡವಾಗಿದೆ. ಪುಣೇಕರರ ನಿಧನಕ್ಕೆ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

* * *

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com